Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–46 | ನವೆಂಬರ್ 11–17, 2024 | ಪುಟ 16 | ರೂ.10/–
Volume-18 | Issue-46 | November 11-17, 2024 | Pages:16 | Price: 10/-

ಟ್ರಂಪ್ ಮತ್ತೆ ಅಧ್ಯಕ್ಷ:

ಅಮೆರಿಕನ್ನರು ಮಗನಿಗೆ ಮಣೆ ಹಾಕಿ ಮಗಳನ್ನು ಮನೆಗೆ ಕಳಿಸಿದ್ದು ಯಾಕೆ?





ವಕ್ಫ್ ಆಸ್ತಿ ವಿವಾದ: ಯಾಕಿಷ್ಟು ಗದ್ದಲ?

ಡಿಜಿಟಲ್ ವಂಚನೆಯ ಮೂರು ಮಂತ್ರಗಳು!

ಪ್ರತಿಭಟನೆಗಳು: ಈ ಇಬ್ಬಗೆಯ ನೀತಿಯ ಅರ್ಥವೇನು?

ಕೋಮುವಾದಿ ಭಾಷಣಗಳ ವಿರುದ್ಧ ಚುನಾವಣಾ ಆಯೋಗ ಕ್ರಮ ಕೈಗೊಳ್ಳಬೇಕು

–ಕೇಂದ್ರ ಸಮಿತಿ ಆಗ್ರಹ

ಜಾರ್ಖಂಡ್ ಚುನಾವಣಾ ಪ್ರಚಾರದಲ್ಲಿ ಪ್ರಧಾನಿ ಮತ್ತು ಗೃಹ ಸಚಿವರ ನೇತೃತ್ವದಲ್ಲಿ ಬಿಜೆಪಿ ನಾಯಕರು ಮಾಡುತ್ತಿರುವ ಅಪ್ಪಟ ಕೋಮುವಾದಿ ಭಾಷಣಗಳು ಮಾದರಿ ನೀತಿ ಸಂಹಿತೆ ಮತ್ತು ಎಲ್ಲಾ ರಾಜಕೀಯ ಪಕ್ಷಗಳಿಗೆ ಚುನಾವಣಾ ಆಯೋಗ ಹೊರಡಿಸಿದ ಮಾರ್ಗಸೂಚಿಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಪ್ರಧಾನಮಂತ್ರಿಯವರು ತಮ್ಮ ಭಾಷಣಗಳಲ್ಲಿ ನೇರವಾಗಿ ಮುಸ್ಲಿಂ ಸಮುದಾಯವನ್ನು ಗುರಿಯಾಗಿಸಿ ಸಮುದಾಯದ ಸದಸ್ಯರನ್ನು "ಘಸ್‌ಪೈಟಿಯಾ"ಗಳು (ನುಸುಳುಕೋರರು) ಎಂದು ನಿಂದಿಸಿದ್ದಾರೆ. ಅವರು ತಮ್ಮ ಕೋಮುವಾದಿ ಮತ್ತು ದ್ವೇಷ ತುಂಬಿದ ಭಾಷಣಗಳಲ್ಲಿ "ಆ ಜನರು ನಿಮ್ಮ (ಆದಿವಾಸಿಗಳ) ರೊಟ್ಟಿ ಮತ್ತು ನಿಮ್ಮ ಹೆಣ್ಣುಮಕ್ಕಳನ್ನು ಕಸಿದುಕೊಳ್ಳುತ್ತಿದ್ದಾರೆ" ಎಂಬ ಆರೋಪವನ್ನು ಮಾಡಿದ್ದಾರೆ. ಸಮುದಾಯಗಳ ನಡುವೆ ಬಿರುಕು ಮೂಡಿಸುವ ಮತ್ತು ಮತಗಳನ್ನು ಸೆಳೆಯುವ ಸ್ಪಷ್ಟ ಪ್ರಯತ್ನ ಇದರಲ್ಲಿ ಕಾಣುತ್ತಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆತಂಕ ವ್ಯಕ್ತಪಡಿಸಿದೆ. ಇಂತಹ ಭಾಷಣಗಳ ಬಗ್ಗೆ ಚುನಾವಣಾ ಆಯೋಗವು ಸ್ವಯಂಪ್ರೇರಿತವಾಗಿ ಗಮನಹರಿಸದಿರುವುದು ಖಂಡನೀಯ ಎಂದಿರುವ ಕೇಂದ್ರ ಸಮಿತಿ, ಇಂತಹ ಭಾಷಣಗಳನ್ನು ಮಾಡುವ ಪ್ರಧಾನಿ ಹಾಗೂ ಗೃಹ ಸಚಿವರು ಕಾನೂನನ್ನೂ ಮೀರಿದವರಿರಬಹುದೇ ಎಂದೆನಿಸುವಂತಿದೆ ಎನ್ನುತ್ತ ಕೋಮುವಾದಿ ಭಾಷಣ ಮಾಡುವ ಪ್ರಧಾನಿ, ಗೃಹ ಸಚಿವರು ಹಾಗೂ ಇತರ ಬಿಜೆಪಿ ನಾಯಕರಿಗೆ ನೋಟಿಸ್ ಜಾರಿ ಮಾಡಬೇಕು ಎಂದು ಆಗ್ರಹಿಸಿದೆ.



ಇವರಲ್ಲಿ ಅಸ್ಸಾಂನ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ಕೇಂದ್ರ ಸಚಿವ ಶಿವರಾಜ್ ಚೌಹಾಣ್ ಸೇರಿದ್ದಾರೆ ಎಂದು ನವದೆಹಲಿಯಲ್ಲಿ ನವಂಬರ್ 3ರಿಂದ 5 ರವರೆಗೆ ಸಭೆ ನಡೆಸಿದ ನಂತರ ನೀಡಿರುವ ಹೇಳಿಕೆ ತಿಳಿಸುತ್ತದೆ.

ಸಿಪಿಐ(ಎಂ) ಕೇಂದ್ರ ಸಮಿತಿ ಡಿಜಿಟಲೀಕರಣದ ಹೆಸರಿನಲ್ಲಿ, ಗ್ರಾಮೀಣ ಬಡವರ ಹಕ್ಕುಗಳ ಮೇಲೆ ಸಂಪೂರ್ಣ ದಾಳಿ ನಡೆಯುತ್ತಿದೆ, ಇದು ಮನರೇಗ ಕಾರ್ಮಿಕರ ಘೋರ ಅವಸ್ಥೆಯಲ್ಲಿ ಕಾಣಬರುತ್ತಿದೆ ಎಂದೂ ಹೇಳಿದೆ.

ಅನಿಯಂತ್ರಣದಿಂದಾಗಿ ರಸಗೊಬ್ಬರಗಳ ಬೆಲೆಯ ಮೇಲಿನ ನಿಯಂತ್ರಣಗಳನ್ನು ತೆಗೆದಿರುವುದರಿಂದ ಅವುಗಳ ಬೆಲೆಗಳಲ್ಲಿ ಏರಿಕೆಯಾಗಿದ್ದು ರೈತರಿಗೆ ರಸಗೊಬ್ಬರಗಳ ದೊಡ್ಡ ಕೊರತೆ ಮತ್ತು ಬಿಕ್ಕಟ್ಟನ್ನು ಸೃಷ್ಟಿಸಿದೆ ಎಂದು ಸಿಪಿಐ(ಎಂ) ಖೇದ ವ್ಯಕ್ತಪಡಿಸಿದೆ.

ಸಿಪಿಐ(ಎಂ) ಕೇಂದ್ರ ಸಮಿತಿಯ ಹೇಳಿಕೆಯ ಇತರ ಅಂಶಗಳನ್ನು ಈ ಮುಂದೆ ಕೊಡಲಾಗಿದೆ.

ಮಹಾರಾಷ್ಟ್ರ ಮತ್ತು ಜಾರ್ಖಂಡ್‌ನಲ್ಲಿ ವಿಧಾನಸಭೆ ಚುನಾವಣೆ

ಮಹಾರಾಷ್ಟ್ರದಲ್ಲಿ, ಮಹಾ ವಿಕಾಸ್ ಅಘಾಡಿಯೊಂದಿಗೆ ಸೀಟು ಹಂಚಿಕೆಯ ಭಾಗವಾಗಿ ಸಿಪಿಐ(ಎಂ) ಎರಡು ಸ್ಥಾನಗಳಲ್ಲಿ ಕಣದಲ್ಲಿದೆ. ಇವೆರಡೂ ಬುಡಕಟ್ಟು ಸ್ಥಾನಗಳು: ಥಾಣೆ–ಪಾಲ್ಘರ್ ಜಿಲ್ಲೆಯ ದಹಾಣು (ಎಸ್‌ಟಿ)ನಲ್ಲಿ ಪ್ರಸ್ತುತ ಶಾಸಕ ವಿನೋದ್ ನಿಕೋಲ್ ಅಭ್ಯರ್ಥಿ. ಎರಡನೇ ಸ್ಥಾನವು ನಾಸಿಕ್ ಜಿಲ್ಲೆಯ ಕಲ್ವಾನ್ (ಎಸ್‌ಟಿ) ಕ್ಷೇತ್ರದ ಅಭ್ಯರ್ಥಿಯಾಗಿ ಐದು ಬಾರಿ ಶಾಸಕರಾಗಿದ್ದ, ಮತ್ತು ಕಳೆದ ಚುನಾವಣೆಯಲ್ಲಿ ಎರಡನೇ ಸ್ಥಾನದಲ್ಲಿದ್ದ ಜೆ.ಪಿ.ಗವಿತ್ ಅವರು ಸ್ಪರ್ಧಿಸಿದ್ದಾರೆ. ಇವುಗಳ ಜೊತೆಗೆ ಮೂರನೆಯದಾಗಿ, ಸೊಲ್ಲಾಪುರ ನಗರ ಕೇಂದ್ರ ಕ್ಷೇತ್ರದಲ್ಲಿ ಸೌಹಾರ್ದ ಸ್ಪರ್ಧೆಯ ನೆಲೆಯಲ್ಲಿ ಸಿಪಿಐ(ಎಂ) ಕಣದಲ್ಲಿದೆ, ಇಲ್ಲಿ ಅಭ್ಯರ್ಥಿ ಹಿರಿಯ ನಾಯಕ ಮತ್ತು ಮೂರು ಬಾರಿ ಶಾಸಕರಾಗಿದ್ದ ನರಸಯ್ಯ ಆದಂ.

ಜಾರ್ಖಂಡ್‌ನಲ್ಲಿ, ಇಂಡಿಯ ಬಣವನ್ನು ಮುನ್ನಡೆಸುತ್ತಿರುವ ಜೆಎಂಎಂನಿಂದ ಸಿಪಿಐ(ಎಂ) ಜೊತೆಗೆ ಮಾತುಕತೆಗೆ ಯಾವುದೇ ಉಪಕ್ರಮವಿಲ್ಲದ್ದರಿಂದ, ಐದು ಎಸ್‌ಟಿ ಸ್ಥಾನಗಳು ಮತ್ತು ಒಂದು ಎಸ್‌ಸಿ ಸ್ಥಾನವನ್ನು ಒಳಗೊಂಡಂತೆ ರಾಜ್ಯದಲ್ಲಿ ಒಂಬತ್ತು ಸ್ಥಾನಗಳಲ್ಲಿ ಹೋರಾಡಲು ಪಕ್ಷವು ನಿರ್ಧರಿಸಿದೆ. ಇತರ ಸ್ಥಾನಗಳಲ್ಲಿ, ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳನ್ನು ಸೋಲಿಸುವಲ್ಲಿ ಉತ್ತಮ ಸ್ಥಾನದಲ್ಲಿರುವ ಅಭ್ಯರ್ಥಿಯನ್ನು ಪಕ್ಷವು ಬೆಂಬಲಿಸುವುದಾಗಿ ಕೇಂದ್ರ ಸಮಿತಿ ನಿರ್ಧರಿಸಿದೆ.

ಮನರೇಗ ಕಾರ್ಮಿಕರ ಹಕ್ಕುಗಳ ಮೇಲೆ ದಾಳಿ

ಡಿಜಿಟಲೀಕರಣದ ಹೆಸರಿನಲ್ಲಿ, ಗ್ರಾಮೀಣ ಬಡವರ ಹಕ್ಕುಗಳ ಮೇಲೆ ಸಂಪೂರ್ಣ ದಾಳಿ ನಡೆಯುತ್ತಿದೆ. ಇದು ಮನರೇಗ ಕಾರ್ಮಿಕರ ಘೋರ ಅವಸ್ಥೆಯಲ್ಲಿ ಕಾಣಬರುತ್ತಿದೆ. ಇತ್ತೀಚಿನ ಒಂದು ವಿಸ್ತೃತ ಅಧ್ಯಯನವು ಕಳೆದ ಎರಡು ವರ್ಷಗಳಲ್ಲಿ ಈ ಯೋಜನೆಯ ಸುಮಾರು ಎಂಟು ಕೋಟಿಯಷ್ಟು ನೋಂದಾಯಿತ ಕಾರ್ಮಿಕರ ನೋಂದಣಿಯನ್ನು ರದ್ದುಪಡಿಸಲಾಗಿದೆ ಮತ್ತು ಕೆಲಸದ ಪ್ರಯೋಜನಗಳನ್ನು ನಿರಾಕರಿಸಲಾಗಿದೆ ಎಂದು ತೋರಿಸಿದೆ. ಇದು ಈ ಕಾನೂನಿನ ಉಲ್ಲಂಘನೆಯಾಗಿದೆ. ಈ ವರ್ಷದ ಬಜೆಟ್ ಹಂಚಿಕೆಗಳಲ್ಲಿ, ಮನರೇಗಕ್ಕಾಗಿ ಹಂಚಿಕೆ ಜಿಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ತೀವ್ರವಾಗಿ ಕಡಿತಗೊಂಡಿದೆ. ಬಜೆಟ್ ಹಂಚಿಕೆಗಳಲ್ಲಿನ ಕಡಿತದೊಂದಿಗೆ ಈ ತಂತ್ರಜ್ಞಾನ–ಕೇಂದ್ರಿತ ನಿಲುವು ಸೇರಿಕೊಂಡಿರುವುದು ಗ್ರಾಮೀಣ ಬಡ ಕುಟುಂಬಗಳಿಗೆ ವರ್ಷಕ್ಕೆ 100 ದಿನಗಳ ಕೆಲಸದ ಖಾತರಿಯ ಕಾನೂನು ಹಕ್ಕುಗಳ ಮೇಲಿನ ಆಕ್ರಮಣವಲ್ಲದೆ ಬೇರೇನೂ ಅಲ್ಲ. ಈ ವರ್ಷದ ಆರಂಭದಲ್ಲಿ ಸಂಸತ್ತಿನ ಸ್ಥಾಯಿ ಸಮಿತಿಯು ಕೆಲಸದ ದಿನಗಳನ್ನು ವರ್ಷಕ್ಕೆ ಕನಿಷ್ಠ 150 ದಿನಗಳಿಗೆ ಹೆಚ್ಚಿಸಲು ಮತ್ತು ಬಜೆಟ್ ಹಂಚಿಕೆಗಳಲ್ಲಿ ಹೆಚ್ಚಳವನ್ನು ಶಿಫಾರಸು ಮಾಡಿತ್ತು. ಕೇಂದ್ರ ಸರ್ಕಾರ ಈ ಶಿಫಾರಸುಗಳನ್ನು ಜಾರಿಗೊಳಿಸಬೇಕು.

ರಸಗೊಬ್ಬರ ಕೊರತೆ

ಹಿಂಗಾರು ಋತುವಿಗೆ ಡಿಎಪಿಯ ಸಾಕಷ್ಟು ಆರಂಭಿಕ ದಾಸ್ತಾನುಗಳನ್ನು ಹೊಂದಿರುವಂತೆ ಮಾಡುವ ಯೋಜನೆಯಲ್ಲಿನ ಸಂಪೂರ್ಣ ವೈಫಲ್ಯವು ರೈತರಿಗೆ ಒಂದು ಬೃಹತ್ ಕೊರತೆ ಮತ್ತು ಬಿಕ್ಕಟ್ಟನ್ನು ಸೃಷ್ಟಿಸಿದೆ. 2023ರಲ್ಲಿ ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ 34.5 ಲಕ್ಷ ಟನ್‌ಗಳಷ್ಟು ಆಮದು ಮಾಡಿಕೊಂಡಿದ್ದರೆ, ಈ ವರ್ಷ ಅದೇ ಅವಧಿಯಲ್ಲಿ ಕೇವಲ 19.7 ಲಕ್ಷ ಟನ್‌ಗಳನ್ನು ಆಮದು ಮಾಡಿಕೊಳ್ಳಲಾಗಿದೆ. ದೇಶೀಯ ಉತ್ಪಾದನೆಯಲ್ಲೂ ಕುಸಿತ ಕಂಡುಬಂದಿದೆ. ಅಕ್ಟೋಬರ್ 1, 2024 ರಂದು ಶಿಫಾರಸು ಮಾಡಲಾದ 27–30 ಲಕ್ಷ ಟನ್‌ಗಳಿಗೆ ಪ್ರತಿಯಾಗಿ ಕೇವಲ 15–16 ಲಕ್ಷ ಟನ್‌ಗಳು ದಾಸ್ತಾನು ಇದ್ದವು; ಆದರೆ ಅಕ್ಟೋಬರ್ ಮಧ್ಯದಿಂದ ಡಿಸೆಂಬರ್ ಮಧ್ಯದವರೆಗೆ ಬೇಡಿಕೆ 60 ಲಕ್ಷ ಟನ್‌ಗಳಷ್ಟು ಎಂದು ಅಂದಾಜು ಮಾಡಲಾಗಿದೆ.

ರೈತರು ಡಿಎಪಿ ಮತ್ತು ಯೂರಿಯಾ, ಎಂಒಪಿ ಇತ್ಯಾದಿಗಳ ಕೊರತೆಯಿಂದಲೂ ಬಳಲುತ್ತಿದ್ದಾರೆ ಮತ್ತು ಅವರು ಡಿಎಪಿಯ ಸರ್ಕಾರ ನಿಗದಿಪಡಿಸಿದ ಎಂಆರ್‌ಪಿಗಿಂತ ಸುಮಾರು ರೂ.300–ರೂ.400 ಹೆಚ್ಚು ಅಂದರೆ 50 ಕೆಜಿ ಚೀಲಕ್ಕೆ ರೂ.1,350 ಪಾವತಿಸಬೇಕಾಗುತ್ತದೆ ಎಂದು ವರದಿಯಾಗಿದೆ. ಈ ವೈಫಲ್ಯವನ್ನು ಒಪ್ಪಿಕೊಳ್ಳುವ ಮತ್ತು ತುರ್ತು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳುವ ಬದಲು, ಸರ್ಕಾರವು ಇಂತಹ ಸಮಸ್ಯೆಯೇ ಇಲ್ಲ ಎಂಬ ನಿರಾಕರಣೆ ನಿಲುವಿನಲ್ಲಿದೆ ಮತ್ತು ನ್ಯಾನೊ–ಯೂರಿಯಾ ಮತ್ತು ನ್ಯಾನೊ–ಡಿಎಪಿ ಕುರಿತು ಪ್ರಚಾರದಲ್ಲಿ ತೊಡಗಿದೆ, ಆದರೆ ನಿಜವಾಗಿಯೂ ಅದು ಎಷ್ಟು ಪರಿಣಾಮಕಾರಿ ಎಂಬುದು ಪ್ರಶ್ನಾರ್ಹವಾಗಿದೆ.

ಭಾರತಕ್ಕೆ ಯೂರಿಯಾ ಮತ್ತು ಡಿಎಪಿಯ ದೇಶೀಯ ಉತ್ಪಾದನೆಯ ವಿಸ್ತರಣೆಯ ಅಗತ್ಯವಿದೆ. ಮುಖ್ಯ ಸಮಸ್ಯೆ ಎಂದರೆ ನಿಯಂತ್ರಣಗಳನ್ನು ತೆಗೆದಿರುವುದರಿಂದಾಗಿ ರಸಗೊಬ್ಬರಗಳ ಬೆಲೆ ಏರಿಕೆಯಾಗಿದ್ದು, ಲಾಗುವಾಡುಗಳ ಬೆಲೆಗಳನ್ನು ನಿರ್ವಹಿಸುವುದು ನಿರ್ಣಾಯಕವಾಗಿದೆ. ಪ್ರಸ್ತುತ ಯೂರಿಯಾ ಬೆಲೆಗಳನ್ನು ಮಾತ್ರ ನಿರ್ವಹಿಸಲಾಗುತ್ತಿದೆ, ಇದರಿಂದಾಗಿ ಇತರ ರಸಗೊಬ್ಬರಗಳಿಗೆ ಹೋಲಿಸಿದರೆ ಯೂರಿಯಾದ ಬಳಕೆ ಬಹಳ ಹೆಚ್ಚುವಂತಾಗಿದೆ.

ಪಕ್ಷದ ಮಹಾಧಿವೇಶನದ ಸಿದ್ಧತೆ

ಏಪ್ರಿಲ್ 2022 ರಲ್ಲಿ ನಡೆದ ಸಿಪಿಐ(ಎಂ)ನ ಹಿಂದಿನ ಮಹಾಧಿವೇಶನದಲ್ಲಿ ರೂಪಿಸಲಾದ ರಾಜಕೀಯ–ಕಾರ್ಯತಂತ್ರದ ನಿಲುವಿನ ಅನುಷ್ಠಾನದ ಕುರಿತು ಕೇಂದ್ರ ಸಮಿತಿಯು ಚರ್ಚಿಸಿ ಒಂದು ರಾಜಕೀಯ ವಿಮರ್ಶಾ ವರದಿಯನ್ನು ಅಂಗೀಕರಿಸಿತು. ಇದು ಮಧುರೈನಲ್ಲಿ ಏಪ್ರಿಲ್ 2 ರಿಂದ 6, 2025 ರವರೆಗೆ ನಡೆಯಲಿರುವ 24ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯಕ್ಕೆ ಆಧಾರವಾಗಿದೆ. ಮುಂಬರುವ ರಾಜ್ಯ ಸಮ್ಮೇಳನಗಳಿಂದ ಚುನಾಯಿತರಾಗಲಿರುವ ಪಕ್ಷದ ಮಹಾಧಿವೇಶನದ ಪ್ರತಿನಿಧಿಗಳ ರಾಜ್ಯವಾರು ಕೋಟಾವನ್ನು ಕೇಂದ್ರ ಸಮಿತಿಯು ಅಂತಿಮಗೊಳಿಸಿದೆ.

ಸಿಪಿಐ(ಎಂ)ನ 24ನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ರಾಜ್ಯ ಸಮ್ಮೇಳನಗಳ ವೇಳಾಪಟ್ಟಿ

	ರಾಜ್ಯ	ದಿನಾಂಕ	ಸ್ಥಳ
1	ಮಣಿಪುರ	ನವೆಂಬರ್ 15,2024	ಇಂಫಾಲ್
2	ದೆಹಲಿ	ನವೆಂಬರ್ 22–24	ದೆಹಲಿ
3	ಹಿಮಾಚಲ ಪ್ರದೇಶ	ನವೆಂಬರ್ 28–30	ಶಿಮ್ಲಾ
4	ಪುದುಚೇರಿ	ನವೆಂಬರ್ 30– ಡಿ. 01	ಪುದುಚೇರಿ
5	ಪಂಜಾಬ್	ಡಿಸೆಂಬರ್ 09–10	ಜಲಂಧರ್
6	ರಾಜಸ್ಥಾನ	ಡಿಸೆಂಬರ್ 13–15	ಹನುಮಾನ್‌ಗಢ
7	ಗುಜರಾತ್	ಡಿಸೆಂಬರ್ 14–15	ಉಪ್ಲೆಟಾ
8	ಛತ್ತೀಸ್‌ಗಢ	ಡಿಸೆಂಬರ್ 15–16	ಬಿಶ್ರಾಮ್‌ಪುರ (ಸೂರಜ್‌ಪುರ ಜಿಲ್ಲೆ)
9	ಗೋವಾ	ಡಿಸೆಂಬರ್ 15	
10	ಮಧ್ಯಪ್ರದೇಶ	ಡಿಸೆಂಬರ್ 15–17	ಮ್ಹೊವ್
11	ಒಡಿಶಾ	ಡಿಸೆಂಬರ್ 16–18	ಕಟಕ್
12	ಬಿಹಾರ	ಡಿಸೆಂಬರ್ 22–24	ದರ್ಭಾಂಗ
13	ಉತ್ತರಾಖಂಡ	ಡಿಸೆಂಬರ್ 22–24	ಕರಣಪ್ರಯಾಗ, (ಚಮೋಲಿ ಜಿಲ್ಲೆ)
14	ಅಂಡಮಾನ್ & ನಿಕೋಬಾರ್ ದ್ವೀಪಗಳು	ಡಿಸೆಂಬರ್ 28–29	ಪೋರ್ಟ್ ಬ್ಲೇರ್
15	ಉತ್ತರ ಪ್ರದೇಶ	ಡಿಸೆಂಬರ್ 29–31	ಬುಲಂದ್ ಶಹರ್
16	ಕರ್ನಾಟಕ	ಡಿಸೆಂಬರ್ 29–31	ತುಮಕೂರು
17	ತಮಿಳುನಾಡು	ಜನವರಿ 03–05, 2025	ವಿಲ್ಲುಪುರಂ
18	ಅಸ್ಸಾಂ	ಜನವರಿ 05–07	ಗುವಾಹಟಿ
19	ಜಾರ್ಖಂಡ್	ಜನವರಿ 10–12	
20	ಹರಿಯಾಣ	ಜನವರಿ 11–13	ಕೈತಾಲ್
21	ತೆಲಂಗಾಣ	ಜನವರಿ 26–28	ಸಂಗಾರೆಡ್ಡಿ
22	ತ್ರಿಪುರ	ಜನವರಿ 29–31	ಅಗರ್ತಲಾ
23	ಆಂಧ್ರಪ್ರದೇಶ	ಫೆಬ್ರವರಿ 01–03	ನೆಲ್ಲೂರು
24	ಜಮ್ಮು&ಕಾಶ್ಮೀರ	ಫೆಬ್ರವರಿ 17–18	ಜಮ್ಮು
25	ಪಶ್ಚಿಮ ಬಂಗಾಳ	ಫೆಬ್ರವರಿ 22–25	ದಂಕುನಿ (ಹೂಗ್ಲಿ ಜಿಲ್ಲೆ)
26	ಮಹಾರಾಷ್ಟ್ರ	ಫೆ.27–ಮಾರ್ಚ್ 1	ಸೆಲು (ಪರ್ಭಾನಿ ಜಿಲ್ಲೆ)
27	ಕೇರಳ	ಮಾರ್ಚ್ 06–09	ಕೊಲ್ಲಂ

ಪ್ರತಿಭಟನೆಗಳು: ಸರ್ಕಾರದ ಇಬ್ಬಗೆಯ ನೀತಿ

ಸಂಪಾದಕೀಯ

ಪ್ಯಾಲೆಸ್ಟೈನ್ ಮತ್ತು ಇಸ್ರೇಲ್ ಗಳ ನಡುವೆ ನಡೆಯುತ್ತಿರುವ ಯುದ್ಧವನ್ನು ಕೊನೆಗಾಣಿಸಲು ಆಗ್ರಹಿಸಿ ಶಾಂತಿ ನೆಲೆಸಲು ಹಾಗೂ ಇಸ್ರೇಲ್ ಸಾರಿರುವ ಅಮಾನುಷ ಯುದ್ಧದಿಂದ ಅಪಾರ ಹಾನಿಗೀಡಾದ ಪಾಲೆಸ್ತೀನ್ ಪರ ಸಾರ್ವಜನಿಕ ಶಾಂತಿಯುತ ಮತಪ್ರದರ್ಶನ ನಡೆಸಿದವರ ಮೇಲೆ ಮಂಗಳೂರಿನ ಪೊಲೀಸರು ಮೊಕದ್ದಮೆ ಹೂಡಿರುವುದು ಖಂಡನೀಯ. ಜನಾಂಗೀಯ ದ್ವೇಷ ಸಾಧನೆಗೆ ಮತ್ತು ಪ್ಯಾಲೆಸ್ತೀನಿಯನ್ನರ ತಾಯ್ನಾಡನ್ನು ಹಂತ ಹಂತವಾಗಿ ಅಕ್ರಮವಾಗಿ ಕಬಳಿಸುತ್ತಿರುವ ಇಸ್ರೇಲ್ ತನ್ನ ಧಾಳಿಯಲ್ಲಿ ಲಕ್ಷಾಂತರ ಜನಸಾಮಾನ್ಯರನ್ನು, ಮುಖ್ಯವಾಗಿ ಅತ್ಯಧಿಕ ಮಕ್ಕಳು, ಮಹಿಳೆಯರನ್ನು ನಿರ್ದಯವಾಗಿ ಕಗ್ಗೊಲೆ ಮಾಡುತ್ತಿದೆ. ಭಾರತ ದೇಶ, ಭಾರತದ ಜನ ಪ್ಯಾಲೆಸ್ಟೈನ್ ಜನರ ತಾಯ್ನಾಡ ರಕ್ಷಣೆಗೆ ನಡೆಸಿದ ಹೋರಾಟಕ್ಕೆ ಸದಾ ಬೆಂಬಲವಾಗಿ ನಿಂತಿದ್ದಾರೆ. ಹಲವಾರು ದಶಕಗಳಿಂದಲೂ ಅಲಿಪ್ತ ವಿದೇಶಾಂಗ ನೀತಿಯನ್ನು ಭಾರತ ಅನುಸರಿಸುತ್ತಿತ್ತು. ಆದರೆ ಸಮಾಜವಾದಿ ಸೋವಿಯೆತ್ ರಶಿಯಾ ದೇಶದ ಕುಸಿತ, ಜಾಗತಿಕ ಶಕ್ತಿಗಳ ಬಲಾಬಲದಲ್ಲಾದ ಬದಲಾವಣೆಗಳು, ನಂತರದ ಜಾಗತೀಕರಣ, ಉದಾರೀಕರಣಕ್ಕೆ ತೆರೆದುಕೊಂಡ ನಂತರ ಆ ನೀತಿಯ ಅನುಸರಣೆಯಲ್ಲಿ ಸಡಿಲವಾಗುತ್ತಾ, ಈ ಇತ್ತೀಚಿನ ದಶಕಗಳಲ್ಲಿ ಬಿಜೆಪಿ ನೇತೃತ್ವದ ಸರಕಾರ ಇಸ್ರೇಲ್ ಜೊತೆ ಸಂಬಂಧಗಳನ್ನು ಗಾಢ ಗೊಳಿಸಿ, ಅಮೇರಿಕಾ ಪರ ಮತ್ತಷ್ಟೂ ರಕ್ಷಣಾ ಒಪ್ಪಂದಗಳನ್ನು ಮಾಡಿಕೊಂಡ ನಂತರ ಅದರ ನಿಲುವು, ವರ್ತನೆಗಳು ಬದಲಾಗಿವೆ.

ಬಾಯಲ್ಲಿ ಆಗೀಗ ಪ್ಯಾಲೆಸ್ಟೈನ್ ಪರ ಮಾತನಾಡಿದರೂ ಕೃತಿಯಲ್ಲಿ ತದ್ವಿರುದ್ದವಾಗಿ ಎನ್.ಡಿ.ಎ. ಸರ್ಕಾರ ವರ್ತಿಸುತ್ತಿದೆ. ಆದರೆ ಕಾಂಗ್ರೆಸ್ ಪಕ್ಷ ಈಗಲೂ ಪ್ಯಾಲೆಸ್ಟೈನ್ ಜನರ ಹೋರಾಟವನ್ನು ಬೆಂಬಲಿಸಿದೆ. ವಸ್ತುಸ್ಥಿತಿ ಹೀಗಿರುವಾಗ ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರಕಾರ ಯುದ್ಧ ವಿರೋಧಿಸಿದ ಶಾಂತಿ ಮತಪ್ರದರ್ಶನಗಳನ್ನು, ಪ್ಯಾಲೆಸ್ಟೈನ್ ಪರ ಮಾನವೀಯ ಬೆಂಬಲ ಕೋರುವುದನ್ನೂ ಅಪರಾಧವನ್ನಾಗಿ ನೋಡುತ್ತಿರುವುದು ಅತ್ಯಂತ ವಿಪರ್ಯಾಸ.

ಇಂತಹ ಪ್ರತಿಭಟನೆಗಳಿಗೆ ಅವಕಾಶ ನೀಡಕೂಡದೆಂದು, ಅದರಿಂದ ಶಾಂತಿ ಕದಡಿ, ಕೋಮು ಗಲಭೆ ಆಗಬಹುದು ಎಂಬ ಎಚ್ಚರಿಕೆಯನ್ನು ಭಾರತದ ಸರ್ಕಾರ ನೀಡಿದೆ ಎಂದು ಕರ್ನಾಟಕದ ಪೊಲೀಸ್ ಇಲಾಖೆ ಹೇಳುತ್ತಿದೆ. ಅದೇ ಸಬೂಬನ್ನು ನೀಡಿ ಮಂಗಳೂರಿನಲ್ಲಿ ಧ್ವನಿವರ್ಧಕ ಬಳಸಲು ಕೋರಿದ ಪರವಾನಗಿಯನ್ನು ಜಿಲ್ಲಾಡಳಿತ ನಿರಾಕರಿಸಿದೆ. ಮಾತ್ರವಲ್ಲ, ಧ್ವನಿವರ್ಧಕ ಇಲ್ಲದೆಯೇ ಶಾಂತ ರೀತಿಯ ಪ್ರತಿಭಟನೆಯನ್ನು ಪ್ರತಿಭಟನೆಗೆ ಮೀಸಲಿಟ್ಟ ಜಾಗದಲ್ಲಿ ಮಾಡಿದಾಗಲೂ ಸಿಪಿಐ(ಎಂ) ಮತ್ತು ಎಡ ಪಕ್ಷಗಳ ಕಾರ್ಯಕರ್ತರ ಮೇಲೆ ಕೇಸ್ ಹಾಕಲಾಗಿದೆ. ಇಲ್ಲಿ ಯಾರನ್ನೂ ಪ್ರಚೋದಿಸಿಲ್ಲ, ಆಕ್ರಮಣಕಾರಿ ಮಾತುಗಳನಾಡದೇ ಮಾನವಿಯತೆ ಉಳಿಸುವ ಆಗ್ರಹವನ್ನು ನಾಗರೀಕರು ಮಾಡಿದ್ದಾರೆ. ಆದರೆ ಪೊಲೀಸರು ಇದನ್ನು ಕಾನೂನು ಉಲ್ಲಂಘನೆ ಎಂದು ಪರಿಗಣಿಸಿದ್ದು ಹಾಸ್ಯಾಸ್ಪದ. ತಾವು ಕೆಂದ್ರ ಹೇಳಿದಂತೆ ಕೇಳುತ್ತೇವೆ ಎನ್ನುವ ರಾಜ್ಯ ಸರ್ಕಾರ ಕಾನೂನು ಮತ್ತು ಸುವ್ಯವಸ್ಥೆ ರಾಜ್ಯ ಸರ್ಕಾರದ ಜವಾಬ್ದಾರಿ ಯಾಗಿರುತ್ತದೆ ಎನ್ನುವುದನ್ನು ಮರೆತಂತಿದೆ. ಅಥವಾ ಕೇಂದ್ರದ ಸೂಚನೆಯನ್ನು ನೆಪವಾಗಿರಿಸಿ ದಾಳಿ ನಡೆಸುತ್ತಿರುವ ಇಸ್ರೇಲ್ ಗೆ ಮತ್ತು ಬೆಂಬಲಿಸುತ್ತಿರುವ ಅಮೆರಿಕ ಮತ್ತದರ ನ್ಯಾಟೋ ಕೂಟಕ್ಕೆ ವ್ಯತಿರಿಕ್ತವಾಗದಂತೆ ಹಿತಾಸಕ್ತಿ ಕಾಪಾಡಿಕೊಳ್ಳುವ ಇರಾದೆಯು ಇದ್ದಂತಿದೆ.

ವಿಚಿತ್ರವೆಂದರೆ, ಪರವಾನಿಗೆ ಇಲ್ಲದೆ ಇದೇ ಕರಾವಳಿಯಲ್ಲಿ ಕೋಮು ಪ್ರಚೋದನೆ ನಡೆಸಿರುವ ಹಲವು ಕಾರ್ಯಕ್ರಮಗಳು, ನಡೆದಿರುವ ಸಮಾರಂಭಗಳು ಈ ಅವಧಿಯಲ್ಲಿ ನಡೆದರೂ ಕೂಡ ದಕ್ಷಿಣ ಕನ್ನಡ ಮತ್ತು ಉಡುಪಿಯ ಪೊಲೀಸ್ ಇಲಾಖೆ–ಜಿಲ್ಲಾಡಳಿತ ಯಾವುದೇ ಕ್ರಮಗಳನ್ನು ಜರುಗಿಸದೆ ಪೂರ್ಣ ಅವಕಾಶ ಮಾಡಿಕೊಟ್ಟಿರುವ ವರದಿಗಳು ಇವೆ.

ಉಡುಪಿಯಲ್ಲಿ ವಕ್ಫ್ ವಿಚಾರವನ್ನು ವಿವಾದವಾಗಿಸಿ ಪ್ರತಿಭಟಿಸಿದ ಬಿಜೆಪಿ ಯು ನಿಗದಿತ ಸ್ಥಳವನ್ನು ಬಿಟ್ಟು ನೇರವಾಗಿ ಜಿಲ್ಲಾಧಿಕಾರಿಗಳ ಕಚೇರಿಯ ಒಳಗೆ ನುಗ್ಗಿ ಪ್ರತಿಭಟಿಸಿದರೂ ಅವರ ಮೇಲೆ ಯಾವುದೇ ಕ್ರಮಗಳು ಜರುಗಲಿಲ್ಲ. ಶಾಸಕ ಯಶ್ ಪಾಲ್ ಸುವರ್ಣ ರವರು ತಮ್ಮ ಬೆಂಬಲಿಗರೊಂದಿಗೆ ಜಿಲ್ಲಾ ಕಚೇರಿ ನುಗ್ಗಿ ಮುಖ್ಯಮಂತ್ರಿ ಅವರನ್ನು, ಮುಸ್ಲಿಮರನ್ನು ಜಾತಿ ನಿಂದನೆ ಮಾಡಿ ಅವಹೇಳನಕಾರಿಯಾಗಿ ಬಾಯಿಗೆ ಬಂದಂತೆ ಬೈದಿರುವುದು, ಕೋಮು ಪ್ರಚೋದಕವಾಗಿ ಮಾತನಾಡಿರುವುದು ವರದಿಯಾಗಿದೆ. ಸುರತ್ಕಲ್ ನಲ್ಲಿ ಶಾಸಕ ಭರತ್ ಶೆಟ್ಟಿ ಯವರು ಯಾವುದೇ ಪರವಾನಿಗೆ ಇಲ್ಲದೆ ರಸ್ತೆಯನ್ನ ಬಂದ್ ಮಾಡಿ ಎರಡು ದಿನಗಳ ಕಾಲ ಸಮಾರಂಭ ನಡೆಸಿ ಅಸ್ತವ್ಯಸ್ತಗೊಳಿಸಿದರೂ ಅವರ ಮೇಲೆ ಯಾವುದೇ ಕ್ರಮ ಇಲ್ಲಿವರೆಗೂ ಜರುಗಿಲ್ಲ. ಅಂದರೆ ಕೋಮು ಪ್ರಚೋದನೆ ಮಾಡುವ, ಕಾನೂನು ಮುರಿಯುವ ಬಿಜೆಪಿಯವರ ಮೇಲೆ ಯಾವುದೇ ಕ್ರಮವನ್ನು ಈ ಕಾಂಗ್ರೆಸ್ ಸರ್ಕಾರದ ಇಲಾಖೆಗಳು ಕೈಗೊಳ್ಳುತ್ತಿಲ್ಲ ಎನ್ನುವುದು ವಿಚಿತ್ರ ಮತ್ತು ವಿಪರ್ಯಾಸವಾಗಿದೆ. ರಾಜ್ಯದಲ್ಲಿ ಅಧಿಕಾರದಲ್ಲಿರುವುದು ಸಂವಿಧಾನಾತ್ಮಕ ಕಾನೂನಾತ್ಮಕ ಆಡಳಿತವನ್ನು ನಡೆಸುವ ಸರಕಾರವೋ ಅಥವಾ ಕರಾವಳಿಯಲ್ಲಿ ಬಿಜೆಪಿ ಪಕ್ಷಕ್ಕೆ ಪೂರ್ಣ ಮಣಿದಿರುವ ಆಡಳಿತವೋ ಎನ್ನುವುದು ಸ್ಪಷ್ಟವಾಗಬೇಕು. ರಾಜ್ಯ ಸರ್ಕಾರಕ್ಕೆ ಶಾಂತಿಯನ್ನು ಕಾಪಾಡಬೇಕಾದ ಹೊಣೆಗಾರಿಕೆ ಇದೆ. ಆದರೆ ಶಾಂತಿ ಕದಡುವವರ ಮೇಲೆ ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಬದಲಾಗಿ ಅತ್ಯಂತ ಅಮಾನುಷವಾದ ಯುದ್ಧ ಕೊನೆಗೊಳ್ಳಬೇಕು ಎಂದು ಕೇಳುವವರ ಮೇಲೆ ದಾಖಲಿಸುವುದು ಮತ್ತು ಅನುಮತಿಯನ್ನು ನಿರಾಕರಿಸುವುದು ಏನನ್ನ ಸೂಚಿಸುತ್ತದೆ? ಇದು ಅತ್ಯಂತ ಖಂಡನೆಯಾಗಿದೆ.

ಕಳೆದ ಅಕ್ಟೋಬರ್ 2023 ರಿಂದ ಇದೇ ಅಕ್ಟೋಬರ್ 25, 2024ರ ವರೆಗೆ ಪ್ಯಾಲೆಸ್ತೀನ್ ಮೇಲಿನ ಯುದ್ಧ ಕೊನೆಗೊಳಿಸಿ ಶಾಂತಿ ನೆಲೆಸುವಂತೆ ನಾಗರಿಕರು ಒತ್ತಾಯಿಸಿದ ಸುಮಾರು 12 ಪ್ರಕರಣಗಳಲ್ಲಿ ಹೀಗೆ ಸರ್ಕಾರ ವರ್ತಿಸಿರುವ ವಿವರಗಳಿವೆ. ಕರ್ನಾಟಕ ಸರ್ಕಾರದ ಈ ನಡೆ ಖಂಡಿತಕ್ಕೂ ಒಪ್ಪುವಂತದ್ದಲ್ಲ. ಪ್ರತಿಯೊಬ್ಬ ಪ್ರಜೆಗೂ ಅತ್ಯಂತ ಶಾಂತಿಯುತವಾಗಿ ಪ್ರತಿಭಟನೆ ಮಾಡುವ, ಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಪ್ರಜಾಸತ್ತಾತ್ಮಕ ಸ್ವಾತಂತ್ರ್ಯ ಇದ್ದೇ ಇದೆ. ಇಸ್ರೇಲ್ ದೇಶಕ್ಕೆ ಬೆಂಬಲಿಸುವ ಅಮೆರಿಕ ದೇಶದ ಒಳಗಡೆ ಅದರ ನಾಗರಿಕರು ನಡೆಸುವ ವ್ಯಾಪಕ ಪ್ರತಿಭಟನೆಗಳಿಗೆ ಅವಕಾಶವನ್ನು ಕೊಡಲಾಗಿದೆ. ಇಲ್ಲಿಯೂ ಅವಕಾಶವನ್ನು ಮಾಡಿಕೊಡುವ ಜವಾಬ್ದಾರಿ ನಾಗರಿಕ ಸರ್ಕಾರದ ಮೇಲಿರುತ್ತದೆ. ಆದರೆ ಈ ವಿಷಯದಲ್ಲಿ ರಾಜ್ಯ ಸರ್ಕಾರದ ವರ್ತನೆ ಖಂಡಿತಕ್ಕೂ ಒಪ್ಪುವಂತದ್ದದಲ್ಲ. ಬದಲಾಗಿ, ಅದು ಬಿಜೆಪಿ ಮತ್ತು ಇಸ್ರೇಲ್ ಪರವಾದ ಶಕ್ತಿಗಳ ಆಸಕ್ತಿಗಳಿಗೆ ಸಹಾಯಕವಾಗುವ ವರ್ತನೆ ತೋರುತ್ತಿರುವುದು ನಿಜಕ್ಕೂ ಸರಿಯಲ್ಲ. ಈ ನೀತಿಯನ್ನು ಸರ್ಕಾರ ಬದಲಿಸಿಕೊಳ್ಳಬೇಕು ಮತ್ತು ಈ ವಿಷಯದಲ್ಲಿ ಈಗಾಗಲೇ ಹೂಡಲಾಗಿರುವ ಎಲ್ಲಾ ಮೊಕದ್ದಮೆಗಳನ್ನು ಹಿಂತೆಗೆದುಕೊಂಡು ನಾಗರಿಕ ಸ್ವಾತಂತ್ರ್ಯವನ್ನು ರಕ್ಷಿಸಬೇಕಾದದ್ದು ಸರ್ಕಾರದ ಕರ್ತವ್ಯ. ಶಾಂತ ರೀತಿಯ ಪ್ರತಿಭಟನೆಗಳ ದಮನದ ಇಬ್ಬಗೆಯ ನೀತಿಯನ್ನು ಕೂಡಲೇ ಕೈಬಿಡಬೇಕು. ●

ವಿಧಾನ ಸಭಾ ಉಪಚುನಾವಣೆ ಗಳಲ್ಲಿ ಪ್ರಜಾಪ್ರಭುತ್ವ ವಿರೋದಿ ಹಾಗು ಕೋಮುವಾದಿ ಬಿಜೆಪಿ ಹಾಗು ಅದರ ಮಿತ್ರ ಜೆಡಿಎಸ್ ಪಕ್ಷಗಳನ್ನು ಸೋಲಿಸಲು ಸಿಪಿಐಎಂ ಕರೆ

ವಿಧಾನ ಸಭಾ ಉಪಚುನಾವಣೆಯಲ್ಲಿ ಪ್ರಜಾಪ್ರಭುತ್ವ ವಿರೋಧಿ ಹಾಗು ಕೋಮುವಾದಿ ಬಿಜೆಪಿ ಹಾಗು ಅದರ ಮಿತ್ರ ಜೆಡಿಎಸ್ ಪಕ್ಷಗಳನ್ನು ನಿರ್ಣಾಯಕವಾಗಿ ಸೋಲಿಸುವಂತೆ ಅಲ್ಲಿನ ಮತದಾರರಿಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿಯು ಕರೆ ನೀಡಿದೆ. ಈ ಪಕ್ಷಗಳು ಕೇಂದ್ರದಲ್ಲಿ ಅಧಿಕಾರದಲ್ಲಿದ್ದು ದುಡಿಯುವ ಜನರು ಹಾಗು ಎಲ್ಲ ನಾಗರೀಕರನ್ನು ತೀವ್ರ ಸಂಕಷ್ಠಕ್ಕೀಡು ಮಾಡುವ ಲೂಟಿಕೋರ ಕಾರ್ಪೋರೇಟ್ ಸಂಸ್ಥೆಗಳ ಪರವಾದ ಆರ್ಥಿಕ ನೀತಿಗಳನ್ನು ಅನುಸರಿಸುತ್ತಿವೆ. ಸದರಿ ಲೂಟಿಕೋರರ ಲೂಟಿಗೆ ವಿರುದ್ಧವಾದ ಹೋರಾಟವನ್ನು ಮಟ್ಟ ಹಾಕಲು ಹಾಗು ಪ್ರತಿರೋಧದ ಸ್ಥಿತಿ ಹತ್ತಿಕ್ಕಲು ಇವು ಒಂದೆಡೆ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ, ಮತ್ತು ಜನತೆ ಒಗ್ಗೂಡದಂತೆ ತಡೆಯಲು, ಪರಸ್ಪರರು ಹೊಡೆದಾಡಿಕೊಳ್ಳುವಂತಹ ವಿಭಜನಕಾರಿ ಕೋಮುವಾದಿ ದ್ವೇಶಕ್ಕೆ ನೆರವಾಗುತ್ತಿವೆ ಮತ್ತು ಮೌನ ಬೆಂಬಲ ನೀಡುತ್ತಿವೆ. ಭಾರತದ ಸಂವಿಧಾನ ವಿರೋಧಿಯಾದ ಇಂತಹ ನಡೆಗಳನ್ನು ತಡೆಯುವುದು ತುರ್ತು ಅಗತ್ಯವಾಗಿದೆ. ಹೀಗಾಗಿ, ಇವುಗಳ ಬೆಳವಣಿಗೆಯನ್ನು ತಡೆಯಲು ಇವುಗಳನ್ನು ಸೋಲಿಸುವುದು ಅಗತ್ಯವಾಗಿದೆ. ಇವುಗಳನ್ನು ಸೋಲಿಸಲು, ಸೋಲಿಸಲು ಶಕ್ತವಾದ ಕಾಂಗ್ರೆಸ್ ಪಕ್ಷ ಬಿಟ್ಟರೆ ಅನ್ಯರಿಲ್ಲದ ಕಾರಣದಿಂದ ಕಾಂಗ್ರೆಸ್ ಪಕ್ಷಕ್ಕೆ ಈ ಮೂರು ಕ್ಷೇತ್ರಗಳಲ್ಲಿ ಮತ ನೀಡುವಂತೆ ಸಿಪಿಐಎಂ ಕರೆ ನೀಡಿದೆ.

ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವೂ ಕೂಡಾ ಲೂಟಿಕೋರ ಕಾರ್ಪೋರೇಟ್ ಸಂಸ್ಥೆಗಳ ಪರವಾದ, ಜನವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿರುವುದು ಅನುಭವವೇದ್ಯವಾಗಿದೆ. ಅದು ಅನುಭವದಿಂದ ಪಾಠ ಕಲಿಯುತ್ತಿಲ್ಲ ಎಂದಿದೆ. ಹೀಗಾಗಿ, ಕಾಂಗ್ರೆಸ್ ಪಕ್ಷದ ಈ ಜನ ವಿರೋದಿ ನೀತಿಗಳನ್ನು ಹಿಮ್ಮೆಟ್ಟಿಸಲು ಜನತೆ, ಪ್ರಜಾಪ್ರಭುತ್ವ ಹಾಗು ಸೌಹಾರ್ಧತೆಯ ರಕ್ಷಣೆಗಾಗಿಯು ಜನ ಚಳುವಳಿಯಲ್ಲಿ ತೊಡಗಿ ಅವುಗಳನ್ನು ಬಲಗೊಳಿಸುವಂತೆಯು ಸಿಪಿಐಎಂ ಮತದಾರರಲ್ಲಿ ಮನವಿ ಮಾಡಿದೆ.

ಇಸ್ರೇಲ್ ನಡೆಸುತ್ತಿರುವುದು ಯುದ್ಧ ಅಲ್ಲ, ತಾಯ್ನೆಲಕ್ಕಾಗಿ ಹಂಬಲಿಸುತ್ತಿರುವ ಅಸಹಾಯಕ ಪ್ಯಾಲೆಸ್ತೀನಿಯರ ನರಮೇಧ

ಪ್ಯಾಲೆಸ್ತೀನ್ ಮೇಲಿನ ಧಾಳಿ ವಿರೋಧಿಸಿ, ಕದನ ವಿರಾಮಕ್ಕೆ ಒತ್ತಾಯಿಸಿ ಮಂಗಳೂರಿನಲ್ಲಿ ಎಡಪಕ್ಷಗಳ ಪ್ರತಿಭಟನೆ

ಪ್ಯಾಲೆಸ್ತೀನ್ ವಿರುದ್ದ ಇಸ್ರೇಲ್ ನಡೆಸುತ್ತಿರುವುದು ಯುದ್ಧ ಅಲ್ಲ, ತಾಯ್ನೆಲದ ವಿಮೋಚನೆಗೆ ಹಂಬಲಿಸುತ್ತಿರುವ ಅಸಹಾಯಕ ಪ್ಯಾಲೆಸ್ತೀಯರ ನರಮೇಧ. ಯುದ್ಧ ನಿಯಮಗಳು, ವಿಶ್ವಸಂಸ್ಥೆಯ ಠರಾವುಗಳನ್ನು ಉಲ್ಲಂಘಿಸಿ ಇಸ್ರೇಲ್ ಗಾಝಾ ಮೇಲೆ ಧಾಳಿ ನಡೆಸುತ್ತಿದೆ. ಮಧ್ಯಪ್ರಾಚ್ಯ ಪೆಟ್ರೋಲಿಯಂ ಉತ್ಪನ್ನದ ಮೇಲಿನ ಹಿಡಿತಕ್ಕಾಗಿ ಅಮೆರಿಕಾ ಇಸ್ರೇಲ್ ಪರವಾಗಿ ನಿಂತು ಎಲ್ಲಾ ರೀತಿಯ ಬೆಂಬಲವನ್ನು ಒದಗಿಸುತ್ತಿದೆ. ಇದು ಖಂಡನೀಯ, ಇದರಿಂದಾಗಿ ಇಡೀ ಜಗತ್ತಿನ ಮೇಲೆ ಯುದ್ಧದ ಕಾರ್ಮೋಡ ಹರಡಿದೆ. ಎಡಪಕ್ಷಗಳು ಭಾರತ ಮಾತ್ರ ಅಲ್ಲ ಇಡೀ ಜಗತ್ತಿನಲ್ಲಿ ಈ ಸಾಮ್ರಾಜ್ಯ ಶಾಹಿ ಯುದ್ಧದ ವಿರುದ್ಧ ಪ್ರತಿಭಟನೆ ನಡೆಸುತ್ತಿದೆ. ಇಸ್ರೇಲ್ ನೆಲದಲ್ಲೂ ಅಲ್ಲಿನ ಕಮ್ಯುನಿಸ್ಟ್ ಪಕ್ಷಗಳು ಪ್ರತಿಭಟನೆ ನಡೆಸಿವೆ, ಈ ಮಾನವೀಯ ಬಿಕ್ಕಟ್ಟಿನ ವಿರುದ್ಧ ಇಡೀ ಜಗತ್ತು ಒಂದಾಗಿ ನಿಲ್ಲಬೇಕಿದೆ ಎಂದು ಸಿಪಿಐಎಂ ದ.ಕ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಸುಕುಮಾರ್ ತೊಕ್ಕೊಟ್ಟು ಹೇಳಿದರು. ಅವರು ಇಸ್ರೇಲ್, ಪ್ಯಾಲೆಸ್ತೀನ್ ಮೇಲೆ ನಡೆಸುತ್ತಿರುವ ಅಮಾನವೀಯ ಧಾಳಿಯನ್ನು ವಿರೋಧಿಸಿ, ಮಧ್ಯಪ್ರಾಚ್ಯದಲ್ಲಿ ಯುದ್ಧ ವಿರಾಮಕ್ಕೆ ಆಗ್ರಹಿಸಿ ಸಿಪಿಐ, ಸಿಪಿಎಂ ಜಿಲ್ಲಾ ಸಮಿತಿಗಳು ಜಂಟಿಯಾಗಿ ಮಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಸಿಪಿಐ ಜಿಲ್ಲಾ ಮಂಡಳಿ ಸದಸ್ಯ ಎಚ್ ವಿ ರಾವ್ ಮಾತನಾಡುತ್ತಾ, ಜಾಗತಿಕ ಶಾಂತಿಗಾಗಿ ನಾವು ಆಗ್ರಹಿಸುತ್ತೇವೆ. ಭಾರತ ದೇಶವು ಪ್ಯಾಲೆಸ್ತೀನ್ ನಲ್ಲಿ ಇಸ್ರೇಲ್ ಅತಿಕ್ರಮಣದ ಆರಂಭದ ದಿನಗಳಿಂದಲೂ ಪ್ಯಾಲೆಸ್ತೀನ್ ಜನತೆಯ ತಾಯ್ನೆಲದ ಹಕ್ಕಿನ ಪರವಾಗಿ ನಿಂತಿದೆ. ಜಗತ್ತಿನಲ್ಲಿ ಇಸ್ರೇಲ್ ನಷ್ಟು ಯುದ್ಧದಾಹಿ ದೇಶ ಇನ್ನೊಂದಿಲ್ಲ. ಅದು ಅಷ್ಟೊಂದು ಯುದ್ದಗಳನ್ನು ಮಾಡಿದೆ. ಪ್ಯಾಲೆಸ್ತೀನ್ ವಿರುದ್ಧ ಒಟ್ಟು ಆರು ಯುದ್ಧಗಳನ್ನು ನಡೆಸಿರುವ ಇಸ್ರೇಲ್ ನ ಅತಿಕ್ರಮಣ, ಯುದ್ಧದಾಹಕ್ಕೆ ಎಣೆಯಿಲ್ಲ. ಪ್ಯಾಲೆಸ್ತೀನ್ ಪರವಾಗಿ ಧ್ವನಿ ಎತ್ತುವುದು ನಮ್ಮ ಕರ್ತವ್ಯ ಅದನ್ನು ಮುಂದುವರಿಸುತ್ತೇವೆ ಎಂದು ಹೇಳಿದರು.

ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ ಸ್ವಾಗತಿಸಿ, ಸಿಪಿಐ ಜಿಲ್ಲಾ ಜೊತೆ ಕಾರ್ಯದರ್ಶಿ ಸೀತಾರಾಮ ಬೇರಿಂಜೆ ವಂದಿಸಿದರು.

ಪ್ರತಿಭಟನೆಗೆ ಅನುಮತಿ ನಿರಾಕರಿಸಿ ಪೊಲೀಸ್ ನೋಟೀಸು, ಧ್ವನಿವರ್ಧಕ ತ್ಯಜಿಸಿ ಪ್ರತಿಭಟನಾ ಸಭೆ ನಡೆಸಿದ ಎಡಪಕ್ಷಗಳು


ಒಂದು ವಾರಕ್ಕೆ ಮುಂಚಿತವಾಗಿಯೆ ಪ್ರತಿಭಟನೆಯ ಮಾಹಿತಿ ನೀಡಿ, ಧ್ವನಿವರ್ಧಕ ಬಳಕೆಗೆ ಅನುಮತಿ ಕೋರಿ ಅರ್ಜಿಸಲ್ಲಿಸಲಾಗಿದ್ದರು, ಕಾನೂನು ಸುವ್ಯವಸ್ಥೆ ಡಿಸಿಪಿ ಇಂದು ಮಧ್ಯಾಹ್ನ ಪ್ರತಿಭಟನೆಗೆ ಅನುಮತಿ ನಿರಾಕರಿಸಿ ಸಿಪಿಐಎಂ ಕಚೇರಿಗೆ ನೋಟಿಸು ಜಾರಿಗೊಳಿಸಿದ್ದರು. ಕಾನೂನು ಸುವ್ಯವಸ್ಥೆಯ ಕಾರಣವನ್ನು ಮುಂದೊಡ್ಡಿದ್ದರು ಆದರೂ ಪ್ರತಿಭಟನೆ ರದ್ದುಗೊಳಿಸಲು ನಿರಾಕರಿಸಿದ ಎಡಪಕ್ಷಗಳ ನಾಯಕರು, ಧ್ವನಿ ವರ್ಧಕ ಬಳಸದೆ ಪ್ರತಿಭಟನೆ ನಡೆಸುವುದಾಗಿ ತಿಳಿಸಿದರು. ಅದಕ್ಕೂ ಅವಕಾಶ ಇಲ್ಲ, ಪ್ರತಿಭಟನೆ ನಡೆಸಿದರೆ ಕಾನೂನು ಕ್ರಮ ಕೈಗೊಳ್ಳುವುದಾಗಿ ಪೊಲೀಸ್ ಅಧಿಕಾರಿಗಳು ಎಚ್ಚರಿಸಿದರು. ಈ ಎಚ್ಚರಿಕೆಗೆ ಮಣಿಯದ ಎಡಪಕ್ಷಗಳು ಪ್ರತಿಭಟನಾ ಸಭೆಯನ್ನು ತೀರ್ಮಾನದಂತೆ ನಡೆಸಿದರು. ಪೊಲೀಸ್ ಇಲಾಖೆಯ ಈ ನಡೆಯನ್ನು, ಪ್ಯಾಲೆಸ್ತೀನ್ ನಾಗರಿಕರ ಮೇಲಿನ ಬರ್ಬರ ಧಾಳಿಯ ವಿರುದ್ಧ ಪ್ರತಿಭಟಿಸುವ ಹಕ್ಕನ್ನು ನಿರಾಕರಿಸುವ ನಿಲುವನ್ನು ಸಭೆಯಲ್ಲಿ ಬಲವಾಗಿ ಖಂಡಿಸಿದರು. ●

ಕನ್ನಡ ಕಾವ್ಯ ಪರಂಪರೆಯಲ್ಲಿ ದಿಟ್ಟ ಪ್ರತಿಭಟನೆಯ ಸ್ವರೂಪ

ಪ್ರೊ. ಪುರುಷೋತ್ತಮ ಬಿಳಿಮಲೆ
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಓರಿಯ ಅತ್ಯುತ್ತಮ ಬರಹಗಳು ಯಾವಾಗಲೂ ಪ್ರತಿಭಟನೆಯ ರೂಪದಲ್ಲಿಯೇ ಇರುತ್ತವೆ. ತಾನು ಬದುಕುತ್ತಿರುವ ಸಮಾಜದಿಂದ ಸಿಡಿದು ದೂರ ನಿಂತು ಅಂತರ ಕಾಯ್ದುಕೊಂಡ ಲೇಖಕನಿಗೆ ಸುತ್ತಲಿನ ಸಮಾಜವನ್ನು ವಸ್ತುನಿಷ್ಠವಾಗಿ ನೋಡಲು ಸಾಧ್ಯವಾಗುತ್ತದೆ. ಈ ಪ್ರತಿಭಟನೆಯ ವಿವಿಧ ರೀತಿಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೂ ಸ್ವಲ್ಪ ಸಿದ್ಧತೆ ಬೇಕು. ಲೇಖಕನ ಪ್ರತಿಭಟನೆಯು ಪದಗಳ ಅಥವಾ ಕೆಲವು ಸಲ ಕ್ರಿಯೆಗಳ ಮೂಲಕ ಪ್ರಕಟವಾಗುತ್ತದೆ. ಅದು ಆಕ್ಷೇಪದ ರೂಪದಲ್ಲಿರಬಹುದು, ತಿರಸ್ಕಾರದ ಮಾದರಿಯಲ್ಲಿರಬಹುದು ಅಥವಾ ಮೌನವೂ ಇರಬಹುದು. ಸುತ್ತಲಿನ ಸಮಾಜದಲ್ಲಿ ಕಾಣುವ ಪ್ರತಿಭಟನೆಗಳು ಘೋಷಣೆಯ ರೂಪದಲ್ಲಿ, ಮೆರವಣಿಗೆ ರೂಪದಲ್ಲಿ ಇದ್ದರೆ ಸಾಹಿತ್ಯದಲ್ಲಿ ಅದೇ ಮಾದರಿಯ ಪ್ರತಿಭಟನೆಗಳು ಕಾಣಬೇಕೆಂದೇನೂ ಇಲ್ಲ. ಸಾಹಿತ್ಯದಲ್ಲಿ ಕಾಣಿಸುವ ಪ್ರತಿಭಟನೆಗಳು ಹೆಚ್ಚು ಗಂಭೀರವಾಗಿರುತ್ತವೆ ಮತ್ತು ಓದುಗರ ಮೇಲೆ ಆಳವಾದ ಪರಿಣಾಮ ಬೀರಲು ಶಕ್ತವಾಗಿರುತ್ತವೆ.





ಭಾಷಿಕ ಸ್ಥಿತ್ಯಂತರ–ಪ್ರತಿಭಟನಾ ಮನೋಭಾವ

ಮೇಲಿನ ಮಾತಿಗೆ ಉದಾಹರಣೆಯಾಗಿ ಕನ್ನಡದ ಆದಿಪಂಪನ ತಮ್ಮನಾದ ಜಿನವಲ್ಲಭನ ಗಂಗಾಧರಂ ಶಾಸನವನ್ನು ಗಮನಿಸಬೇಕು. ಈ ಶಾಸನವು ಇವತ್ತಿನ ತೆಲಂಗಾಣ ರಾಜ್ಯದ ಕರೀಮ್‌ನಗರ ಜಿಲ್ಲೆಯ ಕುರ್ಕಿಯಾಲ್ ಎಂಬಲ್ಲಿದೆ. 11 ಸಾಲುಗಳಿರುವ ಈ ಶಾಸನವನ್ನು 10ನೇ ಶತಮಾನದಲ್ಲಿ ಕನ್ನಡ, ತೆಲುಗು ಮತ್ತು ಸಂಸ್ಕೃತ–ಹೀಗೆ ಮೂರು ಭಾಷೆಗಳಲ್ಲಿ ಬರೆಯಲಾಗಿದೆ. ಆ ಕಾಲದ ಅನೇಕ ಶಾಸನಗಳನ್ನು ಕನ್ನಡ ಮತ್ತು ಸಂಸ್ಕೃತದಲ್ಲಿ ಬರೆಯುತ್ತಿದ್ದರು. ಕನ್ನಡದ ಮೊದಲ ಶಾಸನವೆಂದು ಅಗ್ಗಳಿಕೆಗೆ ಪಾತ್ರವಾದ ಹಲ್ಮಿಡಿ ಶಾಸನ ಸಂಸ್ಕೃತ ಶ್ಲೋಕದಿಂದ ಆರಂಭವಾಗಿ ಕನ್ನಡದಲ್ಲಿ ಮುಂದುವರೆಯುತ್ತದೆ. ಹೀಗಿರುವಾಗ ಜಿನವಲ್ಲಭನ ಈ ಶಾಸನವು ತೆಲುಗನ್ನೂ ಒಳಗೊಳ್ಳುವ ಪ್ರಕ್ರಿಯೆ ಬಹಳ ಮಹತ್ವದ್ದು. ಅಂದರೆ ಭಾಷೆಯ ಕುರಿತಾದ ಚಿಂತನೆ ಇಲ್ಲಿ ಹೊಸ ರೂಪ ಪಡೆದಿದೆ. ಈ ಬದಲಾವಣೆಯನ್ನು ಶಾಸನವೊಂದರಲ್ಲಿ ತರಬೇಕಾದರೆ ಆಳದಲ್ಲಿ ಬಹಳ ಗಂಭೀರವಾದ ಚಿಂತನೆ ನಡೆದಿರಲೇಬೇಕು. ಈ ಭಾಷಿಕ ಸ್ಥಿತ್ಯಂತರವು ಆಳವಾದ ಪ್ರತಿಭಟನಾ ಮನೋಭಾವ ಇದ್ದಾಗ ಮಾತ್ರ ನಡೆಯುತ್ತದೆ.

ಪಂಪನ ಸ್ವತಂತ್ರ ಮತ್ತು ನೇರ ಪ್ರತಿಭಟನೆ

10ನೇ ಶತಮಾನದ ಶ್ರೇಷ್ಠ ಕವಿಯಾದ ಪಂಪನ ಕಾವ್ಯಗಳು ಎರಡು. ಒಂದು 'ಆದಿಪುರಾಣ' ಮತ್ತು ಇನ್ನೊಂದು 'ವಿಕ್ರಮಾರ್ಜುನ ವಿಜಯ'. ಈ ಎರಡೂ ಕಾವ್ಯಗಳಲ್ಲಿ ಯುದ್ಧಗಳಿವೆ, ಮನುಷ್ಯನ ಭೋಗಲಾಲಸೆಯ ವಿವರಗಳಿವೆ, ಅಧಿಕಾರದ ಹಪಹಪಿಕೆಯ ಚಿತ್ರಣಗಳಿವೆ. ಇವೆಲ್ಲವೂ ಕಾವ್ಯದ ವಸ್ತುವಿಗೆ ಅನಿವಾರ್ಯವೆಂಬಂತೆ ಬರುತ್ತವೆ. ಆದರೆ ಕವಿ ಇದನ್ನು ಕಾವ್ಯದಲ್ಲಿ ಹೇಗೆ ನಿರ್ವಹಿಸುತ್ತಾನೆ ಎಂಬುದು ಬಹಳ ಮುಖ್ಯ. ಪಂಪನು ಬ್ರಾಹ್ಮಣ್ಯ ಮತ್ತು ಜಾತಿಯ ಶ್ರೇಣೀಕರಣವನ್ನು ಒಪ್ಪುವುದಿಲ್ಲ. ಅವಕಾಶ ಸಿಕ್ಕಿದಾಗೆಲ್ಲ ಅವೆರಡನ್ನು ಆತ ತಿರಸ್ಕರಿಸುತ್ತಾನೆ. ಸಂಸ್ಕೃತದ ಇದಿರು ಕನ್ನಡವನ್ನು ನಿಲ್ಲಿಸುತ್ತಾನೆ, ಹಸ್ತಿನಾವತಿಯ ವೈಭವದ ಇದಿರು ಬನವಾಸಿಯನ್ನು ಪ್ರತಿಷ್ಠಾಪಿಸುತ್ತಾನೆ. ಇತಿಹಾಸ ಮತ್ತು ಪುರಾಣಗಳನ್ನು ಬೆಸೆಯುತ್ತಾನೆ. ಮಾರ್ಗದೊಂದಿಗೆ ದೇಸಿಯನ್ನು ಜೋಡಿಸುತ್ತಾನೆ. ಸ್ವತಂತ್ರ ಮತ್ತು ಪ್ರತಿಭಟನೆಯ ಮನೋಧರ್ಮವಿಲ್ಲದೆ ಹೀಗೆ ಮಾಡಲು ಸಾಧ್ಯವೇ ಇಲ್ಲ. ಕೆಲವೆಡೆಗಳಲ್ಲಿ ಅವನ ಪ್ರತಿಭಟನೆ ಬಹಳ ನೇರವಾದುದು.

ಕವಿತೆಯೊಳ್ ಆಸೆಗೆಯ್ವ ಫಲಮಾವುದೋ ಪೆರರೀವುದೇಂ?
ಪೆರರ್ ಮಾಡುವುದೇಂ, ಪೆರರಿಂದಮಪ್ಪುದೇಂ' ಎಂಬುದು ಅವನ ನೇರ ನುಡಿ.


ಛಲದಲ್ಲಿ ದುರ್ಯೋಧನ, ಕೃತಜ್ಞತೆಯಲ್ಲಿ ಕರ್ಣ..


ಕನ್ನಡದಲ್ಲಿ ಭಾರತವನ್ನು ಬರೆಯುವಾಗ ಪಂಪನು ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಅದರಲ್ಲಿ ಬಹಳ ಮುಖ್ಯವಾದದ್ದು ಕೃಷ್ಣನ ಪಾತ್ರವನ್ನು ಗೌಣಗೊಳಿಸಿದ್ದು. ಮಹಾಭಾರತವು ಹೇಗೆ, ಯಾರಿಂದ ಲೋಕ ಪೂಜ್ಯವಾಯಿತು ಎಂದು ಹೇಳುವಾಗ ಪಂಪನು ಕೃಷ್ಣನಿಗೆ ಅಲ್ಲೊಂದು ಜಾಗವನ್ನೇ ಕೊಡುವುದಿಲ್ಲ. ಅದರ ಬದಲು 'ಛಲದಲ್ಲಿ ದುರ್ಯೋಧನ, ಸತ್ಯ ಅಥವಾ ಕೃತಜ್ಞತೆಯಲ್ಲಿ ಕರ್ಣ, ಪೌರುಷದಲ್ಲಿ ಭೀಮಸೇನ, ಬಲದಲ್ಲಿ ಶಲ್ಯ, ಔನ್ನತ್ಯದಲ್ಲಿ ಭೀಷ್ಮ, ಬಿಲ್ಗಾರಿಕೆಯಲ್ಲಿ ದ್ರೋಣ, ಸಾಹಸ ಕಾರ್ಯಗಳಲ್ಲಿ ಅರ್ಜುನ ಮತ್ತು ಧಾರ್ಮಿಕ ವಿಷಯಗಳಲ್ಲಿ ಧರ್ಮರಾಯ' ಎಂದು ಹೇಳುತ್ತಾನೆ. ತನ್ನ ದೈವಿಕ ಶಕ್ತಿಯಿಂದ ಎಲ್ಲ ಪಾತ್ರಗಳನ್ನೂ ಗೊಂಬೆಗಳ ಹಾಗೆ ಕುಣಿಸಬಲ್ಲ ಕೃಷ್ಣನಿಗೆ ಸ್ವತಃ ಇಲ್ಲಿ ಅವಕಾಶವೇ ಇಲ್ಲದ್ದರಿಂದ ಉಳಿದ ಪಾತ್ರಗಳೆಲ್ಲ ತಮ್ಮ ಜವಾಬ್ದಾರಿಯನ್ನು ತಾವೇ ಹೊತ್ತುಕೊಳ್ಳಬೇಕಾಗುತ್ತದೆ. ಹೀಗಾಗಿ ಪಂಪಭಾರತವು ಅನೇಕ ಮಾನವೀಯ ಮೌಲ್ಯಗಳ ನಡುವಣ ಸಂಘರ್ಷವೆಂಬಂತೆ ರೂಪುಗೊಂಡಿತು.

ಇವತ್ತು ಬಹಳ ಚರ್ಚೆಯಲ್ಲಿರುವ ಭಗವದ್ಗೀತೆಗೆ ಕನ್ನಡದ ಆದಿಕಾವ್ಯದಲ್ಲಿ ಅಂತಾ ಮಹತ್ವವೇನೂ ಇಲ್ಲ. ಕುರುಕ್ಷೇತ್ರ ಯುದ್ಧ ಆರಂಭವಾಗುವ ಹೊತ್ತು ವಿರೋಧಿ ಬಣದಲ್ಲಿ ತನ್ನವರ ಮುಖಗಳನ್ನೇ ಕಂಡ ಅರ್ಜುನನ್ನು ಸಹಜವಾಗಿ ವಿಷಾದ ಆವರಿಸುತ್ತದೆ. ಅವನ ವಿಷಾದ ಕಳೆಯಲು ಕೃಷ್ಣ ಸುದೀರ್ಘವಾಗಿ ಪ್ರವಚನ ಮಾಡುತ್ತಾನೆ. ಅದುವೇ ಭಗವದ್ಗೀತೆ. ಈಗ ಲಭ್ಯವಿರುವ ಭಗವದ್ಗೀತೆಯಲ್ಲಿ ಒಟ್ಟು 18 ಅಧ್ಯಾಯಗಳಿವೆ. ಗೀತೆಯು ನಿರ್ವಿವಾದವಾಗಿ ಶ್ರೀಕೃಷ್ಣನ ಅಪಾರ ಮಹಿಮೆಯನ್ನು ಕೊಂಡಾಡುವ ಗ್ರಂಥ. ಆದರೆ ಪಂಪನು ಇಡೀ ಭಗವದ್ಗೀತಾ ಸನ್ನಿವೇಶವನ್ನು ಕೃಷ್ಣನಿಗೆ ಅಪಚಾರವಾಗದ ರೀತಿಯಲ್ಲಿ ಕೇವಲ ಒಂದೇ ಒಂದು ವೃತ್ತದಲ್ಲಿ ಹೇಳಿ ಮುಗಿಸಿದ್ದಾನೆ.

'ಚಾತುರ್ವರ್ಣ್ಯಮ್ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ'

(ಗುಣಕರ್ಮಗಳನ್ನು ಅನುಸರಿಸಿ ನಾಲ್ಕು ವರ್ಣಗಳನ್ನು ನಾನೇ ಸೃಷ್ಟಿ ಮಾಡಿದೆ) ಎಂದ ಕೃಷ್ಣನನ್ನು ಜಾಗರೂಕತೆಯಿಂದ ಬದಿಗೆ ಸರಿಸಿದ ಪಂಪನಿಗೆ ಅದೇ ಕಾರಣಕ್ಕೆ ವರ್ಣಾಶ್ರಮ ಧರ್ಮ ಉಂಟು ಮಾಡಿದ ಕೆಲವಾದರೂ ಅನಾಹುತಗಳನ್ನು ಪರಿಶೀಲಿಸಲು ಸಾಧ್ಯವಾಗಿದೆ. ಈ ಹಂತದಲ್ಲಿ ಅವನ ಕಣ್ಣಿಗೆ ಬಿದ್ದದ್ದು ಕರ್ಣ. ಆತ ಹುಟ್ಟಿನಿಂದ ಸೂರ್ಯಪುತ್ರ, ಆದರೆ ಲೋಕದ ಕಣ್ಣಿಗೆ ಸೂತಪುತ್ರ. ಮೊದಲನೆಯದು ಸೂರ್ಯನ ಮೂಲಕ ದೈವಿಕವೂ, ಕುಂತಿಯ ಮೂಲಕ ಜೈವಿಕವೂ ಆದರೆ ಎರಡನೆಯದು ಸೂತನಾದ ಅಧಿರಥ ಮತ್ತು ಅವನ ಹೆಂಡತಿ ರಾಧೆಯ ಮೂಲಕ ಒಂದು ಸಾಮಾಜಿಕ ರಚನೆಯಾಗುತ್ತದೆ. ಕೌಂತೇಯನಾಗಬೇಕಾಗಿದ್ದ ಕರ್ಣನು ರಾಧೇಯನಾಗುತ್ತಾನೆ. ಇದನ್ನು ಬಹಳ ಎಚ್ಚರದಿಂದ ಪರಿಶೀಲಿಸುವ ಪಂಪನು ಕರ್ಣನ ಪರವಾಗಿ ನಿಂತು ಉಳಿದ ಪಾತ್ರಗಳನ್ನು ಪರಿಶೀಲಿಸುತ್ತಾನೆ. ಇದು ನಮಗೆ ಸ್ಪಷ್ಟವಾಗುವುದು ಯುದ್ಧದ ಸಂದರ್ಭದಲ್ಲಿ ದ್ರೋಣ, ಕೃಪ ಮತ್ತು ಅಶ್ವತ್ಥಾಮರು ಕರ್ಣನನ್ನು ಕಂಡಾಗ. 'ಮಾನವ ಜಾತಿ ಒಂದೆ ವಲಂ' ಎಂದು ಆದಿಪುರಾಣದಲ್ಲಿ ಘೋಷಿಸಿದ ಪಂಪನು ಈ ಮೂವರ ಭೇಟಿಯನ್ನು ಬ್ರಾಹ್ಮಣ ಮತ್ತು ಶೂದ್ರರ ಸಂಘರ್ಷವಾಗಿ ಗ್ರಹಿಸುತ್ತಾನೆ. ಹಾಗಾಗಿ ಇಲ್ಲಿ ಕುಲ, ಜಾತಿ ಇತ್ಯಾದಿಗಳೆಲ್ಲವೂ ಮುನ್ನೆಲೆಗೆ ಬರುತ್ತವೆ. ಜಾತಿ–ಕುಲಗಳ ಪ್ರಶ್ನೆ ಬಂದಾಗ ಕರ್ಣ ಬಹಳ ಬೇಗ ತಾಳ್ಮೆ ಕಳೆದು ಕೊಳ್ಳುತ್ತಾನೆ ಮತ್ತು ಇದಿರಿಗೆ ಯಾರಿದ್ದರೂ ಸರಿ, ಅವರ ಮೇಲೆ ಹರಿಹಾಯುತ್ತಾನೆ.





ಇದಕ್ಕೆ ಒಳ್ಳೆಯ ಉದಾಹರಣೆ ಪಂಪಭಾರತದ 10ನೇ ಆಶ್ವಾಸದಲ್ಲಿ ಬರುವ ಕೆಲವು ಘಟನೆಗಳು. ಭೀಷ್ಮನ ಪಟ್ಟಾಭಿಷೇಕಕ್ಕೆ ಕರ್ಣ ತಕರಾರು ಎತ್ತಿದಾಗ, ಅಲ್ಲಿ ಉಪಸ್ಥಿತರಿದ್ದ ದ್ರೋಣಾಚಾರ್ಯರು ಅಲ್ಲಿ ನಡೆಯುತ್ತಿದ್ದ ವೀರತ್ವದ ಪ್ರಶ್ನೆಯನ್ನು ಕುಲದ ಪ್ರಶ್ನೆಯಾಗಿ ಪರಿವರ್ತಿಸಿ–'ಭುಜಬಲಯುತರಂ ಹಿತರನ್ ಈ ಸಭಾ ಮಧ್ಯದೊಳ್' ಕೊಬ್ಬಿನಿಂದ ಹೀಗೆ ತಿರಸ್ಕರಿಸಿ ಮಾತಾಡುವುದೇ? ನಾಲಗೆಯು ಕುಲವನ್ನು ಆಡಿ ತೋರಿಸುತ್ತದೇ ಅಲ್ಲವೇ? (ನಾಲಗೆ ಕುಲಮಂ ತುಬ್ಬುವವೋಲ್) ಎಂದು ಬಿಡುತ್ತಾನೆ. ಇದರಿಂದ ತೀವ್ರವಾಗಿ ಘಾಸಿಗೊಂಡ ಕರ್ಣನು, ಕೋಪದಿಂದ ಕುಲದ ಪ್ರಶ್ನೆಯನ್ನೇ ತಿರಸ್ಕರಿಸುವ ಮಾತುಗಳನ್ನಾಡುತ್ತಾನೆ–

ಕುಲಮನೆ ಮುನ್ನ ಮುಗ್ಗಡಿಪರೇಂಗಳ ನಿಮ್ಮ ಕುಲಂಗಳಾಂತುಮಾ
ರ್ಮಲೆವನಟ್ಟಿತಿಂಬುವೆ ಕುಲಂ ಕುಲಮಲ್ತು ಚಲಂಕುಲಂ ಗುಣಂ
ಕುಲಮಭಿಮಾನಮೊಂದೆ ಕುಲಮಣ್ಮುಕುಲಂಬಗೆ ವಾಗಳೀಗಳೀ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗುಂ

(ಮಾತಿಗೂ ಮುನ್ನ ಕುಲದ ಪ್ರಶ್ನೆಯನ್ನು ಯಾಕೆ ಎತ್ತುತ್ತಿದ್ದೀರಿ? ಪ್ರತಿಭಟಿಸುವವರನ್ನು ನಿಮ್ಮ ಕುಲ ತಿಂದು ಹಾಕುತ್ತದೆಯೇ? ಕುಲ ಹುಟ್ಟಿನಿಂದ ಬರುವುದಿಲ್ಲ, ಅದು ಛಲ, ಗುಣ, ಅಭಿಮಾನ, ಆತ್ಮಗೌರವ, ಪರಾಕ್ರಮ ಇತ್ಯಾದಿಗಳಿಂದ ಬರುತ್ತದೆ. ಈ ಯುದ್ಧದಲ್ಲಿ ನಿಮ್ಮ ಕುಲವೇ ನಿಮಗೆ ವ್ಯಥೆಯನ್ನುಂಟು ಮಾಡಲಿದೆ.)

ಪಂಪನು ಕುಲದ ಪ್ರಶ್ನೆಯನ್ನು ಕುರುಕ್ಷೇತ್ರ ಯುದ್ಧದ ಅಂತ್ಯದವರೆಗೂ ಕೊಂಡೊಯ್ಯುತ್ತಾನೆ. ದ್ರೋಣ ಸತ್ತಾಗ ಅಶ್ವತ್ಥಾಮನಿಗೆ ಪಟ್ಟಗಟ್ಟಲು ಕೃಪನು ದುರ್ಯೋಧನನ್ನು ಒತ್ತಾಯಿಸುವಾಗ ದುರ್ಯೋಧನನು 'ಕಲಶಜನಿಂ ಬಳಿಕ್ಕೆ ಕರ್ಣಂಗೆ' ಎನ್ನುತ್ತಾನೆ. ಕರ್ಣನ ಹೆಸರು ಕೇಳುತ್ತಲೇ ಉರಿದು ಬಿದ್ದ ಅಶ್ವತ್ತಾಮನು 'ನಿಜದಿಂ ಭೂಪರೆಂಬುವರ್ ಅವಿವೇಕಿಗಳ್, ಸೂತಜನು ಅರ್ಜುನನ್ನು ಇರಿಯುವುದುಂಟೇ? 'ಅಂಬಿಗನೊಳಾದುದಿದು ಋಣಸಂಬಂಧಂ' ಎಂದು ವ್ಯಂಗ್ಯವಾಡುತ್ತಾನೆ. ಸೂತಪುತ್ರ ಪದ ಕಿವಿಗೆ ಬೀಳುತ್ತಲೇ ಹೆಡೆ ಎತ್ತಿದ ಸರ್ಪದಂತೆ ಫೂತ್ಕರಿಸಿದ ಕರ್ಣನು 'ಎಷ್ಟು ಶಕ್ತಿಯಿದ್ದರೂ ಬ್ರಾಹ್ಮಣನ ಪೌರುಷಕ್ಕೆ ಹೆದರುವವರು ಇದ್ದಾರೆಯೇ? ನೀರೊಳ್ಳೆಗೆ ವಿಷ ಉಂಟು ಎಂದರೂ ಅದು ನೀರೊಳ್ಳೆಯೇ, ಅದು ಬಿಟ್ಟು ನೀರೊಳ್ಳೆ ನಾಗರ ಹಾವಾಗುವುದುಂಟೇ?

ಪುಟ 7 ಕ್ಕೆ

ವಕ್ಫ್ ಆಸ್ತಿ ವಿವಾದ: ಯಾಕಿಷ್ಟು ಗದ್ದಲ?



ಬಿಜೆಪಿ ಹೊಸ ಹೊಸ ಕುತಂತ್ರದ ಬಲೆ ಬೀಸುವ ಮೂಲಕ ಜನರನ್ನು ಮರುಳು ಮಾಡುತ್ತಲೇ ಇರುವುದನ್ನು ನೋಡುತ್ತಲೇ ಬಂದಿದ್ದೇವೆ. ಇಂದು ವಕ್ಫ್ ಆಸ್ತಿ ವಿಷಯದಲ್ಲಿ ಮುಸ್ಲೀಮರು ಹಿಂದೂಗಳ ಆಸ್ತಿ ಕಸಿದುಕೊಳ್ಳುತ್ತಿದ್ದಾರೆ ಎಂಬ ಮತ್ತೊಂದು ಕುತಂತ್ರದ ಬಲೆ ಬೀಸಿದ್ದಾರೆ. ಮೋದಿ ನೇತೃತ್ವದ ಕೇಂದ್ರ ಸರ್ಕಾರ ವಕ್ಫ್ ಬೋರ್ಡ್ ತಿದ್ದುಪಡಿ ಮಸೂದೆ ತರಲು ಮುಂದಾಗಿರುವ ಈ ಸಂದರ್ಭದಲ್ಲಿ, ಇದಕ್ಕೆ ಪೂರಕವಾಗಿ ಬಹುಸಂಖ್ಯಾತ ಸಮುದಾಯದ ಜನರ ಬೆಂಬಲ ಪಡೆಯಲು, ಕರ್ನಾಟಕದ ವಕ್ಫ್ ಮಂಡಳಿ ಹಿಂದೂ ರೈತರ ಮತ್ತು ಮಂದಿರಗಳ ಭೂಮಿ ಕಸಿದುಕೊಳ್ಳುತ್ತಿದೆ ಎಂದು ಹೇಳುತ್ತ 'ಹೋರಾಟ'ಕ್ಕೆ ಇಳಿದಿದ್ದಾರೆ. ರಾಜ್ಯದಲ್ಲಿ ನಡೆಯುತ್ತಿರುವ ಮೂರು ವಿಧಾನಸಭಾ ಉಪಚುನಾವಣೆಯಲ್ಲಿ ಲಾಭ ಪಡೆಯಲೂ ಬಿಜೆಪಿ ಈ ಗೊಂದಲವನ್ನು ಬಳಸಿಕೊಳ್ಳುತ್ತಿದೆ. ಈ ವಿವಾದದ ಸತ್ಯ ಸಂಗತಿ ಏನು?

ಸಿ.ಸಿದ್ದಯ್ಯ

ರಾಜ್ಯದಲ್ಲಿ ವಕ್ಫ್ ಆಸ್ತಿ ವಿವಾದ ತೀವ್ರ ಸ್ವರೂಪ ಪಡೆದುಕೊಂಡಿದೆ. ರೈತರು ಅನುಭವಿಸುತ್ತಿರುವ ಕೆಲವು ಜಮೀನಿನ ಭೂ ದಾಖಲೆಯಾದ ಆರ್‌ಟಿಸಿಯಲ್ಲಿನ 'ಹಕ್ಕುಗಳು' ಕಾಲಂ ನಲ್ಲಿ 'ವಕ್ಫ್ ಭೋರ್ಡ್' ಎಂದು ಬರೆಯಲಾಗಿದೆ. ಅಂತಹ ಕೆಲವು ರೈತರಿಗೆ ಭೂ ಹಕ್ಕು ಕುರಿತಂತೆ ವಿವರಣೆ ಕೇಳಿ ವಕ್ಫ್ ಮಂಡಳಿ ನೋಟಿಸ್ ನೀಡಿದೆ. ಇದನ್ನೇ ಸಮಾಜದಲ್ಲಿ ಮುಸ್ಲಿಂ ವಿರೋಧಿ ಭಾವನೆಗಳನ್ನು ಕೆರಳಿಸಲು ಒಂದು ಅಸ್ತ್ರವನ್ನಾಗಿ ಬಿಜೆಪಿ ಬಳಸಿಕೊಳ್ಳುತ್ತಿದೆ. ವಕ್ಫ್ ಮಂಡಳಿ ಹಿಂದೂ ರೈತರ ಆಸ್ತಿಗಳನ್ನು ಮತ್ತು ಹಿಂದೂ ದೇವಾಯಲಗಳ ಆಸ್ತಿಯನ್ನು ತನ್ನದೆಂದು ಹೇಳಿಕೊಂಡು ಆ ಆಸ್ತಿಗಳನ್ನು ಕಬಳಿಸಲು ಹೊರಟಿದೆ ಎಂದು ಬಿಜೆಪಿ ನಾಯಕರು ಆರೋಪಿಸುತ್ತಿದ್ದಾರೆ. ಇದನ್ನವರು 'ಭೂಮಿ ಜಿಹಾದ್' ಎನ್ನತೊಡಗಿದ್ದಾರೆ. ಇಂತಹ ಕೆಲವು ಆರ್‌ಟಿಸಿಗಳನ್ನು ಕೃತಕವಾಗಿ ತಯಾರು ಮಾಡಿ ಹರಿಯ ಬಿಟ್ಟಿದ್ದಾರೆ ಎಂಬ ಆರೋಪಗಳೂ ಕೇಳಿಬರುತ್ತಿವೆ. ಇದರ ಜೊತೆಗೆ ಹಲವು ಬಗೆಯ ಸುಳ್ಳುಗಳ ಮೂಲಕ, ಮುಸ್ಲಿಂ ವಿರೋಧಿ ಮಾತುಗಳನ್ನಾಡುವ ಮತ್ತು ಅಸಂಸ್ಕೃತ ಪದಗಳ ಅಸಹ್ಯಕರ ಬಳಕೆಯ ಮೂಲಕ ಜನರ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ರಾಜ್ಯದ ಕೇಂದ್ರ ಸಚಿವರೂ ಸೇರಿದಂತೆ ಸಂಘಪರಿವಾರದ ಹಲವು ನಾಯಕರು ರಾಜ್ಯದಲ್ಲಿ ಅಶಾಂತಿ ಉಂಟು ಮಾಡುವ ಮಾತುಗಳನ್ನು ಎಗಿಲ್ಲದೆ ಆಡತೊಡಗಿದ್ದಾರೆ.

ತಮ್ಮ ಜಮೀನಿನ ಪಹಣಿಯಲ್ಲಿ ವಕ್ಫ್ ಆಸ್ತಿ ಎಂಬುದು ನಮೂದಾಗಿದ್ದರಿಂದ ರೈತ ರುದ್ರಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಹೇಳಿದ್ದಾರೆ. ತನಿಖೆ ಮಾಡಿ ಇದು ಸುಳ್ಳು ಎಂದಿರುವ ಪೊಲೀಸರು, ತೇಜಸ್ವಿ ಸೂರ್ಯ ವಿರುದ್ಧ ಹಾವೇರಿ ಸೆನ್ (ಸೈಬರ್, ಆರ್ಥಿಕ ಹಾಗೂ ಮಾದಕ ದ್ರವ್ಯ ನಿಯಂತ್ರಣ) ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಸಾಲದ ಬಾಧೆಯಿಂದ ಕಳೆದ ಎರಡು ವರ್ಷಗಳ ಹಿಂದೆಯೇ ಈ ರೈತ ಆತ್ಮಹತ್ಯೆಗೆ ಶರಣಾದ ಸಂಗತಿ ತಿಳಿದು ಬಂದಿದೆ.

ಹಲವು ವರ್ಷಗಳಿಂದಲೂ...

2010ರಲ್ಲಿ ಬಿಜೆಪಿ ಅಧಿಕಾರದಲ್ಲಿ ಇತ್ತು. ಆಗ ರಾಜ್ಯದಲ್ಲಿನ ವಕ್ಫ್ ಆಸ್ತಿಗಳನ್ನು ಸರ್ಕಾರದ ಇಲಾಖೆಗಳು ನಿಗಮ, ಮಂಡಳಿ ಮತ್ತು ಸ್ಥಳೀಯರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಅಪಾರ ನಷ್ಟ ಉಂಟಾಗಿರುವುದು ಕಂಡುಬಂದಿದ್ದು, ಅಂಥ ಅತಿಕ್ರಮಣಗಳನ್ನು ನೋಟೀಸ್ ನೀಡಿ ತೆರವುಗೊಳಿಸುವಂತೆ ಮುಖ್ಯ ಕಾರ್ಯದರ್ಶಿ ಸುತ್ತೋಲೆ ಹೊರಡಿಸಿದ್ದರು. 2011ರಲ್ಲಿ ವಕ್ಫ್ ಆಸ್ತಿಗಳ ಸಂರಕ್ಷಣೆ ಹಾಗೂ ದಾಖಲೆಗಳನ್ನು ಕ್ರಮಬದ್ಧಗೊಳಿಸುವ ಕುರಿತು ಕಲಬುರ್ಗಿ ವಿಭಾಗದ ಪ್ರಾದೇಶಿಕ ಆಯುಕ್ತರು ಸಹ ಸುತ್ತೋಲೆ ಹೊರಡಿಸಿದ್ದರು.

ಬಿಜೆಪಿ 2009 ಹಾಗೂ 2014ರ ತನ್ನ ಚುನಾವಣಾ ಪ್ರಣಾಳಿಕೆಗಳಲ್ಲಿ "ವಕ್ಫ್ ಆಸ್ತಿಗಳ ಅತಿಕ್ರಮಣ ಮತ್ತು ಅನಧಿಕೃತ ಒತ್ತುವರಿಯನ್ನು ತೆರೆವುಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದು' ಘೋಷಿಸಿದೆ.

2020ರಲ್ಲಿ ವಕ್ಫ್ ಆಸ್ತಿಗಳ ಭೂಮಿ ತಂತ್ರಾಂಶದಲ್ಲಿ ಫ್ಲಾಗ್ ಮಾಡುವ ಕುರಿತು ಸರಕಾರದ ಉಪಕಾರ್ಯದರ್ಶಿಯವರು (ಭೂ ಮಂಜೂರಾತಿ, ಭೂ ಸುಧಾರಣೆ ಮತ್ತು ಕಂದಾಯ ಇಲಾಖೆ) ಸುತ್ತೋಲೆ ಹೊರಡಿಸಿದ್ದರು.

ವಕ್ಫ್ ಆಸ್ತಿಗಳ ಕಾರ್ಯಪಡೆ ರಚನೆ

2021ರಲ್ಲಿ ಬಿಜೆಪಿ ಸರಕಾರದ ಅವಧಿಯಲ್ಲಿ ಜಿಲ್ಲಾ ಮಟ್ಟದ ವಕ್ಫ್ ಆಸ್ತಿಗಳ ಕಾರ್ಯಪಡೆ ರಚಿಸಿ ರಾಜ್ಯದ ವಕ್ಫ್ ಆಸ್ತಿಗಳನ್ನು ಸಂರಕ್ಷಿಸುವ ಕುರಿತು ಪೌರಾಡಳಿತ ನಿರ್ದೇಶನಾಯದ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದರು.

ಕರ್ನಾಟಕ ಸರ್ಕಾರ 2016ರ ಅಕ್ಟೋಬರ್ 28ರಂದು ಸುತ್ತೋಲೆ ಹೊರಡಿಸಿ, ವಕ್ಫ್ ಆಸ್ತಿಗಳಿಗೆ ಖಾತಾ 'ಇಂಡೀಕರಣ' ಮಾಡಲು ಸೂಚಿಸಿರುವ ಅಂಶ ಬೆಳಕಿಗೆ ಬಂದಿದೆ. ರೈತರ ಜಮೀನಿನ ಪಹಣಿಯಲ್ಲಿ ವಕ್ಫ್ ಮಂಡಳಿ ಎಂದು ನಮೂದಿಸಿದ ಪ್ರಕರಣಗಳಿರುವುದಿಲ್ಲ, ವಕ್ಫ್ ಆಸ್ತಿಗಳಿಗೆ ಮಾತ್ರ ಖಾತಾ ಇಂಡೀಕರಣ ಮಾಡಲಾಗುತ್ತದೆ ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು 15, ಜುಲೈ 2024 ರಂದು ವಿಧಾನಸಭೆಯಲ್ಲಿ ಪ್ರಶ್ನೆಯೊಂದಕ್ಕೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಕಂದಾಯ ಇಲಾಖೆಗೆ ಪತ್ರ

15 ಏಪ್ರಿಲ್ 2024ರಂದು ನಡೆದ ರಾಜ್ಯ ಮಟ್ಟದ ವಕ್ಫ್ ಆಸ್ತಿಗಳ ಕಾರ್ಯಪಡೆಯ ಪ್ರಕಾರಗಳಲ್ಲಿ ಸಾಧಿಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕ್ರಮ ಕೈಗೊಳ್ಳುವಂತೆ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಕಂದಾಯ ಇಲಾಖೆಗೆ ಪತ್ರ ಬರೆದಿದ್ದಾರೆ. ಕಂದಾಯ ಇಲಾಖೆಯಲ್ಲಿ ಒಟ್ಟು 21,767 ವಕ್ಫ್ ಆಸ್ತಿಗಳ ಖಾತೆ ಬದಲಾವಣೆಯಾಗಬೇಕಿದ್ದು, ಈ ವಕ್ಫ್ ಆಸ್ತಿಗಳ ಮಾಹಿತಿಯನ್ನು ಭೂಮಿ ತಂತ್ರಾಂಶದಡಿಯಲ್ಲಿ ನೊಂದಾಯಿಸಬೇಕು. ನೊಂದಾಯಿಸಲ್ಪಡದ ಆಸ್ತಿಗಳ ವಿವರಗಳನ್ನು ಆಡಳಿತಾತ್ಮಕವಾಗಿ ಅಧಿನಿಯಮದಡಿ ತರುವುದು ಎಂದು ಈ ಪತ್ರದಲ್ಲಿ ಹೇಳಲಾಗಿದೆ.

ಅಂದರೆ, ರಾಜ್ಯದಲ್ಲಿ ಬಿಜೆಪಿ ಮತ್ತು ಬಿಜೆಪಿ ನೇತೃತ್ವದ ಆಡಳಿತ ಇದ್ದಾಗಲೂ ಭೂ ದಾಖಲೆ ಆರ್‌ಟಿಸಿಯಲ್ಲಿ 'ಹಕ್ಕುಗಳು' ಕಾಲಂ ನಲ್ಲಿ ವಕ್ಫ್ ಭೋರ್ಡ್ ಎಂದು ಬರೆಯಲಾಗಿದೆ. ಈಗ ಎಲ್ಲೆಡೆ ಭೂಮಿ ತಂತ್ರಾಂಶದಡಿಯಲ್ಲಿ ನೋಂದಾಯಿಸುವ ಪ್ರಕ್ರಿಯೆ ನಡೆಯುತ್ತಿದೆ. ಬಿಜೆಪಿ ಹಾಗೂ ಅದರ ನೇತೃತ್ವದ ಸರ್ಕಾರಗಳು ಕಳೆದ ಒಂದು ದಶಕದಿಂದ ರೈತರ ಜಮೀನುಗಳ ಭೂದಾಖಲೆಗಳಲ್ಲಿ ವಕ್ಫ್ ಹೆಸರು ಸೇರಿಸಿರುವುದು ಬಯಲಾಗಿವೆ. ಅಂದೂ ಕೂಡಾ ಭೂಮಿ ಅನುಭವಿಸುತ್ತಿರುವ ಕೆಲವು ರೈತರಿಗೆ ನೋಟೀಸ್ ನೀಡಲಾಗಿದೆ. ಕೆಲವರು ವಕ್ಫ್ ಆಸ್ತಿ ವಿವಾದವನ್ನು ನ್ಯಾಯಾಲಯಗಳಿಗೂ ತೆಗೆದುಕೊಂಡು ಹೋಗಿರುವ ಪ್ರಕರಣಗಳೂ ಇವೆ. ಈ ರೀತಿ ನ್ಯಾಯಾಲಗಳಿಗೆ ಹೋದವರಲ್ಲಿ ಮುಸ್ಲೀಮರೂ ಇದ್ದಾರೆ. ಇದು ಕರ್ನಾಟಕದಲ್ಲಿ ಮಾತ್ರವಲ್ಲ, ಬೇರೆ ಬೇರೆ ರಾಜ್ಯಗಳಲ್ಲಿಯೂ ಇಂತಹ ಭೂ ವಿವಾದಗಳಿವೆ.

ಇದನ್ನು ನೋಡಿದಾಗ, ಇಂತಹ ಭೂ ವಿವಾದ ಈ ಹಿಂದೆಯೂ ಇತ್ತು ಎಂದಾಗುತ್ತದೆ. ಮಾತ್ರವಲ್ಲ, ಹಿಂದೆ ಬಿಜೆಪಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಕ್ಫ್ ಆಸ್ತಿ ಉಳಿಸಿಕೊಳ್ಳುವ ಮತ್ತು ಆಕ್ರಮಸಿಕೊಂಡಿರುವ ವಕ್ಫ್ ಆಸ್ತಿಯನ್ನು ಮರುಪಡೆಯುವುದರ ಪರವಾಗಿ ಮಾತನಾಡಿರುವ ವಿಡಿಯೋ ಹರಿದಾಡುತ್ತಿದೆ. ಹಿಂದೆಂದೂ ಏಳದ ಈ ವಿವಾದ ಈಗ ದಡೀರನೆ ಹುಟ್ಟಿಕೊಂಡಿದ್ದೇಕೆ? ಈ ಪ್ರಶ್ನೆಗೆ ಉತ್ತರ: ವಕ್ಫ್ ಬೋರ್ಡ್ ತಿದ್ದುಪಡಿ ಮಸೂದೆ ತರಲು ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮುಂದಾಗಿದೆ. ಇದಕ್ಕೆ ಪೂರಕವಾಗಿ ಬಹುಸಂಖ್ಯಾತ ಸಮುದಾಯದ ಜನರ ಬೆಂಬಲ ಪಡೆಯಲು, ಕರ್ನಾಟಕದ ವಕ್ಫ್ ಮಂಡಳಿಯು ಹಿಂದೂ ರೈತರ ಮತ್ತು ಮಂದಿರಗಳ ಭೂಮಿ ಕಸಿದುಕೊಳ್ಳುತ್ತಿದೆ ಎಂಬ ಕಟ್ಟು ಕತೆ ಹೆಣೆದು ಪ್ರಚಾರ ಮಾಡುತ್ತಾ, ಹೋರಾಟದ ನಾಟಕಕ್ಕೆ ಇಳಿಯಲಾಗಿದೆ.

ಬಾಧಿತರಾದವರಲ್ಲಿ ಮುಸ್ಲಿಮರೂ ಇದ್ದಾರೆ

ವಕ್ಫ್ ಆಸ್ತಿ ವಿವಾದಕ್ಕೆ ಬಾಧಿತರಾದವರಲ್ಲಿ ಮುಸ್ಲಿಮರೂ ಇದ್ದಾರೆ. ಈಗ ಕೇಂದ್ರ ಸರ್ಕಾರ ತರಲು ಹೊರಟಿರುವ 'ವಕ್ಫ್ ತಿದ್ದುಪಡಿ ಮಸೂದೆ 2024' ಕುರಿತ ವಿವರಣೆಯ ಪ್ರಶ್ನೆ–13ರಲ್ಲಿ 'ವಕ್ಫ್ ಆಡಳಿತದಲ್ಲಿ ಎಷ್ಟು ಪ್ರಕರಣಗಳು ಬಾಕಿ ಇವೆ?' ಎಂಬ ಪ್ರಶ್ನೆಗೆ ಈ ರೀತಿ ಉತ್ತರ ಕೊಟ್ಟಿದೆ; ಸಚಿವಾಲಯವು ನ್ಯಾಯಮಂಡಳಿಗಳ ಕಾರ್ಯಚಟುವಟಿಕೆಯನ್ನು ವಿಶ್ಲೇಷಿಸಿದೆ ಮತ್ತು ಟ್ರಿಬ್ಯೂನಲ್ ಗಳಲ್ಲಿ 40,951 ಪ್ರಕರಣಗಳು ಬಾಕಿ ಉಳಿದಿವೆ ಎಂದು ಕಂಡು ಹಿಡಿದಿದೆ, ಅವುಗಳಲ್ಲಿ 9,942 ಪ್ರಕರಣಗಳು ವಕ್ಫ್ ನಿರ್ವಹಿಸುವ ಸಂಸ್ಥೆಗಳ ವಿರುದ್ಧ ಮುಸ್ಲಿಂ ಸಮುದಾಯದವರು ದಾಖಲಿಸಿದ್ದಾರೆ.

ಓಡೋಡಿ ಬಂದ ಜೆಪಿಸಿ ಅಧ್ಯಕ್ಷ ಜಗದಾಂಬಿಕಾ ಪಾಲ್

ರಾಜ್ಯದ ಬಿಜೆಪಿ ನಾಯಕರು, ಕೇಂದ್ರ ಸಚಿವರು, ಸಂಸದರು, ಶಾಸಕರು ದೊಡ್ಡ ಮಟ್ಟದ ಹೋರಾಟಕ್ಕೆ ಇಳಿದಿದ್ದಾರೆ, ವಕ್ಫ್ ಬೋರ್ಡ್ (ತಿದ್ದುಪಡಿ) ಮಸೂದೆ ಕುರಿತಂತೆ ಕೇಂದ್ರ ಸರ್ಕಾರ ರಚಿಸಿರುವ ಜಂಟಿ ಸಂಸದೀಯ ಸಮಿತಿ(ಜೆಪಿಸಿ)ಯ ಅಧ್ಯಕ್ಷರೂ 'ಸಂತ್ರಸ್ತ' ರೈತರ ಸಮಸ್ಯೆ ಆಲಿಸಲು ದೆಹಲಿಯಿಂದ ರಾಜ್ಯಕ್ಕೆ ಓಡೋಡಿ ಬಂದಿದ್ದಾರೆ. ಈ ಸಮಯದಲ್ಲಿಯೇ, 'ವಕ್ಫ್ ಮಂಡಳಿಯ ಆಟಾಟೋಪ ತಡೆಗಟ್ಟುವ ಉದ್ದೇಶದಿಂದಲೇ ಪ್ರಧಾನಿ ನರೇಂದ್ರ ಮೋದಿ ಅವರು ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಹೊರಟಿದ್ದಾರೆ' ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿಕೆ ನೀಡಿದ್ದಾರೆ. ಮಾಧ್ಯಮಗಳಲ್ಲಿ ಇವೆಲ್ಲವೂ ವ್ಯಾಪಕ ಪ್ರಚಾರ ಆಗುವಂತೆ ನೋಡಿ ಕೊಂಡಿದ್ದಾರೆ. ಮಾಜಿ ಸಂಸದ ಪ್ರತಾಪ್ ಸಿಂಹ ಕೂಡಾ "ವಕ್ಫ್ ಕಾಯ್ದೆಯನ್ನು ಅಮೂಲಾಗ್ರವಾಗಿ ತಿದ್ದುಪಡಿ ಮಾಡಲಾಗುವುದು" ಎಂಬ ಹೇಳಿಕೆ ನೀಡುತ್ತಿದ್ದಾರೆ, ಇವೆಲ್ಲವನ್ನೂ ನೋಡಿದರೆ, ಈ ಲೇಖನದ ಆರಂಭದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಕ್ಕೆ ಮತ್ತಷ್ಟು ಪುಷ್ಠಿ ನೀಡುತ್ತದೆ. ಜಂಟಿ ಸಂಸದೀಯ ಸಮಿತಿಯಲ್ಲಿ ವಿರೋಧ ಪಕ್ಷಗಳ ಸಂಸದರೂ ಸೇರಿದಂತೆ 20 ಸದಸ್ಯರಿದ್ದಾರಾದರೂ, ಕರ್ನಾಟಕಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಬಿಜೆಪಿಯ ಒಬ್ಬ ಸಂಸದ ಮಾತ್ರ ಅಧ್ಯಕ್ಷರ ಜೊತೆಗಿರುತ್ತಾರೆ!!

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಕೇಂದ್ರ ಕಾಯಿದೆಯಾದ ವಕ್ಫ್ ಕಾಯಿದೆ

ಪುಟ 10 ಕ್ಕೆ

ವಕ್ಫ್ ಆಸ್ತಿ ಎಂದರೇನು? ಅದು ಯಾವುದು?

ಮುಸ್ಲೀಮರು ತಮ್ಮ ದೇವರ ಹೆಸರಿನಲ್ಲಿ ಧಾರ್ಮಿಕ ಉದ್ದೇಶಗಳಿಗಾಗಿ ಸಮರ್ಪಿಸುವ ಸ್ಥಿರ ಮತ್ತು ಚರ ಆಸ್ತಿಗಳನ್ನು 'ವಕ್ಫ್ ಆಸ್ತಿ' ಎನ್ನುತ್ತಾರೆ. ವಕ್ಫ್ ಆಸ್ತಿಗಳು ನಮ್ಮ ರಾಜ್ಯದಲ್ಲಿ ವಿಜಯನಗರ, ಆದಿಲ್ ಶಾಹಿ, ಟಿಪ್ಪು ಸುಲ್ತಾನ್, ಒಡೆಯರ್ ಅವರ ಕಾಲದಲ್ಲೂ ಕೂಡಾ ಮುಸ್ಲಿಮರಿಗೆ ಧಾನವಾಗಿ ಬಂದಿದೆ. ಈ ಆಸ್ತಿಗಳನ್ನು ಧಾರ್ಮಿಕ ಮತ್ತು ಸಾಮಾಜಿಕ ಉದ್ದೇಶಗಳಿಗೆ ದೇವರಿಗೆ ಸಮರ್ಪಿಸಿ ಮುಡಿಪಾಗಿಟ್ಟಿರುವುದೂ ಇದೆ. ವಕ್ಫ್ ಆಸ್ತಿಯನ್ನು ಯಾರಿಗೂ ಮಾರುವಂತಿಲ್ಲ ಅಥವಾ ವರ್ಗಾಯಿಸುವಂತಿಲ್ಲ. ವಕ್ಫ್ ನಿಂದ ಬರುವ ಆದಾಯವನ್ನು ಸಾಮಾನ್ಯವಾಗಿ ಶಿಕ್ಷಣ ಸಂಸ್ಥೆಗಳು, ಸ್ಮಶಾನಗಳು, ಮಸೀದಿಗಳು, ಆಶ್ರಯ ಮನೆಗಳು ಇತ್ಯಾದಿಗಳ ನಿರ್ವಹಣೆಗೆ ಬಳಸಲಾಗುತ್ತದೆ. ವಕ್ಫ್ ಆಸ್ತಿಗಳನ್ನು ನಿರ್ವಹಿಸಲು ಸರ್ಕಾರಗಳು ನಾಮನಿರ್ದೇಶನ ಮಾಡಿದ ಸದಸ್ಯರನ್ನು ಹೊಂದಿರುವ ಶಾಸನಬದ್ಧವಾದ ಸಂಸ್ಥೆಯೇ ವಕ್ಫ್ ಬೋರ್ಡ್. ಈ ವಕ್ಫ್ ಮಂಡಳಿಯು ಪ್ರತಿ ಆಸ್ತಿಗೆ ಒಬ್ಬ ಕಸ್ಟೋಡಿಯನ್ ಅನ್ನು ನೇಮಿಸುತ್ತದೆ. ಅದರಿಂದ ಬರುವ ಆದಾಯವನ್ನು ಉದ್ದೇಶಿತ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗಿದೆ ಎಂದು ಇದು ಖಚಿತಪಡಿಸುತ್ತದೆ. 1964ರಲ್ಲಿ ಸ್ಥಾಪಿತವಾದ ಕೇಂದ್ರೀಯ ವಕ್ಫ್ ಕೌನ್ಸಿಲ್ ದೇಶದೆಲ್ಲೆಡೆ ಇರುವ ರಾಜ್ಯ ಮಟ್ಟದ ವಕ್ಫ್ ಮಂಡಳಿಗಳನ್ನು ಮೇಲ್ವಿಚಾರಣೆ ಮಾಡುತ್ತದೆ. ಸಲಹೆ ಮತ್ತು ಸೂಚನೆಗಳನ್ನು ನೀಡುತ್ತದೆ.

ಸಿಪಿಐ(ಎಂ) ಪಕ್ಷದ ಸಮ್ಮೇಳನಗಳ ಸಂದರ್ಭದಲ್ಲಿ ಇದಕ್ಕೆ ನಮ್ಮ ದೇಶದ, ರಾಜ್ಯದ ಕಳೆದ 3 ವರ್ಷಗಳ ಒಟ್ಟಾರೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಳ, ಪರಿಸ್ಥಿತಿಯ ಸಿಂಹಾವಲೋಕನ ಅಗತ್ಯವಾಗುತ್ತದೆ. ಮಾಧ್ಯಮ ಕ್ಷೇತ್ರದ ಬೆಳವಣಿಗೆಗಳ, ಪರಿಸ್ಥಿತಿಯ ಪರಿಶೀಲನೆ ಇದರ ಭಾಗವಾಗಿದೆ. ಮಾಧ್ಯಮ ಕ್ಷೇತ್ರದಲ್ಲಿನ ಬೆಳವಣಿಗೆಗಳು, ಅದು ಸ್ವತಃ ಎದುರಿಸುತ್ತಿರುವ ಪರಿಸ್ಥಿತಿ, ಸಮಾಜದಲ್ಲಿ ಅದು ವಹಿಸುತ್ತಿರುವ ಪಾತ್ರ, ಮಾಧ್ಯಮದ ಜತೆ ಜನತೆಯ ವ್ಯವಹಾರ–ಇವೆಲ್ಲವನ್ನು ಪರಿಶೀಲಿಸಬೇಕಾಗುತ್ತದೆ. ಮಾಧ್ಯಮ ಪರಿಸ್ಥಿತಿಯ ಅವಲೋಕನದ ಈ ಲೇಖನ ಮಾಲೆಯ ಮೂರು ಲೇಖನಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಮೊದಲ ಭಾಗದಲ್ಲಿ ಮಾಧ್ಯಮ ಕ್ಷೇತ್ರದಲ್ಲಿನ ಬೆಳವಣಿಗೆಗಳು, ಅದು ಸ್ವತಃ ಎದುರಿಸುತ್ತಿರುವ ಪರಿಸ್ಥಿತಿಯನ್ನು ಪರಿಶೀಲಿಸಲಾಗಿದೆ. ಎರಡನೆಯ ಭಾಗದಲ್ಲಿ ಮಾಧ್ಯಮ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾಗಿ ಹೊಸ ವೆಬ್ ಮಾಧ್ಯಮಗಳು ಕೊಡುತ್ತಿರುವ ಸೇವೆಗಳಿಗೆ ಹೇಗೆ ಸ್ಪಂದಿಸುತ್ತಿದ್ದಾರೆ, ಆ ಮೂಲಕ ಹಳೆಯ ಮಾಧ್ಯಮ ಕ್ಷೇತ್ರಗಳ ಮೇಲೆ ಯಾವ ಪರಿಣಾಮವಾಗುತ್ತಿದೆ ಎಂಬುದನ್ನು ನಿರೂಪಿಸಲಾಗಿದೆ. ಈ ಮೂರನೆಯ ಮತ್ತು ಕೊನೆಯ ಭಾಗದಲ್ಲಿ ಕರ್ನಾಟಕದಲ್ಲಿ ಸಾಂಪ್ರದಾಯಿಕ, ಮುಖ್ಯವಾಹಿನಿ ಮಾಧ್ಯಮಗಳ ಪರಿಸ್ಥಿತಿ, ಅದಕ್ಕೆ ಪ್ರತಿರೋಧ ತೋರಬೇಕಾದ 'ಜನತಾ ಮಾಧ್ಯಮ'ದ ಸ್ವರೂಪ ಮತ್ತು ಈ ಬೆಳಕಿನಲ್ಲಿ ಸ್ವತಂತ್ರ ವೆಬ್ ಮಾಧ್ಯಮಗಳ ಸ್ಥಿತಿಯನ್ನು ನಿರೂಪಿಸಲಾಗಿದೆ.

ಮಾಧ್ಯಮ ಪರಿಸ್ಥಿತಿ

ಕರ್ನಾಟಕದಲ್ಲಿ ಮಾಧ್ಯಮ ಪರಿಸ್ಥಿತಿ

ವಸಂತರಾಜ ಎನ್.ಕೆ.

ಭಾಗ 3

ಈ ಲೇಖನ ಸರಣಿಯ ಹಿಂದಿನ ಎರಡು ಭಾಗಗಳಲ್ಲಿ ನಿರೂಪಿಸಿದ ದೇಶದ ಮಾಧ್ಯಮ ಪರಿಸ್ಥಿತಿಗಿಂತ, ಕರ್ನಾಟಕದಲ್ಲಿ ಮಾಧ್ಯಮ ಪರಿಸ್ಥಿತಿಯು ಬಹಳ ಭಿನ್ನವಾಗೇನೂ ಇಲ್ಲ. ಮೊದಲಿಗೆ ಸಾಂಪ್ರದಾಯಿಕ ಮಾಧ್ಯಮಗಳನ್ನು ಪರಿಶೀಲಿಸಿದರೆ ಅವುಗಳಲ್ಲಿ ಪ್ರಧಾನವಾಗಿ ದೇಶೀಯ ಅಥವಾ ಕೆಲವು ಪ್ರಾದೇಶಿಕ ವ್ಯಾಪ್ತಿಯ ಕಾರ್ಪೊರೆಟ್‌ಗಳ ನಿಯಂತ್ರಣದಲ್ಲಿವೆ. ಹೊಸ ವೆಬ್ ಮಾಧ್ಯಮಗಳು ದೇಶದ ಇತರ ಭಾಗಗಳಂತೆ ಬೆಳೆದಿವೆ. ನೋಡುಗರ, ಓದುಗರ, ಕೇಳುಗರ ಪ್ರವೃತ್ತಿಗಳಲ್ಲೂ ಬಹಳ ವ್ಯತ್ಯಾಸಗಳಿಲ್ಲ. ಕರ್ನಾಟಕದ ಸ್ಥೂಲ ಮಾಧ್ಯಮ ಪರಿಸ್ಥಿತಿ ಈ ಕೆಳಗಿನಂತಿದೆ:

ಕನ್ನಡ ಮಾಧ್ಯಮ ಟಿವಿ ಚಾನೆಲುಗಳು

ಕರ್ನಾಟಕದಲ್ಲೂ ಅಂಬಾನಿಯ ನೆಟ್‌ವರ್ಕ್ 18, ಸನ್, ಝಿ, ಏಶ್ಯಾನೆಟ್‌ನ ಚಾನೆಲುಗಳೇ ಟಿವಿ ಮಾಧ್ಯಮದ ಬಹುಭಾಗದ ಮೇಲೆ ಹಿಡಿತ ಸಾಧಿಸಿವೆ. ಇಲ್ಲೂ ಬಿಜೆಪಿ ಸಂಘ ಪರಿವಾರಗಳ ತುತ್ತೂರಿಯಾಗಿವೆ. ಸುದ್ದಿ ಚಾನೆಲುಗಳಲ್ಲಿ ಸುದ್ದಿ, ವಿಶ್ಲೇಷಣೆಗಳ ಮಟ್ಟ ದಿನೇ ದಿನೇ ಕೆಳಕ್ಕೆ ಹೋಗುತ್ತಿದ್ದು ಚರ್ಚೆಯ ಹೆಸರಲ್ಲಿ ಅರಚಾಟವೇ ಪ್ರಧಾನವಾಗಿ ಬಿಟ್ಟಿದೆ. ಜನರ ಸಮಸ್ಯೆಗಳನ್ನು ಪ್ರತಿಬಿಂಬಿಸುವುದು, ಅದರ ಕುರಿತು ಚರ್ಚೆ, ಸರಕಾರದ (ಬಿಜೆಪಿಯೇತರ ಸರಕಾರವಿದ್ದಾಗ ಬಿಟ್ಟು) ನ್ಯೂನತೆಗಳನ್ನು ಎತ್ತಿ ತೋರಿಸುವುದು ಇತ್ಯಾದಿ ಪೂರ್ಣವಾಗಿ ಮಾಯವಾಗಿದೆ. "ಮನೋರಂಜನೆ" ಚಾನೆಲುಗಳ ಸಾಂಸ್ಕೃತಿಕ ಮಟ್ಟವೂ ಕುಸಿಯುತ್ತಿದ್ದು ರಿಯಾಲಿಟಿ ಶೋ, ಮೂಢನಂಭಿಕೆ ಪ್ರಧಾನ, ಜನಜೀವನಕ್ಕೆ ದೂರವಾದ ಅಸಹಜ ಕೃತ್ರಿಮ ಪ್ರತಿಗಾಮಿ ಧೋರಣೆ ಬಿತ್ತುವ ಸಾಮಾಜಿಕ ಧಾರಾವಾಹಿಗಳ ಭರಾಟೆ ಇನ್ನಷ್ಟು ಹೆಚ್ಚಾಗಿದೆ. ಕರ್ನಾಟಕದ ಮೂರರಲ್ಲಿ ಎರಡು ಮನೆಗಳಲ್ಲಿ ಟಿವಿ ಇದ್ದು ಇದು ಇನ್ನೂ ಪ್ರಬಲ ಮಾಧ್ಯಮವಾಗಿದೆ. ಟಿವಿ ಸುದ್ದಿಗಳ ವಿಶ್ವಾಸಾರ್ಹತೆ ಕಡಿಮೆಯಾಗುತ್ತಿದ್ದರೂ ಇನ್ನೂ ರಾಜಕೀಯ ಪ್ರಚಾರದ ಮುಖ್ಯ ಸಾಧನವಾಗಿ ಮುಂದುವರೆದಿದೆ.

ಕನ್ನಡ ದೈನಿಕಗಳ ಪರಿಸ್ಥಿತಿ

ಪ್ರಿಂಟ್ ಪತ್ರಿಕೆಗಳ ಪ್ರಸಾರದ ಸಮೀಕ್ಷೆ ನಡೆಸಿ ಅಂಕೆಸಂಖ್ಯೆ ಪ್ರಕಟಿಸುತ್ತಿದ್ದ ಎಬಿಸಿ(ಆಡಿಟ್ ಬ್ಯುರೊ ಆಫ್ ಸರ್ಕುಲೇಶನ್) ಕೆಲವು ಪತ್ರಿಕೆಗಳಿಗೆ ಅದು ಪಕ್ಷಪಾತ ತೋರಿಸುತ್ತಿದೆ ಎಂಬ ಆಪಾದನೆಯಿಂದಾಗಿ ಈ ಅವಧಿಯಲ್ಲಿ ಇಂತಹ ಸಮೀಕ್ಷೆ ಪ್ರಕಟಿಸಿಲ್ಲ. ವಾರ್ತಾ ಮತ್ತು ಪ್ರಸಾರ ಇಲಾಖೆಯ ನೋಂದಣಿ ಭಾಗವಾಗಿ ಪತ್ರಿಕೆಗಳು ಸಲ್ಲಿಸುವ ವರದಿಯ ಅಂಕೆಸಂಖ್ಯೆಗಳಷ್ಟೇ ಲಭ್ಯವಿವೆ. ಇದರ ಪ್ರಕಾರ ಕನ್ನಡ ದೈನಿಕಗಳ ಒಟ್ಟು ಪ್ರಸಾರ 64.3 ಲಕ್ಷ. ವಾರಪತ್ರಿಕೆಗಳು 4.98 ಲಕ್ಷ, ಪಾಕ್ಷಿಕ 3.50 ಲಕ್ಷ, ಮಾಸಿಕ 6.9 ಲಕ್ಷ ಪ್ರಸಾರ ಹೊಂದಿವೆ. ಒಟ್ಟು 718 ದೈನಿಕಗಳಲ್ಲಿ ಕೇವಲ 7 ದೈನಿಕಗಳು ಮಾತ್ರ 1 ಲಕ್ಷಕ್ಕಿಂತ ಹೆಚ್ಚು (ಒಟ್ಟು 16.6 ಲಕ್ಷ), 50 ಸಾವಿರದಿಂದ 1 ಲಕ್ಷ ನಡುವೆ 10, 25ರಿಂದ 50 ಸಾವಿರ ನಡುವೆ 40 ದೈನಿಕಗಳು ಪ್ರಸಾರ ಹೊಂದಿದ್ದವು. ಉಳಿದೆಲ್ಲ ಒಟ್ಟು (ವಾರ/ಮಾಸಿಕ ಇತ್ಯಾದಿ) 618 ಪತ್ರಿಕೆಗಳಲ್ಲಿ 25ರಿಂದ 50 ಸಾವಿರ ನಡುವೆ 7 ಪತ್ರಿಕೆಗಳು 2.75 ಲಕ್ಷ, 15ರಿಂದ 25 ಸಾವಿರ ನಡುವೆ 4 ಪತ್ರಿಕೆಗಳು 0.8 ಲಕ್ಷ ಪ್ರಸಾರ ಹೊಂದಿದ್ದವು. 540 ಪತ್ರಿಕೆಗಳು 2 ಸಾವಿರಕ್ಕಿಂತ ಕಡಿಮೆ ಪ್ರಸಾರ ಹೊಂದಿದ್ದವು. ಆದರೆ ಇವು ದೈನಿಕವಲ್ಲದ ಎಲ್ಲ ಪತ್ರಿಕೆಗಳ 15.7 ಲಕ್ಷ ಪ್ರಸಾರದಲ್ಲಿ ಅರ್ಧಕ್ಕಿಂತಲೂ ಹೆಚ್ಚು (7.9 ಲಕ್ಷ) ಪ್ರಸಾರ ಹೊಂದಿದ್ದವು.



ವಾರ್ತಾ ಮತ್ತು ಪ್ರಸಾರ ಇಲಾಖೆಯ 2021–22 ವರದಿ ಪ್ರಕಾರ 651 ಕನ್ನಡ ದೈನಿಕಗಳ ಒಟ್ಟು ಪ್ರಸಾರ 59.2 ಲಕ್ಷ ಆಗಿತ್ತು. ಆ ವರ್ಷವೂ ಕೇವಲ 7 ದೈನಿಕಗಳಿಗೆ ಮಾತ್ರ 1 ಲಕ್ಷಕ್ಕಿಂತ ಹೆಚ್ಚು (ಒಟ್ಟು 17 ಲಕ್ಷ) ಪ್ರಸಾರವಿತ್ತು. 50 ಸಾವಿರ– 1 ಲಕ್ಷ ನಡುವೆ 9, 25–50 ಸಾವಿರ ನಡುವೆ 38 ದೈನಿಕಗಳು ಪ್ರಸಾರ ಹೊಂದಿದ್ದವು. ಉಳಿದೆಲ್ಲ ಒಟ್ಟು (ವಾರ/ಮಾಸಿಕ ಇತ್ಯಾದಿ) 648 ಪತ್ರಿಕೆಗಳಲ್ಲಿ 25–50 ಸಾವಿರ ನಡುವೆ 7 ಪತ್ರಿಕೆಗಳು 2.8 ಲಕ್ಷ, 15–25 ಸಾವಿರ ನಡುವೆ 6 ಪತ್ರಿಕೆಗಳು 1.1 ಲಕ್ಷ ಪ್ರಸಾರ ಹೊಂದಿದ್ದವು. 574 ಪತ್ರಿಕೆಗಳು 2 ಸಾವಿರಕ್ಕಿಂತ ಕಡಿಮೆ ಪ್ರಸಾರ ಹೊಂದಿದ್ದವು. ಆದರೆ ಇವು ದೈನಿಕವಲ್ಲದ ಎಲ್ಲ ಪತ್ರಿಕೆಗಳ 16.5 ಲಕ್ಷ ಪ್ರಸಾರದಲ್ಲಿ ಅರ್ಧಕ್ಕಿಂತಲೂ ಹೆಚ್ಚು (8.6 ಲಕ್ಷ) ಪ್ರಸಾರ ಹೊಂದಿದ್ದವು.

ಮೇಲಿನ 2022–23 ಅಂಕೆಸಂಖ್ಯೆಗಳನ್ನು 2021–22 ಕ್ಕೆ ಹೋಲಿಸಿದರೆ ಈ ಅಂಶಗಳನ್ನು ಗಮನಿಸಬಹುದು.

* ಒಟ್ಟು ದೈನಿಕಗಳ ಸಂಖ್ಯೆ, ಪ್ರಸಾರ (8.6%) ಹೆಚ್ಚಿದೆ; ಆದರೆ ಟಾಪ್ 7 ದೈನಿಕಗಳ ಪ್ರಸಾರ 17 ರಿಂದ 16.6 ಲಕ್ಷಕ್ಕೆ ಕುಸಿದಿದೆ.
* ದೈನಿಕವಲ್ಲದ ಪತ್ರಿಕೆಗಳ ಒಟ್ಟು ಪ್ರಸಾರ ಶೇ.5 ಕಡಿಮೆಯಾಗಿದೆ;
* ದೈನಿಕವಲ್ಲದ ಅತಿ ದೊಡ್ಡ (ಪ್ರಸಾರ –15 ಸಾವಿರ) ಪತ್ರಿಕೆಗಳ ಸಂಖ್ಯೆ 13ರಿಂದ 11ಕ್ಕೆ ಮತ್ತು ಒಟ್ಟು ಪ್ರಸಾರ 3.9 ಲಕ್ಷದಿಂದ 3.55 ಲಕ್ಷಕ್ಕೆ ಇಳಿದಿದೆ.

ಭಾರತದ ಭಾಷೆಗಳಲ್ಲಿ ಕನ್ನಡ 6 ನೇ ಸ್ಥಾನದಲ್ಲಿದ್ದು ಹಿಂದಿ, ಇಂಗ್ಲಿಷ್, ಮಲಯಾಳಂ, ತೆಲುಗು, ಮರಾಠಿಗಳಿಗಿಂತ ಕನ್ನಡ ಹಿಂದಿದೆ. ಭಾರತದ ಅತಿ ಹೆಚ್ಚು ಪ್ರಸಾರ ಇರುವ 10 ದೈನಿಕಗಳಲ್ಲಿ ಕನ್ನಡದ ಯಾವ ಪತ್ರಿಕೆಯೂ ಇಲ್ಲ. ಈ ಪಟ್ಟಿಯಲ್ಲಿ 2 ಮಲಯಾಳಂ, ತಲಾ ಒಂದು ಇಂಗ್ಲಿಷ್, ತಮಿಳು ಮತ್ತು ಮರಾಠಿ, ಹಾಗೂ 5 ಹಿಂದಿ ದೈನಿಕಗಳಿವೆ. ವಿಜಯ ಕರ್ನಾಟಕ, ವಿಜಯವಾಣಿ, ಪ್ರಜಾವಾಣಿ, ಉದಯವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ, ವಾರ್ತಾಭಾರತಿ ಅನುಕ್ರಮವಾಗಿ ಅತಿ ಹೆಚ್ಚು ಪ್ರಸಾರ ಇರುವ 7 ಪತ್ರಿಕೆಗಳು. ಪ್ರಜಾವಾಣಿ, ವಾರ್ತಾಭಾರತಿ ಬಿಟ್ಟರೆ ಇತರ ಎಲ್ಲಾ ಪ್ರಮುಖ ದೈನಿಕಗಳು ಬಿಜೆಪಿ–ಪರ ಮತ್ತು ಅದರ ಕೋಮುವಾದಿ ಸಂಕಥನದ ಜತೆ ತಾಳ ಹಾಕುತ್ತಿವೆ. ಪ್ರಜಾವಾಣಿ ಸಹ ಹಲವು ಸುದ್ದಿ, ಕವರೇಜ್ ಮತ್ತು ಸ್ಥಳೀಯ ಆವೃತ್ತಿಗಳಲ್ಲಿ ಬಿಜೆಪಿ ಸಂಕಥನ ತೂರಿ ಬರುತ್ತದೆ.

ಇ.ವೈ–ಫಿಕ್ಕಿ (EY-FICCI) ಸಮೀಕ್ಷೆ ಪ್ರಕಾರ ಸಹ ಪ್ರಿಂಟ್ ದೈನಿಕ ಮತ್ತು ಪತ್ರಿಕೆಗಳ ಪ್ರಸಾರದ ಏರಿಕೆ ದರ ಹಲವು ವರ್ಷಗಳಿಂದ ಕಡಿಮೆಯಾಗುತ್ತಿದ್ದು ಈಗ ಸಣ್ಣ ಏರಿಕೆ ಮಾತ್ರ ಕಾಣುತ್ತಿದ್ದು, ಇನ್ನು 2–3 ವರ್ಷಗಳಲ್ಲಿ ಸ್ಥಗಿತತೆ ಕಾಣಲಿದೆ. ಪ್ರಿಂಟ್ ಪತ್ರಿಕೆಗಳು ಹಲವು ಸವಾಲುಗಳನ್ನು ಎದುರಿಸುತ್ತಿದ್ದು ಈಗಿರುವ ದೊಡ್ಡ ಪತ್ರಿಕೆಗಳು ಈಗಿನ ಮಟ್ಟದ ಪ್ರಸಾರ ಉಳಿಸಿಕೊಳ್ಳಲು ಹರಸಾಹಸ ಮಾಡಬೇಕಾಗುತ್ತದೆ.

ದೈನಿಕಗಳ ಸವಾಲುಗಳು:

ದೊಡ್ಡ ಜಾಹೀರಾತಿಗೂ, ಸುದ್ದಿಯ ಪ್ರಧಾನ ವಿಶ್ವಾಸಾರ್ಹ ಮೂಲವಾಗಿ ಉಳಿಯಲು, ಜನಮನವನ್ನು ಪ್ರಭಾವಿಸುವ ಅವಕಾಶಕ್ಕೆ – ಟಿವಿ ಜತೆ ಪೈಪೋಟಿ ಮಾಡಬೇಕಾದ ಪತ್ರಿಕೆಗಳು ಪ್ರಧಾನ ಮಾಧ್ಯಮದ ಸ್ಥಾನ ಯಾವಾಗಲೋ ಕಳೆದುಕೊಂಡಿವೆ. ಟಿವಿ ಜತೆ ಪೈಪೋಟಿಗಿಳಿದು ಅಭಿಪ್ರಾಯಗಳಲ್ಲಿ ಬಹುತ್ವದ ಬದಲು ಆಳುವವರಿಗೆ ಪ್ರಿಯವಾಗುವ ಏಕಾಭಿಪ್ರಾಯಕ್ಕೆ, ಜನ–ಮರುಳು ರೋಚಕತೆಗೆ, ಉದ್ರೇಕಕ್ಕೆ ಪ್ರಾಮುಖ್ಯತೆ ಕೊಡುತ್ತಿವೆ. ಆದರೂ ಮೊದಲಿಗಿಂತ ದುರ್ಬಲವಾಗುತ್ತಿದ್ದರೂ, ಸ್ವಲ್ಪ ಮಟ್ಟಿಗಾದರೂ ಸುದ್ದಿ–ವಿಶ್ಲೇಷಣೆಗಳಲ್ಲಿ ವಿಶ್ವಾಸಾರ್ಹತೆ ಉಳಿಸಿಕೊಂಡಿವೆ, ಜನರನ್ನು ತಟ್ಟುವ ವಿಷಯಗಳ ಬಗ್ಗೆ ಸ್ಪಂದಿಸುತ್ತಿವೆ, ಸೆಕ್ಯುಲರ್ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಸ್ವಲ್ಪವಾದರೂ ಅವಕಾಶ ಕೊಡುತ್ತಿವೆ. ಆದರೆ ಆನ್ ಲೈನ್, ಟಿವಿ ಮುಂತಾದ ಸವಾಲುಗಳ ನಡುವೆಯೂ ಭಾರತದಲ್ಲಿ ಈಗಲೂ ಅತ್ಯಂತ ವಿಶ್ವಾಸಾರ್ಹ ಸುದ್ದಿ, ಮಾಹಿತಿಗಳ ಮೂಲ ಎಂದು ಜನ ಪರಿಗಣಿಸುತ್ತಾರೆ ಎಂದು ಹಲವು ಸಮೀಕ್ಷೆಗಳು ಹೇಳಿವೆ.

ಕನ್ನಡ ಸ್ವತಂತ್ರ ಮ್ಯಾಗಝೀನ್‌ಗಳು:

ಕನ್ನಡದ ಸ್ವತಂತ್ರ ಮ್ಯಾಗಜಿನ್‌ಗಳು, ಅದರಲ್ಲೂ ವಾರಪತ್ರಿಕೆಗಳು ಎದುರಿಸುತ್ತಿರುವ ಬಿಕ್ಕಟ್ಟು ನಮ್ಮ ಕಣ್ಣ ಮುಂದಿದೆ. ಗೌರಿ ಮೀಡಿಯಾ ಟ್ರಸ್ಟ್ ಅಡಿಯಲ್ಲಿ ಸಾಕಷ್ಟು ಸಂಪನ್ಮೂಲ ಸಂಗ್ರಹಿಸಿ, 'ಗೌರಿ ಲಂಕೇಶ್' ಪತ್ರಿಕೆಯ ಹೊಸ ಅವತಾರವಾಗಿ 'ನ್ಯಾಯಪಥ' ವಾರಪತ್ರಿಕೆ ಆರಂಭವಾಗಿದೆ. 'ಗೌರಿ ಲಂಕೇಶ್' ಪತ್ರಿಕೆಯ ಸಂಪಾದಕೀಯ (ಸೆನ್ಸೇಶನಲಿಸಂ ಕಡಿಮೆ ಮಾಡಿದೆ) ಮತ್ತು ಪ್ರಸಾರ (ಅಂಗಡಿಗಳಲ್ಲಿ ನೇರ ಮಾರಾಟದ ಬದಲು ವಾರ್ಷಿಕ ಚಂದಾ) ಎರಡೂ ನೀತಿಗಳಲ್ಲೂ ಕೆಲವು ಗಮನಾರ್ಹ ಬದಲಾವಣೆಗಳನ್ನು ಮಾಡಿಕೊಂಡು 'ನ್ಯಾಯಪಥ' ಮುನ್ನಡೆಯುತ್ತಿದೆ. ಆದರೆ ಇತ್ತೀಚೆಗೆ ಅದು ಪಾಕ್ಷಿಕ ಪತ್ರಿಕೆಯಾಗಿ ಬದಲಾಗಿದೆ. ಅದರ ಚಂದಾದಾರರ ಸಂಖ್ಯೆ ಬಗ್ಗೆ ನಿಖರ ಮಾಹಿತಿ ಇಲ್ಲವಾದರೂ, ಈ ಬದಲಾವಣೆಯೇ ಅದರ ಚಂದಾದಾರರ ಸಂಖ್ಯೆ ಕಡಿಮೆಯಾಗಿದೆ ಮತ್ತು ಸವಾಲುಗಳನ್ನು ಎದುರಿಸುತ್ತಿದೆ ಎಂಬುದನ್ನು ತೋರಿಸುತ್ತದೆ. ಈಗಾಗಲೇ ದೀರ್ಘ ಕಾಲದಿಂದ ನಿಯಮಿತವಾಗಿ ಪ್ರಕಟವಾಗುತ್ತಿರುವ 'ಹೊಸತು', 'ಸಂವಾದ' ಇತ್ಯಾದಿ ತಮ್ಮ ಗುಣಮಟ್ಟ ಕಾಪಾಡಿಕೊಂಡು ಮುಂದುವರೆಯುತ್ತಿವೆ. ಕಳೆದ ಅವಧಿಯಲ್ಲಿ ಆರಂಭವಾದ ಹೊಸ ಮಾಸಿಕ 'ಸಮಾಜಮುಖಿ' ಉತ್ತಮವಾಗಿ ಬರುತ್ತಿದೆ. ಕಳೆದ ಅವಧಿಯಲ್ಲಿ ಆರಂಭವಾದ ಸಾಹಿತ್ಯಿಕ ಪತ್ರಿಕೆ 'ಸಂಗಾತ' ಸಹ ಉತ್ತಮವಾಗಿ ಬರುತ್ತಿದೆ. ಆದರೆ ಇವುಗಳ ಪ್ರಸಾರದ ಕುರಿತು ಮಾಹಿತಿಯಿಲ್ಲ.

ಸುದ್ದಿ ವೆಬ್/ಟಿವಿಗಳಲ್ಲಿ ಕ್ಷಣಕ್ಷಣಕ್ಕೂ ಸುದ್ದಿ, ದಿನಪತ್ರಿಕೆಗಳಲ್ಲಿ ವಿವರವಾದ ಸುದ್ದಿ ಮತ್ತು ಸಾಕಷ್ಟು ವಿಶ್ಲೇಷಣೆಯೂ ದೊರೆಯುತ್ತದೆ ಹಾಗೂ ದೊಡ್ಡ ಪತ್ರಿಕಾ ಸಮೂಹದ ಭಾಗವಾಗಿರುವ ವಾರಪತ್ರಿಕೆ/ಮ್ಯಾಗಜೀನುಗಳು ಕತೆ–ಕವನ ಲೇಖನಗಳನ್ನು ಕೊಡುತ್ತವೆ. ಹಾಗಾಗಿ ಸ್ವತಂತ್ರ ವಾರಪತ್ರಿಕೆಗಳು ಆಳವಾದ ವಿಶ್ಲೇಷಣೆಯನ್ನು ಮತ್ತು ಇತರ ಮ್ಯಾಗಜೀನುಗಳು ಕೊಡದ ಆದರೆ ತಮ್ಮ ನಿರ್ದಿಷ್ಟ ಓದುಗರಿಗೆ ಬೇಕಾದ್ದನ್ನು ಕೊಡಬೇಕಾಗುತ್ತದೆ. ರಾಜ್ಯಮಟ್ಟದ ಸ್ವತಂತ್ರ ವಾರಪತ್ರಿಕೆಗಳು ಹೀಗೆ ಅಸ್ತಿತ್ವದ ಬಿಕ್ಕಟ್ಟು ಎದುರಿಸುತ್ತಿದ್ದರೂ, ಜಿಲ್ಲಾ/ತಾಲೂಕು ಮಟ್ಟದ ಸ್ಥಳೀಯ (ದಿನಪತ್ರಿಕೆಗಳು ಸೇರಿದಂತೆ) ಪತ್ರಿಕೆಗಳು ಸಂಖ್ಯೆಯಲ್ಲೂ ಪ್ರಸಾರದಲ್ಲೂ ಹೆಚ್ಚುತ್ತಿರುವಂತೆ ಕಾಣುತ್ತದೆ. ಆದರೆ ಈ ಬಗ್ಗೆ ನಿಖರವಾದ ಮಾಹಿತಿ ಇಲ್ಲ. ಎಡಪಂಥೀಯ ಪತ್ರಿಕೆಗಳಾದ ಜನಶಕ್ತಿ, ಕೆಂಬಾವುಟ ಇವು ಎಲ್ಲ ಕಷ್ಟಗಳನ್ನು ಎದುರಿಸುತ್ತಿದ್ದರೂ ಪ್ರಕಟಣೆ ಮುಂದುವರೆಸಿವೆ.

ಕರ್ನಾಟಕದಲ್ಲೂ ವೆಬ್ ಸಂಪರ್ಕ ಇನ್ನಷ್ಟು ವಿಸ್ತಾರ

ಕರ್ನಾಟಕದಲ್ಲಿ 2023ರ ಕೊನೆಯ ಹೊತ್ತಿಗೆ ಶೇ. 82ರಷ್ಟು ಜನ ವೆಬ್ ಸಂಪರ್ಕ ಹೊಂದಿದ್ದಾರೆ. ಗ್ರಾಮೀಣ ವೆಬ್ ಸಂಪರ್ಕ ದರ ಶೇ.55 ಇದೆ. ಶೇ.95ರಷ್ಟು ಜನ ವೆಬ್ ಸಂಪರ್ಕವನ್ನು ಮೊಬೈಲ್ ಮೂಲಕವೇ ಹೊಂದಿದ್ದಾರೆ. ಆದರೂ ವೆಬ್ ಸಂಪರ್ಕದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ, ಹಾಗೂ ಅವುಗಳ ಒಳಗೂ ವರ್ಗ, ಜಾತಿ, ಲಿಂಗ, ಪ್ರದೇಶಗಳ ಆಧಾರದ ಮೇಲೆ ಭಾರೀ ಅಸಮಾನತೆಗಳಿವೆ. ಉದಾಹರಣೆಗೆ, ರಾಷ್ಟ್ರೀಯ ಆರೋಗ್ಯ ಸಮೀಕ್ಷೆ 2019–20 ಪ್ರಕಾರ, ನಗರ ಪ್ರದೇಶಗಳ ಶೇ.35 ಮಹಿಳೆಯರಿಗೆ ಮಾತ್ರ ವೆಬ್ ಸಂಪರ್ಕ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಶೇ. ➚

ಕನ್ನಡ ಕಾವ್ಯ ಪರಂಪರೆ........ ಪುಟ 4 ರಿಂದ

ಯಾವುದೋ ನೆಪದಿಂದ ಆಯುಧವನ್ನು ಎಸೆದು ಸತ್ತವರ ಉದಾಹರಣೆ ನಮ್ಮ ಮುಂದಿಲ್ಲವೇ?' ಎಂದು ಅಶ್ವತ್ಥಾಮನನ್ನು ಅಣಕಿಸುತ್ತಾನೆ. ಕೌರವ ಇಬ್ಬರನ್ನೂ ಹೇಗೋ ಸಮಾಧಾನಿಸುತ್ತಾನೆ. ಶಲ್ಯ ಸಾರಥ್ಯ ಸಂದರ್ಭದಲ್ಲಿಯೂ ಮತ್ತೆ ಕುಲದ ವಿಷಯ ಮುನ್ನೆಲೆಗೆ ಬರುತ್ತದೆ. 'ಮಾವಾ ಕರ್ಣಂಗೆ ಸಾರಥಿಯಾಗಿ' ಎಂದು ಕೌರವ ಬೇಡಿ ಕೊಂಡಾಗ ಸಿಟ್ಟಿನಿಂದ ಬೆವತು ಹೋದ ಶಲ್ಯನು– 'ನೀವು ಅರಸರು ಕಲಿಯನ್ನು ಹೇಡಿಯನ್ನಾಗಿ ಮಾಡಬಲ್ಲಿರಿ, ಹೇಡಿಯನ್ನು ಕಲಿಯನ್ನಾಗಿ ಮಾಡಬಲ್ಲಿರಿ' ಎಂದು ಛೇಡಿಸುತ್ತಾನೆ.

ಹೀಗೆ ಪ್ರತಿ ಹಂತದಲ್ಲೂ ಕುಲದ ಪ್ರಶ್ನೆಯೇ ಇದಿರಾದಾಗ ಅದನ್ನು ನಿವಾರಿಸಿಕೊಳ್ಳಲೇಬೇಕಾದ ಒತ್ತಡಕ್ಕೆ ಕರ್ಣ ಗುರಿಯಾಗುತ್ತಾನೆ. ಇಂಥ ಪರಿಸ್ಥಿತಿಗಳ ಬಗ್ಗೆ ಪಂಪನಿಗೆ ಆಳವಾದ ತಿಳಿವಳಿಕೆಯಿತ್ತು. ಹಾಗಾಗಿಯೇ ಆತ ತನ್ನ ಕಾವ್ಯದ ನಾಯಕ ಅರ್ಜುನನೇ ಹೌದಾದರೂ, ಅದನ್ನು ಮರೆತು 'ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂನೆನೆವೊಡೆ ಕರ್ಣನಂನೆನೆಯ' ಎಂದು ಕರ್ಣನ ಗುಣಗಾನ ಮಾಡುತ್ತಾನೆ. ದೊಡ್ಡ ಕವಿಗಳಿಗೆ ಮಾತ್ರ ಸಾಧ್ಯವಾಗುವ ಸಂಗತಿಯಿದು. ಅವರು ಬರೆಯುವ ಹೊತ್ತಲ್ಲಿ ಎಲ್ಲ ಹಂಗುಗಳಿಂದ ಪಾರಾಗುತ್ತಾರೆ. ವ್ಯಾಸಭಾರತದಲ್ಲಿ ದುಷ್ಟ ಚತುಷ್ಟಯರಲ್ಲಿ ಒಬ್ಬನಾದ ಕರ್ಣನನ್ನು ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಉದಾತ್ತೀಕರಿಸುವುದೇ ಬಹಳ ದೊಡ್ಡ ಪ್ರತಿಭಟನೆ.

ಧರ್ಮದ ಚೌಕಟ್ಟನ್ನು ಮೀರಿ

'ಆದಿ ಪುರಾಣ'ವು ಧಾರ್ಮಿಕ ಕಾವ್ಯವಾದರೂ ಪಂಪನು ಅನೇಕ ಕಡೆಗಳಲ್ಲಿ ಧರ್ಮದ ಚೌಕಟ್ಟನ್ನು ಮೀರಿ ಕಾವ್ಯಧರ್ಮವನ್ನು ಮೆರೆಯುತ್ತಾನೆ. ಜೈನಮತಕ್ಕೆ ಅನುಗುಣವಾಗುವಂತೆ, ಭೋಗನಿರಸನ ಪ್ರಕ್ರಿಯೆಯನ್ನು ಪಂಪ ವರ್ಣಿಸಲೇಬೇಕು. ಆದರೆ ಇಂಥ ಸಂದರ್ಭದಲ್ಲಿ ಪಂಪನು ತನಗಿದ್ದ ಕಾವ್ಯ ಸ್ವಾತಂತ್ರ್ಯವನ್ನು ಧರ್ಮಕ್ಕೆ ಬಲಿಗೊಡದೆ, ಕಾವ್ಯಧರ್ಮವನ್ನೇ ಎತ್ತಿ ಹಿಡಿಯುತ್ತಾನೆ. ಮಹಾಬಳನ ಭೋಗ ತೀವ್ರತೆ, ಲಲಿತಾಂಗ–ಸ್ವಯಂ ಪ್ರಭೆಯರಸುರತ ಸುಖ, ವಜ್ರಜಂಘ–ಶ್ರೀಮತಿಯರ ಮಾಗಿದ ಪ್ರೇಮಗಳನ್ನು ಪಂಪ ವರ್ಣಿಸಿ ದಣಿಯನು. 'ಪ್ರಾಣವಲ್ಲಭರು ಜೊತೆಗೆ ಅಪ್ಪುಗೆಯಲ್ಲಿಯೇ ಸತ್ತರೆ ಅದಕ್ಕಿಂತ ಪುಣ್ಯವಿನ್ನೇನಿದೆ!' ಎಂದಾತ ಒಂದು ಹಂತದಲ್ಲಿ ಉದ್ಗರಿಸುತ್ತಾನೆ. ಅವನ ಕಥಾನಾಯಕನಾದ ಆದಿನಾಥನು ಮೂರು ತಿಂಗಳುಗಳ ಕಾಲ ಅನ್ನ ನೀರಿಲ್ಲದೆ ನಿಂತು ಬಿಟ್ಟಾಗ ಅವನನ್ನು ಅನುಸರಿಸುತ್ತಿದ್ದ ಕಚ್ಛಮಹಾ ಕಚ್ಛಾದಿಗಳು ಆಡುವ ಮಾತು ಗಮನಿಸಿ–

'ಒಂದು ದಿನ ಇಲ್ಲವೆ ಎರಡೋ ಮೂರೋ ದಿನ ಹೀಗೆ ಮೌನವಾಗಿ ನಿಲ್ಲಬಹುದು. ಆದರೆ ಇದೇನಿದು ಅಲುಗಾಡದೆ ಈ ಆದಿನಾಥನು ಹೀಗೆ ಮೂರು ತಿಂಗಳ ಕಾಲ ನಿಂತು ಬಿಟ್ಟನಲ್ಲ! ಇಲ್ಲಿ ಶನಿ ನಿಂತ ಹಾಗೆ! ಹೀಗೆ ನಿಲ್ಲುವವನೂ ಇದ್ದಾನಾ?.. ಕೂಳು ನೀರು ಇಲ್ಲದೆ ಈ ಒಡಲನ್ನು ಹೇಗಾದರೂ ಕಾಪಾಡಿಕೊಳ್ಳೋಣ?' ಎಂಬಂಥ ಬಹಳ ದಿಟ್ಟವಾದ ಪ್ರಶ್ನೆಗಳನ್ನು ಆತ ಕೇಳುತ್ತಾನೆ.

(ಮುಂದುವರಿಯುತ್ತದೆ.)

24.8 ಮಹಿಳೆಯರಿಗೆ ಮಾತ್ರ ವೆಬ್ ಸಂಪರ್ಕ ಇದೆ ಎಂಬುದನ್ನು ಗಮನಿಸಬೇಕು.

'ಜನತಾ ಮಾಧ್ಯಮ'ದ ಪರಿಕಲ್ಪನೆ

ಕಮ್ಯುನಿಸ್ಟ್ ಪಕ್ಷ ಕಟ್ಟುವುದನ್ನು ಪತ್ರಿಕೆಯಿಂದ ಪ್ರಾರಂಭಿಸಬೇಕು ಎಂದು ಲೆನಿನ್ ನೂರು ವರ್ಷಕ್ಕೂ ಹಿಂದೆ ಹೇಳಿದ್ದರು. 'ಪಕ್ಷದ ಪತ್ರಿಕೆ ಸಾಮೂಹಿಕ ಪ್ರಚಾರಕ, ಸಾಮೂಹಿಕ ಚಳುವಳಿಕಾರ ಮಾತ್ರವಲ್ಲ, ಸಾಮೂಹಿಕ ಸಂಘಟಕ ಕೂಡಾ' ಎಂದು ಪತ್ರಿಕೆಯ ಬಗ್ಗೆ ಅವರು ಮಾರ್ಮಿಕವಾಗಿ ಹೇಳಿದ್ದರು. ಇಂದು ಒಂದು ಶತಮಾನದ ನಂತರ 'ಪತ್ರಿಕೆ' ಎಂಬುದನ್ನು ಸಾಮಾನ್ಯೀಕರಿಸಿ 'ಮಾಧ್ಯಮ' (ಅಥವಾ ಎಲ್ಲಾ ರೀತಿಯ ಪ್ರಕಟಣೆಗಳು) ಎಂದು ಅರ್ಥೈಸಬೇಕಾಗುತ್ತದೆ.

ಸಿಪಿಐ(ಎಂ) ಮತ್ತು ಎಡ ಪಕ್ಷಗಳು ದೇಶದಲ್ಲೂ ನಮ್ಮ ರಾಜ್ಯದಲ್ಲೂ ರಾಜಕೀಯವಾಗಿ ತೀವ್ರ ಮುನ್ನಡೆ ಸಾಧಿಸಲು, ಬದಲಿ 'ಜನತಾ ಮಾಧ್ಯಮ' ಕಟ್ಟುವ ಕೆಲಸದ ಬಗ್ಗೆ ಮುತುವರ್ಜಿ ವಹಿಸುವುದು ತುರ್ತು ಅಗತ್ಯ. ಪಿ. ಸಾಯಿನಾಥ, ಪ್ರಬೀರ್ ಪುರಕಾಯಸ್ಥ ರಂತಹ ಬುದ್ಧಿಜೀವಿಗಳು ಸೈದ್ಧಾಂತಿಕ ವಿಶ್ಲೇಷಣೆ ಮತ್ತು ಪ್ರಾಯೋಗಿಕ ಅನುಭವಗಳ ಆಧಾರದ ಮೇಲೆ ನಿರೂಪಿಸಿರುವ ವಿಶ್ಲೇಷಣೆ, ಅನುಭವಗಳ ಆಧಾರದ ಮೇಲೆ 'ಜನತಾ ಮಾಧ್ಯಮ'ದ ಪರಿಕಲ್ಪನೆಯನ್ನು ಈ ಕೆಳಗಿನಂತೆ ವಿವರಿಸಬಹುದು:

ಇಂದು 'ಮುಖ್ಯವಾಹಿನಿ ಮಾಧ್ಯಮ' ಎಂದು ಕರೆಸಿಕೊಳ್ಳುವಂತಹದು ಯಾವುದೇ ಅರ್ಥದಲ್ಲಿ ಮುಖ್ಯವಾಹಿನಿಯ ಮಾಧ್ಯಮವಲ್ಲ. ಈ ಮಾಧ್ಯಮಗಳಿಗೆ ಈಗ ದೇಶದ 'ಮುಖ್ಯವಾಹಿನಿ'ಯ ಶೇ. 90ರಷ್ಟು ಇರುವ ಜನರ ಜೀವನ, ಸಮಸ್ಯೆಗಳ ಕುರಿತು ಅರಿವಿಲ್ಲ, ಅದು ಬೇಕಾಗಿಯೂ ಇಲ್ಲ. ಅವರನ್ನು ಉದ್ದೇಶಿಸುವುದು ಕೂಡಾ ಅವರಿಗೆ ಬೇಕಾಗಿಲ್ಲ. ಅವರಿಗೆ ಬೇಕಾಗಿರುವುದು ಕಾರ್ಪೊರೆಟ್ ಕಂಪನಿಗಳ ಉತ್ಪನ್ನಗಳಿಗೆ ಗ್ರಾಹಕರನ್ನು ಒದಗಿಸುವುದರ ಸುತ್ತ ಮಾತ್ರ. ಅದರ ಎಲ್ಲ ಚಟುವಟಿಕೆಗಳು ಗಿರಕಿ ಹೊಡೆಯುತ್ತವೆ. ಇದು (ಕೆಲವು ಅಪರೂಪದ ಅಪವಾದಗಳನ್ನು ಬಿಟ್ಟರೆ) ಕಾರ್ಪೊರೆಟ್ ಕಂಪನಿಗಳ ನೇರ/ಪರೋಕ್ಷ ಒಡೆತನ/ನಿಯಂತ್ರಣದಲ್ಲಿರುವ, ಅವುಗಳ ಹಿತಾಸಕ್ತಿ ಕಾಪಾಡುವ ಆಳುವ ವರ್ಗಗಳ/ಪಕ್ಷಗಳ ನೀತಿಗಳ ಬೆಂಬಲಕ್ಕೆ ಟೊಂಕಕಟ್ಟಿ ನಿಂತಿರುವ, ಅದಕ್ಕೆ ಕುರುಡು ಹಿಂಬಾಲಕರನ್ನು ಶೇ. 90ರಷ್ಟು ಇರುವ ಜನರಲ್ಲಿ ಸೃಷ್ಟಿಸುವ ಉದ್ದೇಶವಿರುವ 'ಕಾರ್ಪೊರೆಟ್ ಮಾಧ್ಯಮ'. ಜನಮಾನಸವನ್ನು ಈ 'ಕಾರ್ಪೊರೆಟ್ ಮಾಧ್ಯಮ'ದ ಹಿಡಿತದಿಂದ ವಿಮೋಚನೆ ಮಾಡುವುದು 'ಜನತಾ ಮಾಧ್ಯಮ'ದ ಮುಖ್ಯ ಕೆಲಸ. 'ಜನತಾ ಮಾಧ್ಯಮ' ಜಾಗತಿಕ ದೈತ್ಯ ಟೆಕ್ ವೇದಿಕೆಗಳ (ಗೂಗಲ್, ಫೇಸ್ ಬುಕ್, ಯೂಟ್ಯೂಬ್, ಟ್ವಿಟರ್, ವಾಟ್ಸಪ್ – ಇವೂ ದೈತ್ಯ ಜಾಗತಿಕ ಕಾರ್ಪೊರೆಟ್ ಗಳೇ) ಮೇಲೆ ಆಧಾರಿತ 'ಸಾಮಾಜಿಕ ಮಾಧ್ಯಮ'ಕ್ಕಿಂತ ಭಿನ್ನವಾದದ್ದು, ಅವುಗಳನ್ನು ಬಳಸಿಕೊಳ್ಳುತ್ತಲೇ, ಅವುಗಳ ಮೇಲೆನೇ ಪೂರ್ಣವಾಗಿ ಅವಲಂಬಿತವಾಗಿರಬಾರದು. ಈ ದೈತ್ಯ ಟೆಕ್ ವೇದಿಕೆಗಳನ್ನು ಸಾರ್ವಜನಿಕ ಪ್ರಜಾಸತ್ತಾತ್ಮಕ ನಿಬಂಧನೆಗಳಿಗೆ ಒಳಪಡಿಸಲು ಹೋರಾಡಬೇಕು.

'ಜನತಾ ಮಾಧ್ಯಮ'ವು ಮೊದಲನೆಯದಾಗಿ ಮಾಧ್ಯಮವಾಗಿರಬೇಕು. ಹೇಳಬೇಕಾದ್ದನ್ನು



ಹೇಳಬೇಕಾದವರಿಗೆ (ಜನತೆಯ ಶೇ.90) ಆಸಕ್ತಿಕಾರಕವಾಗಿ ಮುಟ್ಟಿಸುವ ಕೌಶಲ್ಯ, ಕಲೆಗಾರಿಕೆಯನ್ನು ಬೆಳೆಸಿಕೊಳ್ಳಬೇಕು. ಈ ನಿಟ್ಟಿನಲ್ಲಿ 'ಕಾರ್ಪೊರೆಟ್ ಮಾಧ್ಯಮ'ದ ಸಂವಹನ, ತಾಂತ್ರಿಕ ಅಂಶಗಳಿಂದ ಉತ್ತಮವಾದದ್ದನ್ನು ಕಲಿಯಬೇಕು. 'ಜನತಾ ಮಾಧ್ಯಮ' ಈಗ 'ಎಡ ಪ್ರಜಾಸತ್ತಾತ್ಮಕ ರಂಗ'ದ (ದೀರ್ಘಕಾಲೀನವಾಗಿ 'ಜನತಾ ಪ್ರಜಾಸತ್ತಾತ್ಮಕ ರಂಗ'ದ) ಎಲ್ಲ ಜನವಿಭಾಗಗಳ ಆಶೋತ್ತರಗಳ ದನಿ ಹಾಗೂ ವ್ಯಾಪಕ ವೇದಿಕೆಯಾಗಬೇಕು. ರಾಜಕೀಯ ಪಕ್ಷಗಳ ಬರಿಯ ಮುಖವಾಣಿ ಅಥವಾ ಬಾಲಂಗೋಚಿಯಾಗಬಾರದು. ರಾಜಕೀಯ ಪಕ್ಷಗಳು ತಮ್ಮ ಅಭಿಪ್ರಾಯ ಹೇಳಲು ಪ್ರಚಾರ ಮಾಡಲು ತಮ್ಮ ಮುಖವಾಣಿಯನ್ನು ಬೆಳೆಸಬೇಕು. ಆಳುವ ವರ್ಗಗಳ, ಕಾರ್ಪೊರೇಟುಗಳ, ಸರಕಾರಗಳ, ಪಕ್ಷಗಳ ನೀತಿಗಳನ್ನು, ಅವರ ಪರ ಅಭಿಪ್ರಾಯಗಳ ಹಿಂದಿರುವ ಹುನ್ನಾರವನ್ನು ಬಯಲಿಗೆಳೆಯಬೇಕು. 'ಎಡ ಪ್ರಜಾಸತ್ತಾತ್ಮಕ ರಂಗ'ದ ಎಲ್ಲ ಜನವಿಭಾಗಗಳ, ಅವರ ಚಳುವಳಿಗಳು, ಸಂಘಟನೆಗಳ ಜತೆ ನೇರ ಸಂವಹನ ನಡೆಸಬೇಕು. ಅವರಿಗೆ ವೇದಿಕೆಯಾಗಬೇಕು. ಮಾಧ್ಯಮಕ್ಕೆ ಬೇಕಾದ ಸಂಪನ್ಮೂಲ ಸಂಗ್ರಹದಲ್ಲೂ ಅವರ ಬೆಂಬಲವನ್ನು ಪಡೆಯಬೇಕು.

ಇಂದಿನ ಪರಿಸ್ಥಿತಿಯಲ್ಲಿ ಸಾಂಪ್ರದಾಯಿಕ (ಪ್ರಿಂಟ್, ಟಿವಿ, ರೇಡಿಯೊ) ಮಾಧ್ಯಮಗಳಲ್ಲಿ 'ಜನತಾ ಮಾಧ್ಯಮ' ಕಟ್ಟುವ ಸಾಧ್ಯತೆ ಕಡಿಮೆಯಿದೆ. ಸ್ವತಂತ್ರ ವೆಬ್ ಪತ್ರಿಕೆ, ಯೂಟ್ಯೂಬ್ ಸಾಧ್ಯತೆ ಬಹಳ ಹೆಚ್ಚಿದೆ. ಕನ್ನಡದಲ್ಲಿ ಸ್ವತಂತ್ರ ವೆಬ್ ಮಾಧ್ಯಮ ಈ ಅವಧಿಯಲ್ಲಿ ಸಾಕಷ್ಟು ಬೆಳೆದಿದೆ. ಅವು 'ಜನತಾ ಮಾಧ್ಯಮ' ಆಗುವ ಸಾಧ್ಯತೆಯನ್ನು ಇಲ್ಲಿ ಪರಿಶೀಲಿಸಲಾಗಿದೆ.

ಕನ್ನಡದ ವೆಬ್ ಮಾಧ್ಯಮಗಳು

ಕನ್ನಡದಲ್ಲಿ ಪ್ರಮುಖ 5 'ಕಾರ್ಪೊರೆಟ್' ಪತ್ರಿಕೆಗಳ ವೆಬ್ ಆವೃತ್ತಿಗಳಲ್ಲಿ 3 ಚಂದಾ–ಆಧಾರಿತವಾಗಿ ಬದಲಾಗಿವೆ. ಹೆಚ್ಚಿನ ದೈನಿಕ, ಟಿವಿ ಚಾನೆಲುಗಳು ತಮ್ಮ ವೆಬ್ ಪತ್ರಿಕೆ, ಯೂಟ್ಯೂಬ್ ಚಾನೆಲ್ ಆರಂಭಿಸಿ ತಮ್ಮ ಸುದ್ದಿ, ಫೀಚರ್, ಕಾರ್ಯಕ್ರಮಗಳನ್ನು ವೆಬ್ ಮೂಲಕ ಸಹ ಪ್ರಸಾರ ಮಾಡಲು ಪ್ರಯತ್ನಿಸುತ್ತಿವೆ.


ಸುದ್ದಿಯನ್ನು ಸಂಗ್ರಹಿಸಿ ಪ್ರಕಟಿಸುವ ವೆಬ್ ತಾಣಗಳು ಮತ್ತು ಹೊಸ ವೆಬ್ ನಲ್ಲಿ ಮಾತ್ರ ಇರುವ ನಾನುಗೌರಿ, ಜನಶಕ್ತಿ ಮೀಡಿಯಾ, ಪ್ರಸ್ತುತ, ಒನ್ ಇಂಡಿಯಾ, ಪೊಲಿಟಿಕ್, ಇತ್ಯಾದಿ ಹಲವು ಪತ್ರಿಕೆಗಳು ಈಗಾಗಲೇ ಸಕ್ರಿಯವಾಗಿದ್ದವು. ಇನ್ನೂ ಹಲವು ಇದಕ್ಕೆ ಸೇರ್ಪಡೆಯಾಗಿವೆ. ಅವಧಿ, ಕೆಂಡಸಂಪಿಗೆ, ಋತುಮಾನ ದಂತಹ ಸಾಂಸ್ಕೃತಿಕ ಪತ್ರಿಕೆಗಳು ಪ್ರಕಟವಾಗುತ್ತಿವೆ. ಪುಸ್ತಕಗಳ ಲೇಖಕರ ಕುರಿತಾಗಿ ಮಾಹಿತಿ, ಸುದ್ದಿಯನ್ನು ಬಿತ್ತರಿಸಲು ಪುಸ್ತಕಗಳ ಬಿಡುಗಡೆಯ ಲೈವ್ ಪ್ರಸಾರ ಮಾಡುತ್ತಿರುವ ಬುಕ್ ಬ್ರಹ್ಮ ಈ ಅವಧಿಯ ವಿಶಿಷ್ಟ ಹೊಸ ಸೇರ್ಪಡೆ. ಆದರೆ ಬುಕ್ ಬ್ರಹ್ಮ ಪ್ರಗತಿಪರರನ್ನು ಸೇರಿದಂತೆ ಎಲ್ಲರನ್ನೂ ಒಳಗೊಳ್ಳುವ ಸೋಗು ಹಾಕುತ್ತಾ ಬಲಪಂಥೀಯ ಸಂಘಿ ಪುಸ್ತಕಗಳಿಗೆ, ಲೇಖಕರಿಗೆ ಈಗ ಇಲ್ಲದ ಅಂಗೀಕಾರ್ಹತೆ ಒದಗಿಸುತ್ತಿದೆ. ತನಿಖಾ ವರದಿಗಾರಿಕೆಯಲ್ಲೇ ತೊಡಗಿಸಿಕೊಂಡಿರುವ 'ದಿ ಫೈಲ್' ಈ ಅವಧಿಯ ಹೊಸ ವಿಶಿಷ್ಟ ಸೇರ್ಪಡೆ.

ಈದಿನ.ಕಾಂ ವೆಬ್ ಪತ್ರಿಕೆ ದೊಡ್ಡ ಪ್ರಮಾಣದ ಹೂಡಿಕೆ, ರಾಜ್ಯವ್ಯಾಪಿ ಪತ್ರಕರ್ತರ ಪಡೆ, ಇತರ ಮಾರ್ಕೆಟಿಂಗ್ ಸಿಬ್ಬಂದಿ, ಅತ್ಯಾಧುನಿಕ ಪರಿಕರಗಳೊಂದಿಗೆ ಅತ್ಯಂತ ಸುಸಜ್ಜಿತವಾಗಿ ಯೋಜಿತವಾಗಿ ವೆಬ್ ಪತ್ರಿಕೆ ಆರಂಭಿಸಿ ನಡೆಸುತ್ತಿರುವುದು ಕರ್ನಾಟಕದಲ್ಲಿ ಈ ಅವಧಿಯಲ್ಲಿ ಪ್ರಮುಖ ಬೆಳವಣಿಗೆ. ವೆಬ್ ಪತ್ರಿಕೆಯ ಪ್ರಸಾರದ ಬಗ್ಗೆ ನಿಖರ ಮಾಹಿತಿ ಇಲ್ಲವಾದರೂ, ಅದರ ಯೂಟ್ಯೂಬ್ ಬಳಕೆದಾರರ ಸಂಖ್ಯೆ (2.8+ ಲಕ್ಷ) ಮತ್ತು ಬಿಡಿ ವಿಡಿಯೊ ವೀಕ್ಷಣೆ ಸಂಖ್ಯೆ (ಸರಾಸರಿ ಸಾವಿರಗಳಲ್ಲಿ, ಕೆಲವು ಲಕ್ಷಗಳಲ್ಲಿ) ನೋಡಿದರೆ ಅಲ್ಲೂ ಗಮನಾರ್ಹ ಓದುಗರನ್ನು ಪಡೆದಿದೆ. ಜನರ ಕಾಳಜಿ ವಿಷಯಗಳ ಕುರಿತು ಒತ್ತು ಕೊಡುತ್ತಿದ್ದು, ಬಿಜೆಪಿ ಕೋಮುವಾದದ ವಿರುದ್ಧ ಸರಿಯಾದ ಪಾತ್ರವನ್ನು ನಿರ್ವಹಿಸುತ್ತಿದೆ. ಆದರೆ ಕಾಂಗ್ರೆಸ್ ರಾಜ್ಯ ಸರಕಾರದ ಕುರಿತು ಅತಿ ಮೆದು ಧೋರಣೆ, ಕೆಲವು ಬಾರಿ ಕಾಂಗ್ರೆಸ್ ನ 'ಗೋದಿ ಮೀಡಿಯಾ'ದಂತೆ ವರ್ತನೆ, ನವ–ಉದಾರವಾದದ ವಿರುದ್ಧ ಅಷ್ಟೇನೂ ಒತ್ತು ಕೊಡದಿರುವುದು, ಎಡಶಕ್ತಿಗಳಿಂದ ದೂರವಿರುವ ಧೋರಣೆ ಕಾಣುತ್ತಿದ್ದು, ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ಸಾಮಾನ್ಯ ದನಿಯಾಗಬಹುದಾದ, ನಿಜವಾದ ಹೋರಾಟದಲ್ಲಿರುವ ಜನತೆಯ ಮಾಧ್ಯಮವಾಗುವ ಸಾಧ್ಯತೆ ಕಾಣುತ್ತಿಲ್ಲ.

ಜನಶಕ್ತಿ ಮೀಡಿಯಾ ವೆಬ್ ಪತ್ರಿಕೆ, ಯೂಟ್ಯೂಬ್ ಕಳೆದ ಮೂರು ವರ್ಷಗಳಲ್ಲಿ ಗಮನಾರ್ಹ ಪ್ರಗತಿ ಕಂಡಿದೆ. ಯೂಟ್ಯೂಬ್ ಚಂದಾದಾರರ ಸಂಖ್ಯೆ ಮೂರು ಪಟ್ಟು ಆಗಿ ಈಗ 32 ಸಾವಿರ ದಾಟಿದೆ. ಈ ವರೆಗೆ ಒಟ್ಟು 3700 ವಿಡಿಯೊಗಳನ್ನು ಪೋಸ್ಟ್ ಮಾಡಿದೆ. ಸರಾಸರಿ ಮಾಸಿಕ ವೀಕ್ಷಣೆ ಈ ಅವಧಿಯಲ್ಲಿ 4 ಪಟ್ಟು ಆಗಿ, 2 ಲಕ್ಷಕ್ಕೆ ಏರಿದೆ. ಸರಾಸರಿ ಮಾಸಿಕ ವೀಕ್ಷಣೆ ಸಮಯ ಮೂರು ಪಟ್ಟು ಆಗಿ 7 ಸಾವಿರ ಗಂಟೆ ತಲುಪಿದೆ. ವೆಬ್ ಸೈಟಿನ ಓದು ಈ ಅವಧಿಯಲ್ಲಿ 2.5 ಪಟ್ಟು ಆಗಿ, ಮಾಸಿಕ ಸರಾಸರಿ ನೋಟ 1 ಲಕ್ಷಕ್ಕೆ ಏರಿದೆ. ಕೋಮುವಾದ, ನವ–ಉದಾರವಾದ, ಕಾಂಗ್ರೆಸ್ ಬಿಜೆಪಿ ಸರಕಾರಗಳ ಜನ–ವಿರೋಧಿ ನೀತಿಗಳನ್ನು ಬಯಲು ಮಾಡುತ್ತಾ, ಜನ ಚಳುವಳಿಗಳ ದನಿಯಾಗುತ್ತಾ, ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ಸಾಮಾನ್ಯ ದನಿಯಾಗಲು ಪ್ರಯತ್ನಿಸಿದೆ. ಪತ್ರಕರ್ತರ ಪಡೆ, ಮಾರ್ಕೆಟಿಂಗ್ ಸಿಬ್ಬಂದಿ ವಿಸ್ತರಣೆ ಮತ್ತು ಹಣ ಹೂಡಿಕೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದರೆ ನಿಜವಾದ ಜನತೆಯ ಮಾಧ್ಯಮವಾಗುವ ಸಾಧ್ಯತೆ ಹೊಂದಿದೆ.

ಈ ಅವಧಿಯಲ್ಲಿ ಪೀಪಲ್ ಮೀಡಿಯಾ ಮತ್ತು ಕನ್ನಡ ಪ್ಲಾನೆಟ್ ವೆಬ್ ಮಾಧ್ಯಮಗಳೂ ಆರಂಭವಾಗಿ ಗಮನ ಸೆಳೆದಿವೆ. ಎರಡೂ ಸ್ಥೂಲವಾಗಿ ಪ್ರಗತಿಪರ ನಿಲುವು ವಹಿಸಿವೆ. ಪೀಪಲ್ ಮೀಡಿಯಾ ಎಎಪಿ ಬೆಂಬಲಿತ ಎನ್ನಲಾಗಿದೆ. ಇದರ ಒಬ್ಬ ಸಾರಥಿಯೇ ಹೊರಬಂದು 'ಕನ್ನಡ ಪ್ಲಾನೆಟ್' ಆರಂಭಿಸಿದ್ದಾರೆ. ಇದು ಕನ್ನಡ ಚಳುವಳಿ ಬೆಂಬಲಿತ ಎನ್ನಲಾಗಿದೆ. ಪೀಪಲ್ ಮೀಡಿಯಾ ಕಾಂಗ್ರೆಸ್ ಬಿಜೆಪಿ ಎರಡನ್ನೂ ತರಾಟೆಗೆ ತೆಗೆದುಕೊಂಡರೆ, ಕನ್ನಡ ಪ್ಲಾನೆಟ್ ಕಾಂಗ್ರೆಸ್ ರಾಜ್ಯ ಸರಕಾರದ ಕುರಿತು ಮೆದು ಧೋರಣೆ ವಹಿಸಿದೆ.


ಕೃಪೆ: ಸತೀಶ್ ಆಚಾರ್ಯ





ಟ್ರಂಪ್ ಮತ್ತೆ ಅಧ್ಯಕ್ಷ: ಅಮೆರಿಕನ್ನರು 'ಮಗ'ನಿಗೆ ಮಣೆ ಹಾಕಿ, ಮಗಳನ್ನು ಮನೆಗೆ ಕಳಿಸಿದ್ದು ಯಾಕೆ?

ವಸಂತರಾಜ್ ಎನ್.ಕೆ.

ಇಡೀ ಜಗತ್ತೇ ಕಾತುರದಿಂದ ಎದುರು ನೋಡುತ್ತಿದ್ದ ಯು.ಎಸ್ ಅಧ್ಯಕ್ಷೀಯ ಚುನಾವಣೆಗಳ ಫಲಿತಾಂಶ ಘೋಷಣೆಯಾಗಿದೆ. ತೀರಾ ಅನಿರೀಕ್ಷಿತವಲ್ಲದಿದ್ದರೂ, ಬಹಳ ಬಿರುಸಿನ ಸ್ಪರ್ಧೆ ಎಂದು ಮಾಧ್ಯಮಗಳು ಹೇಳಿದ್ದಕ್ಕೆ ವ್ಯತಿರಿಕ್ತವಾಗಿ ಡೊನಾಲ್ಡ್ ಟ್ರಂಪ್ ಸಲೀಸಾಗಿ ಸಾಕಷ್ಟು ಅಂತರದಿಂದ ಗೆದ್ದಿದ್ದಾರೆ. ಯು.ಎಸ್ ಅಧ್ಯಕ್ಷೀಯ ಚುನಾವಣೆಗಳಲ್ಲಿ ಜನ ನೇರವಾಗಿ ಮತ ಹಾಕಿದರೂ, ಕೊನೆಗೆ ಚುನಾವಣೆ ಒಂದು ರೀತಿಯಲ್ಲಿ ಪರೋಕ್ಷ ಚುನಾವಣೆಯೇ. ಯಾಕೆಂದರೆ ಅವರು ಚುನಾಯಿಸುವುದು 'ಇಲೆಕ್ಟೋರಲ್ ಕಾಲೇಜಿ'ಗೆ ಪ್ರತಿನಿಧಿಗಳನ್ನು ಮಾತ್ರ. (ವಿವರಗಳಿಗೆ 'ಯು.ಎಸ್ ಅಧ್ಯಕ್ಷೀಯ ಚುನಾವಣಾ ಪದ್ಧತಿ' ಬಾಕ್ಸ್ ನೋಡಿ) ಈ 'ಇಲೆಕ್ಟೋರಲ್ ಕಾಲೇಜಿ'ಗೆ ಆಯ್ಕೆ ಯಾಗುವ 538 ಪ್ರತಿನಿಧಿಗಳು ಅಧ್ಯಕ್ಷರನ್ನುಆಯ್ಕೆ ಮಾಡುತ್ತಾರೆ.

ಟ್ರಂಪ್ 538ರಲ್ಲಿ 312 ಪ್ರತಿನಿಧಿಗಳನ್ನು ಗೆದ್ದುಕೊಂಡಿದ್ದಾರೆ. ಕಮಲಾ ಹ್ಯಾರಿಸ್ ಕೇವಲ 226 ಪ್ರತಿನಿಧಿ ಗೆದ್ದಿದ್ದಾರೆ. ಟ್ರಂಪ್ ಒಟ್ಟು ಮತದಾನದಲ್ಲಿ ಸಹ ಶೇ.50.6 (7.42 ಕೋಟಿ) ಮತ ಪಡೆದು, ಕಮಲಾ ಹ್ಯಾರಿಸ್ (ಶೇ.47.9, 7.03 ಕೋಟಿ) ಸಾಕಷ್ಟು ಅಂತರ (ಶೇ. 2.7 ಮತ್ತು 39 ಲಕ್ಷ ಮತ) ದಿಂದ ಸೋಲಿಸಿದ್ದಾರೆ. ಯು.ಎಸ್ ನ 50 ರಾಜ್ಯಗಳಲ್ಲಿ 30 ರಾಜ್ಯಗಳಲ್ಲಿ ಗೆದ್ದಿದ್ದಾರೆ. ಯು.ಎಸ್ ನಲ್ಲಿ ಎರಡು ರಾಜಕೀಯ ಪಕ್ಷಗಳ ವ್ಯವಸ್ಥೆ ಜಾರಿಯಲ್ಲಿದೆ. ಸಂವಿಧಾನದಲ್ಲಿ ಹೆಚ್ಚಿನ ಪಕ್ಷಗಳಿಗೆ ಅವಕಾಶವಿದ್ದರೂ, ಕಳೆದ ಹಲವು ದಶಕಗಳಿಂದ ರಿಪಬ್ಲಿಕನ್ ಮತ್ತು ಡೆಮೊಕ್ರಾಟಿಕ್ ಪಕ್ಷಗಳು ಮಾತ್ರ ಪ್ರಧಾನ ಪಕ್ಷಗಳಾಗಿವೆ. ಈ 50 ರಾಜ್ಯಗಳಲ್ಲಿ 43 ರಾಜ್ಯಗಳು ರಿಪಬ್ಲಿಕನ್ ಅಥವಾ ಡೆಮೊಕ್ರಾಟಿಕ್ ರಾಜ್ಯಗಳ ಪ್ರಬಲ ನೆಲೆಗಳು ಎಂದು ಗುರುತಿಸಲ್ಪಡುತ್ತವೆ. ಉಳಿದ 7 'ಹೊಯ್ದಾಡುವ' (ಸ್ವಿಂಗ್) ಅಥವಾ 'ಸೆಣಸಾಟ'ದ (ಬ್ಯಾಟಲ್ ಗ್ರೌಂಡ್) ರಾಜ್ಯಗಳು (ಉತ್ತರದಲ್ಲಿರುವ ಮಿಷಿಗನ್, ಪೆನ್ಸಿಲ್ವೇನಿಯ, ವಿಸ್ಕೊನ್ಸಿನ್, ದಕ್ಷಿಣದಲ್ಲಿರುವ ಅರಿಝೋನಾ, ನೆವಾಡಾ, ಮಧ್ಯ ಪೂರ್ವದಲ್ಲಿರುವ ಉತ್ತರ ಕೆರೊಲನಾ, ಜಾರ್ಜಿಯ) ಎಂದು ಕರೆಯಲಾಗುತ್ತದೆ. ಈ 7 ರಾಜ್ಯಗಳಲ್ಲಿ ಬಹುಪಾಲು ರಾಜ್ಯಗಳನ್ನು ಗೆದ್ದವರು ಅಧ್ಯಕ್ಷರಾಗುತ್ತಾರೆ. ಟ್ರಂಪ್ ಈ ಬಾರಿ ಎಲ್ಲಾ 7 ರಾಜ್ಯಗಳನ್ನು ಗೆದ್ದಿದ್ದಾರೆ. ಕಳೆದ ಬಾರಿಗೆ ಬಿಡೆನ್ 7 ರಲ್ಲಿ 4 ಗೆದ್ದಿದ್ದರು. 2016ರಲ್ಲಿ ಟ್ರಂಪ್ 7 ರಲ್ಲಿ 3 ಗೆದ್ದಿದ್ದರು.



ಅಧ್ಯಕ್ಷೀಯ ಚುನಾವಣೆ 2024

ಅಭ್ಯರ್ಥಿ	ಮತ ಗಳಿಕೆ	ಮತ ಪ್ರಮಾಣ
ಡೊನಾಲ್ಡ್ ಟ್ರಂಪ್	7.42 ಕೋಟಿ	50.6%
ಕಮಲಾ ಹ್ಯಾರಿಸ್	7.03 ಕೋಟಿ	47.9%
ಅಂತರ	39 ಲಕ್ಷ	2.7 %

ಅಧ್ಯಕ್ಷೀಯ ಚುನಾವಣೆಗಳ ಜತೆ ನಡೆದ ಕಾಂಗ್ರೆಸ್ (ಪಾರ್ಲಿಮೆಂಟ್)ನ ಎರಡೂ ಸದನಗಳಲ್ಲಿ ರಿಪಬ್ಲಿಕನ್ ಪಕ್ಷ ಬಹುಮತ ಪಡೆದಿದೆ. ಕೆಳಸದನ (ಪ್ರತಿನಿಧಿ ಸಭೆ ಅಥವಾ ಹೌಸ್ ಆಫ್ ರೆಪ್ರೆಸೆಂಟೆಟಿವ್ಸ್–ನಮ್ಮ ಲೋಕಸಭೆಯಂತೆ) ನ 435 ಸೀಟುಗಳಲ್ಲಿ ರಿಪಬ್ಲಿಕನ್ ಪಕ್ಷ 2 ಸೀಟು ಕಳೆದುಕೊಂಡರೂ 220 ಸೀಟು ಪಡೆದು ಬಹುಮತ ಉಳಿಸಿಕೊಂಡಿದೆ. ಡೆಮೊಕ್ರಾಟಿಕ್ ಪಕ್ಷ 1 ಸೀಟು ಕಳೆದುಕೊಂಡು 212 ಸೀಟು ಪಡೆದಿದೆ. ಉಳಿದವನ್ನು ಇತರ ಪಕ್ಷಗಳು ಮತ್ತು ಪಕ್ಷೇತರರು ಗೆದ್ದಿದ್ದಾರೆ.

ಕೆಳಸದನ (ಪ್ರತಿನಿಧಿ ಸದನ) 2024

ಪಕ್ಷ	ಸೀಟು ಗಳಿಕೆ	+ಏರಿಕೆ/–ಇಳಿಕೆ
ರಿಪಬ್ಲಿಕನ್	220	–2
ಡೆಮೊಕ್ರಾಟಿಕ್	212	–1
ಇತರ	3	
ಒಟ್ಟು	435	+3

ಮೇಲು ಸದನವಾದ 100 ಸೀಟುಗಳ ಸೆನೆಟ್ (ನಮ್ಮ ರಾಜ್ಯಸಭಾ ದಂತೆ) ನ 34 ಸೀಟುಗಳಿಗೆ ಚುನಾವಣೆ ನಡೆದಿತ್ತು (ಪ್ರತಿ 2 ವರ್ಷಕ್ಕೊಮ್ಮೆ 1/3 ಸೀಟುಗಳಿಗೆ ಚುನಾವಣೆ ನಡೆಯುತ್ತದೆ) ಅದರಲ್ಲಿ 4 ಹೆಚ್ಚಿನ ಸೀಟು ಗೆದ್ದು 53 ಸೀಟು ಪಡೆದು ರಿಪಬ್ಲಿಕನ್ ಪಕ್ಷ ಬಹುಮತ ಪಡೆದಿದೆ. ಡೆಮೊಕ್ರಾಟಿಕ್ ಪಕ್ಷ 3 ಸೀಟು ಕಳೆದುಕೊಂಡು 44 ಕ್ಕೆ ಇಳಿದಿದೆ. ಉಳಿದವಲ್ಲಿ ಇತರ ಪಕ್ಷಗಳು ಮತ್ತು ಪಕ್ಷೇತರರು ಗೆದ್ದಿದ್ದಾರೆ. ಕಳೆದ ಸೆನೆಟ್ ನಲ್ಲಿ 4 ಸ್ವತಂತ್ರ ಸದಸ್ಯರ ಬೆಂಬಲದೊಂದಿಗೆ ಡೆಮೊಕ್ರಾಟಿಕ್ ಪಕ್ಷಕ್ಕೆ ಬಹುಮತವಿತ್ತು.

ಸೆನೆಟ್ (ಮೇಲುಸದನ) 2024

ಪಕ್ಷ	ಸೀಟು ಗಳಿಕೆ	+ಏರಿಕೆ/–ಇಳಿಕೆ
ರಿಪಬ್ಲಿಕನ್	53	+4
ಡೆಮೊಕ್ರಾಟಿಕ್	44	–3
ಇತರ	3	–1
ಒಟ್ಟು	100	

ಯು.ಎಸ್ ಚುನಾವಣೆಗಳಲ್ಲಿ ಅಧ್ಯಕ್ಷ, ಕಾಂಗ್ರೆಸ್ ನ ಎರಡೂ ಸದನಗಳನ್ನು ಒಂದೇ ಪಕ್ಷ ಗೆಲ್ಲುವುದು ಅಪರೂಪ. ಮೂರರಲ್ಲಿ ಎರಡನ್ನು ಆಳುವ ಪಕ್ಷ ಗೆಲ್ಲುವುದು ಹೆಚ್ಚು ಸಾಮಾನ್ಯ. ಅದು ಅಧ್ಯಕ್ಷರ ಅಪರಿಮಿತ ಅಧಿಕಾರಕ್ಕೆ ಮೂಗುದಾರ ಹಾಕುತ್ತದೆಯಾದ್ದರಿಂದ ಪ್ರಜಾಪ್ರಭುತ್ವಕ್ಕೆ ಆರೋಗ್ಯಕರವೆಂದು ಭಾವಿಸಲಾಗುತ್ತದೆ. ಮೂರನ್ನು ಒಂದೇ ಪಕ್ಷ ಗೆಲ್ಲುವುದು ಪ್ರಜಾಪ್ರಭುತ್ವಕ್ಕೆ ಆರೋಗ್ಯಕರವಲ್ಲವೆಂದು ಭಾವಿಸಲಾಗುತ್ತದೆ. ಈ ಬಾರಿ ಟ್ರಂಪ್ ನಾಯಕತ್ವದಲ್ಲಿ ಮೂರೂ ಚುನಾವಣೆಗಳಲ್ಲಿ ರಿಪಬ್ಲಿಕನ್ ಪಕ್ಷ ಬಹುಮತ ಸಾಧಿಸಿದೆ. ಯು.ಎಸ್ ನಲ್ಲಿ ನ್ಯಾಯಾಂಗವನ್ನೂ ಕಾಂಗ್ರೆಸ್ ನೇಮಿಸುವುದರಿಂದ ಸುಪ್ರೀಂ ಕೋರ್ಟು ನ್ಯಾಯಾಧೀಶರನ್ನು ಆಯಾ ಪಕ್ಷದವರು ಎಂದು ಹೇಳಲಾಗುತ್ತದೆ. ಈಗ ಸುಪ್ರೀಂ ಕೋರ್ಟು ನ್ಯಾಯಾಧೀಶರಲ್ಲಿ ರಿಪಬ್ಲಿಕನ್ ಬಹುಮತವಿದೆ. ಹಾಗಾಗಿ ರಿಪಬ್ಲಿಕನ್ ಪಕ್ಷಕ್ಕೆ ಮೂರೂ ಅಂಗಗಳಲ್ಲಿ ಬಹುಮತವಿದ್ದು ಪ್ರಭುತ್ವದ ಮೇಲೆ ಸಮಗ್ರ ನಿಯಂತ್ರಣ ಹೊಂದಿದೆ.

ಯಾಕೆಂದರೆ ಅವರು ಚುನಾಯಿಸುವುದು 'ಇಲೆಕ್ಟೋರಲ್ ಕಾಲೇಜಿ'ಗೆ ಪ್ರತಿನಿಧಿಗಳನ್ನು ಮಾತ್ರ. (ವಿವರಗಳಿಗೆ 'ಯು.ಎಸ್ ಅಧ್ಯಕ್ಷೀಯ ಚುನಾವಣಾ ಪದ್ಧತಿ' ಬಾಕ್ಸ್ ನೋಡಿ) ಈ 'ಇಲೆಕ್ಟೋರಲ್ ಕಾಲೇಜಿ'ಗೆ ಆಯ್ಕೆ ಯಾಗುವ 538 ಪ್ರತಿನಿಧಿಗಳು ಅಧ್ಯಕ್ಷರನ್ನುಆಯ್ಕೆ ಮಾಡುತ್ತಾರೆ.

ಚುನಾವಣೆಗೆ ಮೊದಲು: 'ಮಗ' ವರ್ಸಸ್ 'ಮಗಳು'

ಚುನಾವಣಾ ಪ್ರಕ್ರಿಯೆ ಆರಂಭವಾದಾಗ ಅಧ್ಯಕ್ಷ ಬೈಡನ್ ಎರಡನೆಯ ಅವಧಿಗೆ ಮುಂದುವರೆಯಲು ಬಯಸಿದ್ದರಿಂದ ಡೆಮೊಕ್ರಾಟಿಕ್ ಪಕ್ಷದಲ್ಲಿ ಅಭ್ಯರ್ಥಿಯನ್ನು ಚುನಾಯಿಸುವ ಪ್ರಾಥಮಿಕ ಚುನಾವಣೆಯ ಪ್ರಕ್ರಿಯೆ ಆರಂಭವಾಗಲಿಲ್ಲ. ರಿಪಬ್ಲಿಕನ್ ಅಭ್ಯರ್ಥಿಯನ್ನು ಚುನಾಯಿಸುವ ಪ್ರಾಥಮಿಕ ಚುನಾವಣೆಯ ಪ್ರಕ್ರಿಯೆ ನಡೆದು ಟ್ರಂಪ್ ಅಭ್ಯರ್ಥಿಯಾದರು. ಅಲ್ಲೂ ಪ್ರಾಥಮಿಕ ಚುನಾವಣೆಗಳಲ್ಲಿ ಸಂಪ್ರದಾಯದಂತೆ ಇದ್ದ ಸ್ಪರ್ಧಿಗಳ ನಡುವಿನ ಟಿವಿ ಚರ್ಚೆಗಳನ್ನು ಬಹಿಷ್ಕರಿಸುತ್ತಾ, ತಮ್ಮ ಪ್ರತಿಸ್ಪರ್ಧಿಗಳನ್ನು ಹೀಯಾಳಿಸುತ್ತಾ ಸದಾ ಸುದ್ದಿಯಲ್ಲಿದ್ದರು. ಆದರೆ ಬೈಡನ್ ಅವರ ಇಳಿವಯಸ್ಸು, ದೈಹಿಕ/ಮಾನಸಿಕ ಆರೋಗ್ಯ ಸ್ಥಿತಿ ಸುದ್ದಿಯಾಗುತ್ತಾ ವಿರೋಧಿ

ಯು.ಎಸ್ ಅಧ್ಯಕ್ಷೀಯ ಚುನಾವಣಾ ಪದ್ಧತಿ

ಯು.ಎಸ್ ನ ಅಧ್ಯಕ್ಷೀಯ ಚುನಾವಣಾ ಪದ್ಧತಿ ಒಂದು ರೀತಿಯ ಪರೋಕ್ಷ ಚುನಾವಣಾ ಪದ್ಧತಿ. ಇದರ ಪ್ರಕಾರ ಅಭ್ಯರ್ಥಿಗಳಿಗೆ ಮತ ಹಾಕುತ್ತಾರೆ. ಇಡೀ ದೇಶದಲ್ಲಿ ಅಭ್ಯರ್ಥಿಗಳು ಪಡೆದ ಮತಗಳ ಆಧಾರದ ಮೇಲೆ ಫಲಿತಾಂಶ ಘೋಷಿಸಲಾಗುತ್ತದೆ. ಆದರೆ ರಾಜ್ಯವಾರು ಹೆಚ್ಚಿನ ಮತ ಪಡೆದ ಅಭ್ಯರ್ಥಿಗೆ ಅದರ ಆಧಾರದ ಮೇಲೆ ಆ ರಾಜ್ಯದ ಎಲ್ಲ ಇಲೆಕ್ಟೋರಲ್ ಕಾಲೇಜು ಮತಗಳನ್ನು ಕೊಡಲಾಗುತ್ತದೆ. ಪ್ರತಿ ರಾಜ್ಯಕ್ಕೆ ಅದರ ಜನಸಂಖ್ಯೆ, ಗಾತ್ರದ ಆಧಾರದ ಮೇಲೆ ಇಲೆಕ್ಟೋರಲ್ ಕಾಲೇಜು ಮತಗಳನ್ನು ನಿಗದಿ ಪಡಿಸಲಾಗಿದೆ. ಈ ಮತಗಳು ನೇರವಾಗಿ ಜನಸಂಖ್ಯೆ ಅಥವಾ ಗಾತ್ರಕ್ಕೆ ನೇರವಾಗಿ ಅನುಪಾತದಲ್ಲಿ ಇಲ್ಲ. ಸಣ್ಣ ರಾಜ್ಯಗಳಿಗೂ ಈ ಚುನಾವಣೆ ಯಲ್ಲಿ ಸೂಕ್ತ ಸ್ಥಾನ ಇರುವಂತೆ ಅವನ್ನು ನಿಗದಿ ಪಡಸಿಲಾಗಿದೆ. ಉದಾಹರಣೆಗೆ ಅತಿ ದೊಡ್ಡ ಗಾತ್ರದ ಜನಸಂಖ್ಯೆಯ ರಾಜ್ಯ ಕ್ಯಾಲಿಫೋರ್ನಿಯಾ ಕ್ಕೆ 54 ಇಲೆಕ್ಟೋರಲ್ ಕಾಲೇಜು ಮತಗಳನ್ನು ನಿಗದಿ ಪಡಿಸಲಾಗಿದೆ. ಈ ರಾಜ್ಯ ಹಿಂದಿನಿಂದಲೂ ಡೆಮೊಕ್ರಾಟಿಕ್ ರಾಜ್ಯವಾಗಿದ್ದು ಈ ಬಾರಿ ಸಹ ಕಮಲಾ ಇಲ್ಲಿ ಬಹುಮತ ಗಳಿಸಿದ್ದಾರೆ. ಅದೇ ರೀತಿ ಫ್ಲಾರಿಡಾ ಗೆ 30 ಇಲೆಕ್ಟೋರಲ್ ಕಾಲೇಜು ಮತಗಳು ನಿಗದಿತವಾಗಿದ್ದು, ಇಲ್ಲಿ ಟ್ರಂಪ್ ಬಹುಮತ ಪಡೆದು, 30 ಮತಗಳನ್ನು ಪಡೆಯುತ್ತಾರೆ. ಮೈನ್ ಎಂಬ ಅತಿ ಸಣ್ಣ ರಾಜ್ಯ 1 ಮತ ಪಡೆದಿದೆ. ಹೆಚ್ಚಿನ ರಾಜ್ಯಗಳಲ್ಲಿ ಅತ್ಯಂತ ಹೆಚ್ಚು ಮತ ಪಡೆದ ಅಭ್ಯರ್ಥಿಗೆ ಆ ರಾಜ್ಯದ ಎಲ್ಲ ಮತಗಳು ದೊರೆಯುತ್ತವೆ. ಆದರೆ ಕೆಲವು ರಾಜ್ಯಗಳಲ್ಲಿ ಇಲೆಕ್ಟೋರಲ್ ಕಾಲೇಜು ಮತಗಳನ್ನು ಅಭ್ಯರ್ಥಿಗಳು ಪಡೆದ ಮತಗಳ ಅನುಪಾತದಲ್ಲಿ ಕೊಡುವ ಪದ್ಧತಿ ಸಹ ಇದೆ. ಕೊನೆಯಲ್ಲಿ 270ಕ್ಕಿಂತ ಹೆಚ್ಚು ಇಲೆಕ್ಟೋರಲ್ ಕಾಲೇಜು ಮತಗಳನ್ನು ಪಡೆದ ಅಭ್ಯರ್ಥಿ ಅಧ್ಯಕ್ಷರಾಗಿ ಚುನಾಯಿತರಾಗುತ್ತಾರೆ. ಈ ಪದ್ಧತಿಯಲ್ಲಿ 270ಕ್ಕಿಂತ ಹೆಚ್ಚು ಇಲೆಕ್ಟೋರಲ್ ಕಾಲೇಜು ಮತಗಳನ್ನು ಪಡೆದ ಅಭ್ಯರ್ಥಿ ಇಡೀ ದೇಶದಲ್ಲಿ ಅತಿ ಹೆಚ್ಚು ಮತ ಗಳಿಸಬೇಕೆಂದಿಲ್ಲ. ಉದಾಹರಣೆಗೆ ಅತಿ ಹೆಚ್ಚು ರಾಷ್ಟ್ರವ್ಯಾಪಿ ಮತಗಳನ್ನು (ಶೇ. 48.20) ಪಡೆದ ಹಿಲೆರಿ ಕ್ಲಿಂಟನ್ ಕೇವಲ 227 ಇಲೆಕ್ಟೋರಲ್ ಕಾಲೇಜು ಮತಗಳನ್ನು ಪಡೆದರು. ಡೊನಾಲ್ಡ್ ಟ್ರಂಪ್ ಶೇ. 46.1 (ಅಂದರೆ ಹಿಲೆರಿ ಅವರಿಗಿಂತ ಶೇ.2.1 ಕಡಿಮೆ) ಮತ ಪಡೆದರೂ, 304 ಇಲೆಕ್ಟೋರಲ್ ಕಾಲೇಜು ಮತಗಳನ್ನು ಪಡೆದು ಅಧ್ಯಕ್ಷರಾಗಿ ಚುನಾಯಿತರಾದರು.



ಟ್ರಂಪ್ ವಿಜಯ

ಹೊರ ಪ್ರಪಂಚಕ್ಕೆ, ಡೆಮಾಕ್ರಟಿಕ್ ಮತ್ತು ರಿಪಬ್ಲಿಕನ್ ಪಕ್ಷಗಳ ಅಧ್ಯಕ್ಷರ ನಡುವೆ ಆಯ್ಕೆ ಮಾಡಿಕೊಳ್ಳಲು ಹೆಚ್ಚಿನದ್ದೇನೂ ಉಳಿದಿರುವುದಿಲ್ಲ. ಎರಡೂ ಪಕ್ಷಗಳು ಸಾಮ್ರಾಜ್ಯಶಾಹಿ ಯುದ್ಧಕೋರ ಪಕ್ಷಗಳೇ ಆಗಿವೆ. ಕ್ಲಿಂಟನ್ ಆಗಲಿ ಬುಷ್ ಆಗಲಿ, ಇರಾಕ್ ಮತ್ತು ಪಶ್ಚಿಮ ಏಷ್ಯಾದ ಜನರು ಅಮೆರಿಕನ್ ಯುದ್ಧ ಯಂತ್ರದ ಟಾರ್ಗೆಟ್ ಆಗಿರುತ್ತಾರೆ. ಮಿಲಿಟರಿ ಮಧ್ಯಪ್ರವೇಶಗಳ ಮೂಲಕ ಅಥವಾ ನಿರ್ಬಂಧಗಳನ್ನು ಹೇರಿ ಅಮೆರಿಕದ ಏಕಸ್ವಾಮ್ಯವನ್ನು ಸಾಧಿಸುವ ವಿಚಾರದಲ್ಲಿ ಡೆಮಾಕ್ರಾಟರು ಮತ್ತು ರಿಪಬ್ಲಿಕನ್ನರ ನಡುವೆ ಅಂಥ ವ್ಯತ್ಯಾಸವೇನೂ ಇಲ್ಲ.

ಪ್ರಕಾಶ್ ಕಾರತ್

ಅಮೆರಿಕದ ಅಧ್ಯಕ್ಷೀಯ ಚುನಾವಣೆ ಅತ್ಯಂತ ತುರುಸಿನ ಸ್ಪರ್ಧೆಯಲ್ಲಿ ಕೊನೆಗೊಳ್ಳಲಿದೆ ಎಂಬ ಚುನಾವಣಾ ಪಂಡಿತರ ಲೆಕ್ಕಾಚಾರ ತಲೆಕೆಳಗಾಗಿ ಡೊನಾಲ್ಡ್ ಟ್ರಂಪ್ ನಿರ್ಣಾಯಕ ಜಯ ಸಾಧಿಸಿದ್ದಾರೆ. 538 ಎಲೆಕ್ಟೋರಲ್ ಕಾಲೇಜ್ ಮತಗಳ ಪೈಕಿ ಟ್ರಂಪ್ 312 ಗಳಿಸಿ ಜನಪ್ರಿಯ ಮತ ಗಳಿಕೆಯಲ್ಲಿ ಕಮಲಾ ಹ್ಯಾರಿಸ್‌ರನ್ನು ಹಿಂದಿಕ್ಕಿ ಶೇಕಡ 51 ಮತ ಪಡೆದಿದ್ದಾರೆ. ಉದಾರವಾದಿ ಮಾಧ್ಯಮವು ಕಮಲಾ ಹ್ಯಾರಿಸ್ ಪ್ರಚಾರಕ್ಕೆ ಅನುಕೂಲಕರವಾಗಿ ನಿಂತರೂ ಟ್ರಂಪ್ ಮೇಲುಗೈ ಸಾಧಿಸುತ್ತಿದ್ದಾರೆನ್ನುವುದು ಸ್ವತಂತ್ರ ವೀಕ್ಷಕರಿಗೆ ಮನವರಿಕೆಯಾಗಿತ್ತು. ಅದರಲ್ಲೂ ಕೊನೆಯ ಒಂದು ತಿಂಗಳಲ್ಲಿ ಅದು ಗೊತ್ತಾಗಿತ್ತು. ವಲಸೆ ಕುರಿತ ಟ್ರಂಪ್‌ರ ಪ್ರಚೋದನಕಾರಿ ಭಾಷಣಗಳು ಮತ್ತು ಹೆಚ್ಚುತ್ತಿರುವ ಅಪರಾಧಗಳು ಮತ್ತು 'ಉಳ್ಳವರ' (ಎಲೈಟ್ಸ್) ವಿರುದ್ಧ ಅವರಾಡಿದ ಅಬ್ಬರದ ಮಾತುಗಳು ಮತದಾರರ ವಿವಿಧ ವಿಭಾಗಗಳಲ್ಲಿ ಉತ್ತಮ ಪ್ರತಿಕ್ರಿಯೆಯನ್ನು ಗಳಿಸಿದ್ದವು. ಜೀವನ ವೆಚ್ಚ ಹಾಗೂ ಬೆಲೆ ಏರಿಕೆಗಳಿಂದಾಗಿ ಜೋ ಬೈಡೆನ್ ಆಡಳಿತದ ವಿರುದ್ಧ ಜನರಲ್ಲಿ ಮಡುಗಟ್ಟಿದ್ದ ಅತೃಪ್ತಿ ಕೂಡ ಟ್ರಂಪ್‌ಗೆ ನೆರವಾಗಿದೆ.

ಇದಕ್ಕೆ ತದ್ವಿರುದ್ಧವಾಗಿ, ಕಮಲಾ ಹ್ಯಾರಿಸ್‌ರ ಪ್ರಚಾರ ನೀರಸವಾಗಿತ್ತು. ಪ್ರಜಾಪ್ರಭುತ್ವ ಮತ್ತು ಟ್ರಂಪ್ ಇನ್ನೊಮ್ಮೆ ಅಧ್ಯಕ್ಷರಾದರೆ ಅಗುವ ಅಪಾಯದ ಕುರಿತ ಮಾತುಗಳೇ ಹೆಚ್ಚಾಗಿದ್ದು ಪರ್ಯಾಯ ದೃಷ್ಟಿಕೋನ ಅಥವಾ ನೀತಿಗಳನ್ನು ಅಪಪ್ರಚಾರಕ್ಕೆ ಆಹಾರವಾದಾಗ ಡೆಮೊಕ್ರಾಟಿಕ್ ಪಕ್ಷ ಉಪಾಧ್ಯಕ್ಷರಾದ ಕಮಲಾ ಹ್ಯಾರಿಸ್ ಅವರನ್ನು ಕಣಕ್ಕೆ ಇಳಿಸಲು ನಿರ್ಧರಿಸಿತು. ಪಕ್ಷದ ಪ್ರಾಥಮಿಕ ಚುನಾವಣೆಗಳು ಅಥವಾ ಪಕ್ಷದ ಯಾವುದೇ ಆಯ್ಕೆ ಪ್ರಕ್ರಿಯೆ ಅನುಸರಿಸದೆ ಕಮಲಾ ಅವರ ಆಯ್ಕೆ ನಡೆಯಿತು. ಬೈಡನ್ ಅವರು ಸ್ಪರ್ಧೆಯಿಂದ ಹಿಂದೆ ಸರಿಯಲು ತಯಾರಿರಲಿಲ್ಲ. ಅವರ ಮೇಲೆ ಒತ್ತಡ ತಂದು ಹಿಂದೆ ಸರಿಸಲಾಯಿತು ಎಂಬ ಪುಕಾರು ಸಹ ಹರಡಿತು. ಹೀಗೆ ಡೆಮೊಕ್ರಾಟಿಕ್ ಸ್ಪರ್ಧೆ ಮೊದಲಿಂದಲೂ ತೊಡಕುಗಳೊಂದಿಗೆ, ವಿವಾದಗಳೊಂದಿಗೆ ಆರಂಭವಾಯಿತು.

ಟ್ರಂಪ್ ಆಗಲೇ ಬೈಡನ್ ವಿರುದ್ಧ ತೀವ್ರ ಪ್ರಚಾರ ಆರಂಭಿಸಿದ್ದರು. 2016, 2020 ರಂತೆ ಈ ಬಾರಿ ಸಹ ಅವರ ಅಧಿಕೃತ ಘೋಷಣೆ "Make America Great Again" (MAGA, 'ಮಗ'– ಅಮೆರಿಕವನ್ನು ಮತ್ತೆ ಮಹಾನ್ ಆಗಿಸೋಣ). 'ಮಗ' ಹಿಂದಿನಂತೆ ಬರಿಯ ಘೋಷಣೆ ಆಗಿರದೆ ಈಗ ಒಂದು ಬಲಪಂಥೀಯ ಚಳುವಳಿಯಾಗಿತ್ತು, ಅಷ್ಟೇನೂ ಸುಸಂಘಟಿತವಲ್ಲದಿದ್ದರೂ ಹೆಚ್ಚು ಕಡಿಮೆ ಸಂಘಟನೆಯ ಸ್ವರೂಪ ಪಡೆದಿತ್ತು. ಟ್ರಂಪ್ 2020ರ ಚುನಾವಣೆಯಲ್ಲಿ ಸೋತಾಗ ಚುನಾವಣಾ ಫಲಿತಾಂಶದ ವಿರುದ್ಧ ಮಾತ್ರವಲ್ಲ, ಚುನಾಯಿತ ಅಧ್ಯಕ್ಷ ಬೈಡನ್ ಅವರನ್ನು ಅಧ್ಯಕ್ಷರಾಗಿ ಘೋಷಿಸುವ ಅಧಿಕೃತ ಕಾಂಗ್ರೆಸ್ ಅಧಿವೇಶನದ ಮೇಲೆ 'ಮಗ' ಗುಂಪುಗಳು ಹಿಂಸಾಚಾರದ ದಾಳಿ ಮಾಡಿದ್ದವು. ಟ್ರಂಪ್ ಅಧಿಕಾರದಲ್ಲಿದ್ದಾಗಲೇ ಎರಡು ಬಾರಿ ಕಾಂಗ್ರೆಸ್ ನಲ್ಲಿ ಮಂಡಿತವಾದ 'ದೋಷಾರೋಪಣೆ' (ಇಂಫೀಚ್ ಮೆಂಟ್) ನಿರ್ಣಯದ ಪರವಾಗಿ ಕೆಲವು ರಿಪಬ್ಲಿಕನ್ ಸದಸ್ಯರು ಮತ ಚಲಾಯಿಸುವ ಸಾಧ್ಯತೆ ಕಂಡು ಬಂದಾಗ, ಅವರು ಪ್ರತ್ಯೇಕ 'ಮಗ' ಪಕ್ಷ ಕಟ್ಟುವ ಬೆದರಿಕೆ ಸಹ ಹಾಕಿದ್ದರು. ಈ ಬಾರಿಯ ಟ್ರಂಪ್ ಅವರ ಪ್ರಚಾರವನ್ನು ಅಧಿಕೃತ ರಿಪಬ್ಲಿಕನ್ ಪಕ್ಷಕ್ಕಿಂತ ಹೆಚ್ಚಾಗಿ 'ಮಗ' ಗುಂಪುಗಳು ನಡೆಸಿದ್ದವು.

"Make America Great Again" ಮೊದಲ ಬಾರಿಗೆ 1980ರ ಅಧ್ಯಕ್ಷೀಯ ಚುನಾವಣೆಯ ತಮ್ಮ ಘೋಷವಾಕ್ಯವಾಗಿ ರೊನಾಲ್ಡ್ ರೇಗನ್ ಬಳಸಿದ್ದರು. ಆಗಿನಿಂದಲೇ ಅದು ಒಂದು ಬಲಪಂಥೀಯ ಘೋಷಣೆಯಾಗಿ ಬಿಟ್ಟಿತ್ತು. 'ಅಮೆರಿಕ ಫಸ್ಟ್' ಇದರ ಇನ್ನೊಂದು ರೂಪ. 'ಅಮೆರಿಕವನ್ನು ಮತ್ತೆ ಮಹಾನ್ ಆಗಿಸೋಣ' ಎಂಬ ಘೋಷಣೆಯ ಹಿಂದೆ 'ಈಗ ಅಮೆರಿಕ ಮಹಾನ್ ಆಗಿ ಉಳಿದಿಲ್ಲ' ಅದಕ್ಕೆ ಕಾರಣ–ಈ ಬಡ ದೇಶಗಳಿಂದ ಬರುವ ವಲಸೆಗಾರರು, ಮುಸ್ಲಿಮರು, ಕರಿಯರು, ಲ್ಯಾಟಿನೊ ಇತ್ಯಾದಿ ಅಲ್ಪಸಂಖ್ಯಾತರು; ಚೀನಾ, ಅಮೆರಿಕ–ವಿರೋಧಿ ಭಯೋತ್ಪಾದಕರು, ಅಮೆರಿಕದ ವ್ಯವಸ್ಥೆ ನಿಯಂತ್ರಿಸುತ್ತಿರುವ 'ಉದಾರವಾದಿ' 'ಪ್ರತಿಷ್ಠಿತರು', ಅವರನ್ನು ಬೆಂಬಲಿಸುವ ಬುದ್ಧಿಜೀವಿಗಳು, ವೃತ್ತಿಪರರು, 'ಉದಾರವಾದಿ' ಮಾಧ್ಯಮಗಳು – ಎಂಬ ಭಾವನೆಯಿದೆ. ಇವರನ್ನೆಲ್ಲ ಮಟ್ಟ ಹಾಕಿದರೆ ಮತ್ತೆ 'ಅಮೆರಿಕವನ್ನು ಮತ್ತೆ ಮಹಾನ್' ಆಗಿಸಬಹುದು ಎಂಬ ಅಬ್ಬರದ ಪ್ರಚಾರವನ್ನು 'ಮಗ' ಚಳುವಳಿ ಮಾಡುತ್ತಿದೆ. ಇದು ಒಂದು ಕಡೆ ವಲಸೆಗಾರರು, ಕರಿಯರು, ಮುಸ್ಲಿಮರು ಇತ್ಯಾದಿ ಅಲ್ಪಸಂಖ್ಯಾತರ ಮೇಲೆ ಬಿಳಿಯ ಮಧ್ಯಮ–ಕೆಳಮಧ್ಯಮ ವರ್ಗದವರನ್ನು ಎತ್ತಿ ಕಟ್ಟುವ ಘೋಷಣೆ. ಇನ್ನೊಂದು ಕಡೆ ಅಮೆರಿಕದ 'ವ್ಯವಸ್ಥೆ ನಡೆಸುತ್ತಿರುವ ಹಣಕಾಸು ಸಂಸ್ಥೆಗಳು, ಮಿಲಿಟರಿ–ಕೈಗಾರಿಕಾ ಸಂಕೀರ್ಣ, ಅತಿ ಶ್ರೀಮಂತರು ನಿಮ್ಮನ್ನು ಲೂಟಿ ಮಾಡುತ್ತಿದ್ದಾರೆ. ನಮ್ಮ ಕೈಗಾರಿಕೆಗಳನ್ನು, ನಿಮ್ಮ ಉದ್ಯೋಗಗಳನ್ನು ನಾಶ ಮಾಡಿ ವಿದೇಶಕ್ಕೆ ಕಳಿಸಿದ್ದಾರೆ. ಮಿಲಿಟರಿ–ಕೈಗಾರಿಕಾ ಸಂಕೀರ್ಣದ ಸೂಪರ್ ಲಾಭಕ್ಕಾಗಿ ಜಗತ್ತಿನಲ್ಲಿ ಯುದ್ಧ ಹೂಡುತ್ತಿದ್ದಾರೆ. ಯುದ್ಧಕೋರ ಭ್ರಷ್ಟ ವಿದೇಶ ನಾಯಕರಿಗೆ ಬಿಲಿಯಗಟ್ಟಲೆ ಡಾಲರುಗಳ ಹಣ ಪೋಲು ಮಾಡುತ್ತಿದ್ದಾರೆ. ಟ್ರಂಪ್ (ಸ್ವತಃ ಒಬ್ಬ ಅತಿ ಶ್ರೀಮಂತ ನಾಗಿದ್ದು ಪ್ರತಿಷ್ಠಿತರ ಗುಂಪಿಗೆ ಸೇರಿದ್ದರೂ, ಎಲಾನ್ ಮಸ್ಕ್ ಮತ್ತು ಇತರ ಹಲವು ಬಿಲಿಯಾಧೀಶರು ಅವರ ಬೆಂಬಲಕ್ಕೆ ನಿಂತಿದ್ದರು) ಆತ ಈ 'ವ್ಯವಸ್ಥೆ'ಯ ಹೊರಗಿನವನು. ಆತ ಮಾತ್ರ ಈ, 'ವ್ಯವಸ್ಥೆ'ಯ ವಿರುದ್ಧ ಹೋರಾಡಬಲ್ಲ. – ಈ ಪ್ರಚಾರವನ್ನು 'ಮಗ' ಗುಂಪುಗಳು ವ್ಯವಸ್ಥಿತವಾಗಿ ಮಾಡುತ್ತಿವೆ. ಮೊದಲನೆಯದು ಹಸಿ ಸುಳ್ಳು, ಪೂರ್ವಾಗ್ರಹ, ಅನ್ಯರ ಬಗ್ಗೆ ಗುಮಾನಿ./ದ್ವೇಷದ ನಕಾರಾತ್ಮಕ ಭಾವನೆಗಳ ಮೇಲೆ ಆಧಾರಿತವಾಗಿದೆ. ಆದರೆ ಜನರ ಸಂಕಷ್ಟಗಳಿಗೆ ಕಾರಣವಾದ ವ್ಯವಸ್ಥೆ ಬಗ್ಗೆ ಹೇಳುತ್ತಿರುವ ಎರಡನೆಯ ಭಾಗ ಅಕ್ಷರಶಃ ನಿಜ. ಹಾಗಾಗಿ 'ಮಗ' ಪ್ರಚಾರಕ್ಕೆ ಹಿಂದೆಂದಿಗಿಂತಲೂ ಸ್ಪಂದನೆ ಸಿಕ್ಕಿದೆ.

ಕಳೆದ 4 ವರ್ಷಗಳಲ್ಲಿ ಕೊವಿದ್ ಕುಸಿತಕ್ಕೆ ನೆರವಿನ ಹೆಸರಿನಲ್ಲಿ ಒಂದು ಕಡೆ ಕಾರ್ಪೊರೆಟ್ ಗೆ ಭಾರೀ ಹಣ ಹರಿದರೆ, ಇನ್ನೊಂದು ಕಡೆ ಜೀವನಾವಶ್ಯಕ ವಸ್ತುಗಳು, ಮನೆ, ವಿದ್ಯುತ್–ನೀರು, ಶಿಕ್ಷಣ, ಆರೋಗ್ಯ ಇತ್ಯಾದಿ ಸೇವೆಗಳು ಅತಿ ದುಬಾರಿಯಾಗಿವೆ. ತೆರಿಗೆಗಳು ವಿಪರೀತ ಹೆಚ್ಚಾಗಿದ್ದು ಜನರನ್ನು ಕಾರ್ಪೊರೆಟ್‌ಗಳು ಲೂಟಿ ಹೊಡೆಯುತ್ತಿವೆ. ಜೀವನ ವೆಚ್ಚದ ಬಿಕ್ಕಟ್ಟು ತೀವ್ರವಾಗುತ್ತಿದೆ. ಮತ್ತೊಂದು ಕಡೆ ಬೈಡನ್ ಸರಕಾರ ಸೃಷ್ಟಿಸಿದ ಉಕ್ರೇನ್ ಯುದ್ಧಕ್ಕೆ ನೂರಾರು ಬಿಲಿಯನ್ ಡಾಲರು ಹಣ, ಮಿಲಿಟರಿ ಉಪಕರಣ ಹರಿದು ಹೋಗುತ್ತಿದೆ. ಪಶ್ಚಿಮ ಏಶ್ಯಾದಲ್ಲೂ ಪ್ಯಾಲೆಸ್ಟೈನ್ನರ ಜನಾಂಗ ವಧೆಯಲ್ಲಿ ತೊಡಗಿರುವ ಯುದ್ಧಕೋರ ಇಸ್ರೇಲನ್ನು ತಡೆಯುವುದಿರಲಿ, ಅದಕ್ಕೆ ಕುಮ್ಮಕ್ಕು ಕೊಡಲಾಗುತ್ತಿದೆ. ಇವೆರಡೂ ಯುದ್ಧಗಳು ಗೆಲ್ಲಲಾಗದವು, ಈ ಯುದ್ಧಗಳಲ್ಲಿ ಯು.ಎಸ್ ಗೆ ಸೋಲು ಹೆಚ್ಚು ಕಡಿಮೆ ಖಚಿತವಾಗುತ್ತಿದ್ದು, ಜಗತ್ತಿನಲ್ಲಿ 'ಅಮೆರಿಕದ ಮರ್ಯಾದೆ ಹೋಗುತ್ತದೆ' ಮಾತ್ರವಲ್ಲ, ಅಣು ಯುದ್ಧದ ಆತಂಕ ಸಹ ಕಾಡುತ್ತಿದೆ. ದೇಶದೊಳಗಿನ ನೂರೆಂಟು ಸಮಸ್ಯೆಗಳನ್ನು ಬಿಟ್ಟು ಅಮೆರಿಕದ ಹಿತಾಸಕ್ತಿಗೆ 'ಏನೂ ಪ್ರಯೋಜನವಿಲ್ಲದ' ಯುದ್ಧದಲ್ಲಿ ಏಕೋಮನಸ್ಸಿನಿಂದ ತೊಡಗಿರುವ ಬೈಡನ್ ಸರಕಾರದ ಬಗ್ಗೆ ಜನತೆಗೆ ತೀವ್ರ ಆಕ್ರೋಶವಿತ್ತು.

ಟ್ರಂಪ್ ಮತ್ತು ಅವರ 'ಮಗ' ಪ್ರಚಾರಕರು ಜನತೆಯನ್ನು ಬಾಧಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾತನಾಡುತ್ತಾರೆ. ಅದಕ್ಕೆ ತಮ್ಮದೇ ಆದ (ಬಹುಶಃ ಜಾರಿ ಮಾಡಲಾಗದ, ಜಾರಿ ಮಾಡಲು ಪ್ರಯತ್ನಿಸಲು ಹೋಗದ) ನಿರ್ದಿಷ್ಟ ಕ್ರಮಗಳನ್ನು ವಿಶ್ವಾಸ ಬರುವಂತೆ ಘೋಷಿಸುತ್ತಾರೆ. ದೇಶೀಯ ತೈಲ ಉತ್ಪಾದನೆ ಹೆಚ್ಚಿಸುವುದರ ಮೂಲಕ ಮತ್ತು ಇತರ ಕಟ್ಟುನಿಟ್ಟಿನ ಕ್ರಮಗಳ ಮೂಲಕ ತೈಲ ಸೇರಿದಂತೆ ಎಲ್ಲ ಬೆಲೆಗಳನ್ನು ಇಳಿಸುತ್ತೇನೆ. ವಿದೇಶೀ (ಪ್ರಮುಖವಾಗಿ ಚೀನಿ) ಉತ್ಪನ್ನಗಳ ಮೇಲೆ ಶೇ.20–60 ಆಮದು ಸುಂಕ ಹೇರಿ, ಸರಕು ಉತ್ಪಾದನೆಗೆ ರಿಯಾಯಿತಿ ಕೊಟ್ಟು, ಉದ್ಯೋಗ ರಫ್ತು ಮಾಡುವ ಕಂಪನಿಗಳನ್ನು ದಂಡಿಸಿ ರಫ್ತಾದ ಎಲ್ಲ ಉದ್ಯೋಗಗಳನ್ನು ವಾಪಸು ತರುತ್ತೇನೆ. ನಿಮ್ಮ ಉದ್ಯೋಗಗಳನ್ನು ಕಸಿದುಕೊಳ್ಳುತ್ತಿರುವ ಬಡ ದೇಶಗಳಿಂದ ಬಂದಿರುವ 1 ಕೋಟಿ ವಲಸೆ ಕಾರ್ಮಿಕರನ್ನು ಮಿಲಿಟರಿ–ಪೋಲಿಸ್ ಬಳಸಿ ದೇಶದಿಂದ ಒದ್ದೋಡಿಸಿ ಸಹ ಉದ್ಯೋಗಗಳು ಹೆಚ್ಚಾಗುತ್ತವೆ. ನಮ್ಮ ರಫ್ತಿನ ಮೇಲೆ ಸುಂಕ ಹಾಕಿದರೆ, ತಮ್ಮ ವಿದೇಶೀ ವ್ಯಾಪಾರದಲ್ಲಿ ಡಾಲರ್ ಬಳಸದಿದ್ದರೆ (ಬ್ರಿಕ್ಸ್ ದೇಶಗಳಿಂದ ನಿರ್ಡಾಲರೀಕರಣದ ಬೆದರಿಕೆಯ ಹಿನ್ನೆಲೆಯಲ್ಲಿ) ಅಂತಹ ದೇಶಗಳು ಮುಳುಗಿ ಹೋಗುವ ಆರ್ಥಿಕ ದಿಗ್ಬಂಧನ ಹಾಕುತ್ತೇನೆ ಎಂದೆಲ್ಲ ಆಶ್ವಾಸನೆ ಕೊಡುತ್ತಾರೆ. (ಇವು ಮೋದಿಯ 'ಪ್ರತಿಯೊಬ್ಬರ ಖಾತೆಯಲ್ಲಿ 15 ಲಕ್ಷ ರೂ, ಪ್ರತಿ ವರ್ಷ 2 ಕೋಟಿ ಉದ್ಯೋಗ"ದ ಘೋಷಣೆಗಳಂತೆ.) 2016ರಲ್ಲೂ ಹೆಚ್ಚು ಕಡಿಮೆ ಇವೇ ಘೋಷಣೆಗಳನ್ನು ಕೊಡಲಾಗಿತ್ತು. 2016–20 ಅವಧಿಯಲ್ಲಿ ಯಾಕೆ ಇವನ್ನು ಜಾರಿಗೊಳಿಸಲಿಲ್ಲ? ಅಂತ ಮತದಾರರೂ ಕೇಳುವುದಿಲ್ಲ, ಡೆಮೊಕ್ರಾಟ್ ಪ್ರಚಾರಕರೂ ಕೇಳುವುದಿಲ್ಲ. ಹಾಗಾಗಿ ಇಂದಿನ ದುರ್ಭರ ಆರ್ಥಿಕ ಪರಿಸ್ಥಿತಿಯಲ್ಲಿ ಇವು ಮತ್ತೆ ಆಪ್ಯಾಮಾನವಾಗಿ ಕಾಣಿಸುತ್ತವೆ. ಉಕ್ರೇನ್ ಯುದ್ಧವನ್ನು 24 ಗಂಟೆಗಳಲ್ಲಿ ನಿಲ್ಲಿಸುತ್ತೇನೆ. ನಾನು ಅಧ್ಯಕ್ಷನಾಗಿದ್ದರೆ ಪುಟಿನ್ ಉಕ್ರೇನಿನ ದಾಳಿ ಮಾಡುವ ಧೈರ್ಯ ಮಾಡುತ್ತಿರಲಿಲ್ಲ. ಇಸ್ರೇಲ್ ಯುದ್ಧ ಸಹ ನಿಲ್ಲಿಸುತ್ತೇನೆ ಎನ್ನುತ್ತಾರೆ ಟ್ರಂಪ್. ಅವರ ಅಧಿಕಾರಾವಧಿಯಲ್ಲಿ ಯಾವುದೇ ಹೊಸ ಯುದ್ಧ ಆರಂಭಿಸದ್ದು ಈ ಹೇಳಿಕೆಯ ಬಗ್ಗೆ ಜನರಲ್ಲಿ ವಿಶ್ವಾಸ ಹುಟ್ಟಿಸಿದೆ.

ಟ್ರಂಪ್ ಅವರ ಈ ಪ್ರಚಾರ ಪ್ರಹಾರವನ್ನು ಡೆಮೊಕ್ರಾಟಿಕ್ ಪಕ್ಷ ಮತ್ತು ಕಮಲಾ ಪ್ರಚಾರ ಯಂತ್ರ ಸಮರ್ಥವಾಗಿ ಎದುರಿಸಲಿಲ್ಲ. ಜನರ ಸಮಸ್ಯೆಗಳಿಗೆ ನಿರ್ದಿಷ್ಟ ಪರಿಹಾರ ಸೂಚಿಸುವ, ಸೂಪರ್ ಶ್ರೀಮಂತರಿಗೆ ಭಾರೀ ತೆರಿಗೆ ವಿನಾಯಿತಿ ಕೊಟ್ಟ ಜನತೆಯ ಜೀವನ ವೆಚ್ಚದ ಬಗ್ಗೆ ಏನೂ ಮಾಡದ, ಕೊವಿದ್ ಕಾಲದಲ್ಲಿ ಭಾರೀ ಸಾವು–ನೋವುಗಳನ್ನು ತಡೆಯಲು ಸಾಧ್ಯವಾಗದ ಟ್ರಂಪ್ 2016–20ರ ಆಡಳಿತದ ವೈಫಲ್ಯವನ್ನು ಬಯಲು ಮಾಡುವ ಬದಲು, ಜೀವನ ವೆಚ್ಚದ ಸಮಸ್ಯೆಗಳೇ ಇಲ್ಲ ಎಂಬ ನಿರಾಕರಣೆಯ ಹಾದಿಯನ್ನು ಕಮಲಾ ಪ್ರಚಾರ ಹಿಡಿಯಿತು. ಶೇರು ಮಾರುಕಟ್ಟೆ ಸುಗ್ಗಿಯಲ್ಲಿದೆ, ನಿರುದ್ಯೋಗ ದರ ರೆಕಾರ್ಡ್ ಇಳಿಕೆ ಕಂಡಿದೆ ಎಂಬ ನಿಲುವು ಜನರ ಸ್ವಂತ ಅನುಭವಗಳಿಗೆ ತಾಳೆಯಾಗದೆ ಕಮಲಾ ಕುರಿತು ಯಾವುದೇ ವಿಶ್ವಾಸ ಮೂಡಲಿಲ್ಲ. ಆರ್ಥಿಕ ವಿಷಯಗಳನ್ನು ಬಿಟ್ಟು ಬರಿಯ ಸಾಮಾಜಿಕ, ರಾಜಕೀಯ ವಿಷಯಗಳ ಕುರಿತು ಅವರ ಪ್ರಚಾರ ಒತ್ತು ಕೊಟ್ಟಿತು. ಸುಪ್ರೀಂ ಕೋರ್ಟಿನ ತೀರ್ಪಿನಿಂದಾಗಿ ಮಹಿಳೆಯರ ಗರ್ಭಪಾತದ ಹಕ್ಕಿನ ಫೆಡರಲ್ ಕಾನೂನು ವಜಾ ಆಗಿದ್ದನ್ನು, ಮತ್ತೆ ಸ್ಥಾಪಿಸುವುದನ್ನು ಕಮಲಾ ಪ್ರಚಾರ ಮುಖ್ಯ ಪ್ರಚಾರ ವಿಷಯ ಮಾಡಿತ್ತು. ಟ್ರಂಪ್ ಅವರ ಜನಾಂಗೀಯ, ಧಾರ್ಮಿಕ ಅಲ್ಪಸಂಖ್ಯಾತರನ್ನು ಹೀಯಾಳಿಸುವ ಧೋರಣೆಯ ವಿರುದ್ಧ ಅವರನ್ನು ಅಣಿ ನೆರೆಸಲು ಯತ್ನಿಸಿತು. ಸಂಘಟಿತ ಕಾರ್ಮಿಕರು, ಮಧ್ಯಮ ವರ್ಗದ ದೊಡ್ಡ ವಿಭಾಗಗಳಲ್ಲದೆ ಡೆಮೊಕ್ರಾಟಿಕ್ ಪಕ್ಷದ ಸಾಂಪ್ರದಾಯಿಕ ಬೆಂಬಲಿಗರಲ್ಲದೆ ಮಹಿಳೆಯರು, ಕರಿಯರು, ಲ್ಯಾಟಿನೊಗಳು, ಮುಸ್ಲಿಮರು, ವಲಸಿಗರು ದೊಡ್ಡ ಸಂಖ್ಯೆಯಲ್ಲಿ ಪಕ್ಷದ ಕೈಹಿಡಿಯುತ್ತಾರೆ ಎಂಬುದು ಅವರ ಲೆಕ್ಕಾಚಾರವಾಗಿತ್ತು. ಆದರೆ ಅದು ಕೈಗೂಡಲಿಲ್ಲ.

ಇಸ್ರೇಲಿನ ಜನಾಂಗ ವಧೆಯನ್ನು ಖಂಡಿಸದ ಕಮಲಾ ಗೆ ಬುದ್ಧಿ ಕಲಿಸಲು ಮುಸ್ಲಿಮರು, ಪ್ರಗತಿಪರರು, ಯುವಜನರು ಮತ ಹಾಕಲಿಲ್ಲ ಅಥವಾ ಸ್ವತಂತ್ರ ಅಭ್ಯರ್ಥಿಗಳಿಗೆ ಹಾಕಿದರು. ಉದಾಹರಣೆಗೆ ಕಳೆದ ಬಾರಿ ಮಿಶಿಗನ್ ರಾಜ್ಯದಲ್ಲಿ ಕಮಲಾ ಸೋತಿದ್ದರೂ, ಪ್ರತಿನಿಧಿ ಸಭೆಯ ಚುನಾವಣೆಯಲ್ಲಿ ಪ್ಯಾಲೆಸ್ಟೈನ್ ಮಹಿಳೆ ರಶೀದಾ ಶೇ.70 ಮತ ಪಡೆದು ಗೆಲ್ಲುತ್ತಾರೆ. 10 ರಾಜ್ಯಗಳಲ್ಲಿ ಮಹಿಳೆಯರ ಗರ್ಭಪಾತ ಹಕ್ಕು ಕಾನೂನು ಇರಬೇಕೆ ಎಂಬುದು ಈ ಚುನಾವಣೆಯಲ್ಲಿ ಜನಮತಸಂಗ್ರಹದಲ್ಲಿ 9 ರಾಜ್ಯಗಳಲ್ಲಿ ಇರಬೇಕು ಎಂದು ಮತ ನೀಡಿದ್ದಾರೆ. ಇವುಗಳಲ್ಲಿ ಹಲವಲ್ಲಿ ಟ್ರಂಪ್ ಭಾರೀ ಬಹುಮತದಿಂದ ಗೆದ್ದಿದ್ದಾರೆ. ಟ್ರಂಪ್ ಮತ್ತು 'ಮಗ' ಗರ್ಭಪಾತ ಹಕ್ಕು ಕಾನೂನು ಇರಬಾರದು ಎಂದು ಅಭಿಪ್ರಾಯ ಪಡುತ್ತಾರೆ. ಇದರರ್ಥ ಟ್ರಂಪ್ ಮತ ನೀಡಿದ್ದಾರೆ ಎಂದ ಮಾತ್ರಕ್ಕೆ ಅವರ (ಜನಾಂಗ ದ್ವೇಷಿ, ಮಹಿಳಾ–ದ್ವೇಷಿ ಅಥವಾ ಯಾವುದೇ) ಎಲ್ಲ ಅಭಿಪ್ರಾಯಗಳನ್ನು ಒಪ್ಪುತ್ತಾರೆ

ಪುಟ 14 ಕ್ಕೆ

ವಕ್ಫ್ ಆಸ್ತಿ ವಿವಾದ: ಯಾಕಿಷ್ಟು ಗದ್ದಲ.... ಪುಟ 5 ರಿಂದ

1995ರ ಅಡಿಯಲ್ಲಿ ರಚಿತವಾದ ಶಾಸನಬದ್ಧ ಸಂಸ್ಥೆಯಾಗಿದೆ. ಸುಮಾರು 47,313 ವಕ್ಫ್‌ಗಳು ಮಂಡಳಿಯಲ್ಲಿ ನೊಂದಾಯಿಸಲ್ಪಟ್ಟಿವೆ. ಇವುಗಳಲ್ಲಿ ಮಸೀದಿ, ದರ್ಗಾಗಳು, ಈದ್ಗಾಗಳು, ಖಬ್ರಸ್ತಾನ್ಗಳು (ಸಮಾಧಿ ಸ್ಥಳಗಳು), ಅಶೂರ್ಖಾನಾಗಳು, ಅನಾಥಾಶ್ರಮಗಳು, ಮಕಾನ್‌ಗಳು, ಇತ್ಯಾದಿ.

ಮಂಡಳಿಯು ವಿವಿಧ ವರ್ಗಗಳಿಂದ ನಾಮನಿರ್ದೇಶಿತ ಮತ್ತು ಚುನಾಯಿತ ಸದಸ್ಯರನ್ನು ಹೊಂದಿದೆ ಮತ್ತು ಅಧ್ಯಕ್ಷರನ್ನು ಸದಸ್ಯರು ಆಯ್ಕೆ ಮಾಡುತ್ತಾರೆ. ಮಂಡಳಿಯ ಸಿಬ್ಬಂದಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ನೇತೃತ್ವದಲ್ಲಿ ಹಿರಿಯ ಶ್ರೇಣಿಯಲ್ಲಿ ಕೆಎಎಸ್ ಅಧಿಕಾರಿಯಾಗಿದ್ದಾರೆ. ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಜಿಲ್ಲಾ ವಕ್ಫ್ ಸಲಹಾ ಸಮಿತಿ ಕಚೇರಿಗಳಿವೆ.

ವಕ್ಫ್ ಆಸ್ತಿ ವಿವಾದ ಯಾಕಾಗಿ?

ಸರ್ಕಾರ ಮತ್ತು ಸಂಬಂಧಿಸಿದ ಕಂದಾಯ ಇಲಾಖೆ ದಾಖಲೆಗಳನ್ನು ನವೀಕರಿಸದ ಕಾರಣಕ್ಕೆ, ಅಥವಾ ಜಮೀನು ಪಡೆದ ರೈತರು ತಮ್ಮ ಆಸ್ತಿಯನ್ನು ಇಂಡೀಕರಣ ಮಾಡಿಸಿ ದಾಖಲೆಯನ್ನು ನವೀಕರಣ ಮಾಡಿಕೊಳ್ಳದೇ ಇರುವುದರಿಂದ ಇಂತಹ ವಿವಾದಿತ ಆಸ್ತಿಗಳು ವಕ್ಫ್ ನ ಆಸ್ತಿಯಾಗಿ ಉಳಿದುಕೊಂಡಿರುವುದಕ್ಕೆ ಕಾರಣವಾಗಿದೆ. ಭೂಸುಧಾರಣೆ ಕಾಯ್ದೆ ಜಾರಿಯಿಂದಾಗಿ, 79,000 ಎಕರೆಯಷ್ಟು ವಕ್ಫ್ ಭೂಮಿ ಉಳುಮೆ ಮಾಡುತ್ತಿದ್ದ ರೈತರಿಗೆ ಹಂಚಿಕೆಯಾಗಿದೆ ಎಂದು ವರದಿಗಳು ಹೇಳುತ್ತಿವೆ. ಆದರೆ, ಸಯ್ಯದ್ ಅಲಿ ಮತ್ತು ಇತರರು ಹಾಗೂ ಆಂಧ್ರಪ್ರದೇಶ ವಕ್ಫ್ ಮಂಡಳಿ ನಡುವಣ ಪ್ರಕರಣದಲ್ಲಿ 1998ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು, ಆಸ್ತಿಗಳ ಮೇಲೆ ವಕ್ಫ್ ಮಂಡಳಿಯ ಹಕ್ಕು ಪ್ರತಿಪಾದನೆಗೆ ಬಲನೀಡಿತು. 'ಒಮ್ಮೆ ವಕ್ಫ್ ಆಸ್ತಿ ಎಂದು ಜಮೀನಿನ ದಾಖಲೆಯಲ್ಲಿ ನಮೂದಾದರೆ ಅದು ಖಾಯಂ ಆಗಿ ವಕ್ಫ್ ಆಸ್ತಿ ಆಗುತ್ತದೆ. ಇನಾಮದಾರಿ ಮತ್ತು ಗೇಣಿದಾರಿ ಪದ್ಧತಿ, ಭೂಸುಧಾರಣಾ ಕಾಯ್ದೆಗಳ ಅನ್ವಯ ವಕ್ಫ್ ಆಸ್ತಿ ಜಮೀನು ವರ್ಗಾವಣೆ ಆಗಿದ್ದಲ್ಲಿ, ಅದನ್ನು ಮರುವಶಕ್ಕೆ ಪಡೆಯಬೇಕು' ಎಂದು ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತು. ಆ ನಂತರ ರಾಜ್ಯದಲ್ಲಿ ಆಳ್ವಿಕೆ ನಡೆಸಿದ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ನೇತೃತ್ವದ ಸರ್ಕಾರಗಳು ಸುಪ್ರೀಂ ಕೋರ್ಟ್‌ನ ಈ ತೀರ್ಪನ್ನು ಅನುಷ್ಠಾನಗೊಳಿಸಲು ಮುಂದಾದವೇ ವಿನಹ, ರೈತರ ಹಿತ ಕಾಯುವ ಮತ್ತು ಇದರ ಸಾಧಕ–ಭಾದಕ ಯೋಚಿಸುವ ಪ್ರಯತ್ನ ಮಾಡಲಿಲ್ಲ.

ಇಂತಹ ಆಸ್ತಿ ವಿವಾದ ಮುಸ್ಲಿಮರ ವಕ್ಫ್ ಆಸ್ತಿಗೆ ಮಾತ್ರ ಸಂಬಂಧಿಸಿದ್ದು ಎಂದು ತಿಳಿದಿದ್ದರೆ ಅದು ತಪ್ಪಾಗುತ್ತದೆ. ಇಂತಹ ವಿವಾದ ಹಿಂದೂಗಳ ಮುಜರಾಯಿ ಆಸ್ತಿಗಳಲ್ಲಿಯೂ ಇದೆ. ಅರಣ್ಯ ಇಲಾಖೆಗೆ ಸಂಬಂಧಿಸಿದ ವಿವಾದಗಳೂ ಇವೆ. ನೂರು ವರ್ಷಗಳ ಹಿಂದಿನ 'ಅರಣ್ಯ' ಎಂಬ ದಾಖಲೆ ತೋರಿಸುವ ಮೂಲಕ, 50–60 ವರ್ಷಗಳಿಂದ ಉಳುಮೆ ಮಾಡುತ್ತಿರುವ ಕಂದಾಯ ಭೂಮಿಯನ್ನು, ಅರಣ್ಯ ಇಲಾಖೆಯು ತನ್ನದೆಂದು ರೈತರನ್ನು ಒಕ್ಕಲೆಬ್ಬಿಸುತ್ತಿರುವ ಘಟನೆಗಳೂ ನಡೆದಿವೆ, ನಡೆಯುತ್ತಿವೆ.

ಇಂತಹ ಬಹಳಷ್ಟು ಆಸ್ತಿಗಳು ಇಂಡೀಕರಣ ಆಗಿರುವುದಿಲ್ಲ, ರೈತರ ಹೆಸರಿಗೆ ಪೋಡಿ (ಕಬ್ಜೆ ಅಥವಾ ಸ್ವಾಧೀನತೆ) ಆಗಿರುವುದಿಲ್ಲ. ಈ ರೀತಿ ಆದಾಗ ಭೂದಾಖಲೆಯ ಪೋಡಿ ಕಾಲಂ ನಲ್ಲಿ ಭೂಮಿಯ ಮೂಲ ಮಾಲೀಕನ ಹೆಸರೇ ಇರುತ್ತದೆ. ಆಸ್ತಿಗಳ ಮಾಹಿತಿಯನ್ನು ಭೂಮಿ ತಂತ್ರಾಂಶದಡಿಯಲ್ಲಿ ನೊಂದಾಯಿಸಲು ಆರಂಭಿಸಿದ ನಂತರ ಇಂತಹ ಬಹಳಷ್ಟು ಸಮಸ್ಯೆಗಳು ಬೆಳಕಿಗೆ ಬರತೊಡಗಿವೆ. ಭೂ ದಾಖಲೆಗಳನ್ನು ಸರಿಯಾಗಿ ನಿರ್ವಹಿಸದ ಸರ್ಕಾರದ ನಿರ್ಲ್ಯಕ್ಷ, ಭೂಸುಧಾರಣೆ ಕಾಯ್ದೆ ಜಾರಿಯ ಭಾಗವಾಗಿ ಉಳುವವನೇ ಭೂ ಒಡೆಯ ಎಂಬ ಕಾನೂನಿನ ಮೂಲಕ ಹಲವು ರೈತರಿಗೆ ಜಮೀನು ದೊರಕಿದೆ. ಈ ರೀತಿ ಭೂಮಿ ಪಡೆದ ರೈತರ ಹೆಸರಿಗೆ ಪೋಡಿ ಮಾಡಿಲ್ಲ. ಭೂಮಿ ಮಂಜೂರಾದ ಸಮಯದಲ್ಲಿಯೇ ಸಂಬಂಧಿಸಿದ ರೈತರ ಹೆಸರಿಗೆ ಖಾತೆ ಮಾಡಿಕೊಟ್ಟಿದ್ದರೆ, ಅಂದೇ ಪೋಡು ಮಾಡಿದ್ದರೆ ಇಂತಹ ಸಮಸ್ಯೆ ಬರುತ್ತಿರಲಿಲ್ಲ.

ವಕ್ಫ್ ಮಂಡಳಿ ರೈತರಿಗೆ ನೀಡಿರುವ ನೋಟೀಸ್ ಗಳನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಎಂದು ರಾಜ್ಯ ಸರ್ಕಾರ ಹೇಳುತ್ತಿದೆ. ಜಮೀನಿನ ಪಹಣಿಯಲ್ಲಿ ಸೇರಿರುವ ವಕ್ಫ್ ಭೋರ್ಡ್ ಹೆಸರನ್ನು ತೆಗೆಯಲು ಸರ್ಕಾರ ಕ್ರಮ ಕೈಗೊಳ್ಳಬೇಕಿದೆ. ಇದೇ ನೀತಿಯನ್ನು ದೇವಸ್ಥಾನಗಳ ಮತ್ತು ಮುಜರಾಯಿ ಆಸ್ತಿ ವಿಷಯದಲ್ಲೂ ಅನುಸರಿಸಬೇಕಿದೆ. ಅರಣ್ಯ ಇಲಾಖೆಯೂ ಸಹಾ ರೈತರ ವಶದಲ್ಲಿರುವ ಸರ್ಕಾರಿ ಕಂದಾಯ ಭೂಮಿಯ ಪಹಣಿಯಲ್ಲಿ ಅರಣ್ಯ ಎಂದು ಪೋಡು ಮಾಡಿಕೊಂಡಿದೆ. ಇಂತಹ ಜಮೀನನ್ನು ಇಂಡೀಕರಣ ಮಾಡಿ, ಭೂದಾಖಲೆಗಳಲ್ಲಿ ಉಳುಮೆ ಮಾಡುವ ರೈತರ ಹೆಸರನ್ನು ಪೋಡು ಕಾಲಂ ನಲ್ಲಿ ನಮೂದಿಸಲು ಸರ್ಕಾರ ಮುಂದಾಗಬೇಕಿದೆ. ಇಂತಹ ವಿವಾದಗಳಿಂದಾಗಿ ಭೂಮಿ ಅನುಭವಿಸುತ್ತಿರುವ ರೈತರಿಂದ ಭೂಮಿಯನ್ನು ಕಸಿದುಕೊಳ್ಳುವಂತಾಗಬಾರದು. ದಶಕಗಳಿಂದ ಕಗ್ಗಂಟಾಗಿ ಉಳಿದಿರುವ ಆಸ್ತಿ ವಿವಾದದ ಪ್ರಕರಣವನ್ನು ಪರಿಹರಿಸಿ ರೈತರ ಹಿತ ಕಾಯಬೇಕಿದೆ. ಇದಕ್ಕಾಗಿ ಕಾನೂನಾತ್ಮಕ ಪರಿಹಾರಗಳ ಕುರಿತು ಗಂಭೀರವಾಗಿ ಯೋಚಿಸಬೇಕಿದೆ. ವಕ್ಫ್ ಭೋರ್ಡ್, ಮುಸ್ಲೀಂ ಸಮುದಾಯದ ಮುಖಂಡರು, ರೈತರು ಈ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಆಸ್ತಿ ವಿವಾದ ಬಗೆಹರಿಸುವ ಪ್ರಯತ್ನವಾಗಬೇಕಿದೆ. ಜನರ ಧಾರ್ಮಿಕ ಭಾವನೆಗಳನ್ನು ಕೆರಳಿಸಲು ಇದನ್ನು ಬಳಸಿಕೊಳ್ಳುವ ಕೋಮುವಾದಿಗಳಿಗೆ ಅವಕಾಶ ವಾಗದಂತೆ ಜನರು ಎಚ್ಚರ ವಹಿಸಬೇಕಿದೆ.

ವಕ್ಫ್ ಬೋರ್ಡ್ (ತಿದ್ದುಪಡಿ) ಮಸೂದೆ

ಕೇಂದ್ರ ಸರಕಾರ ಲೋಕಸಭೆಯಲ್ಲಿ ಆಗಸ್ಟ್ 8, 2024 ರಂದು, ವಕ್ಫ್ ಬೋರ್ಡ್ (ತಿದ್ದುಪಡಿ) ಮಸೂದೆ ಹಾಗೂ ಮುಸ್ಲಿಂ ವಕ್ಫ್ (ರದ್ದತಿ) ವಿಧೇಯಕಗಳನ್ನು ತರಲು ಮುಂದಾಯಿತು. ಇದು ಮುಸ್ಲಿಮರ ವಿರುದ್ಧ ವಿಷ ಉಗುಳುವ ಹಾಗೂ ಜನರ ನಡುವೆ ದ್ವೇಷ ಹುಟ್ಟಿಸುವ ಉದ್ದೇಶದಿಂದ ಕೂಡಿದೆ ಎಂದು ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದವು. ವಿರೋಧ ತೀವ್ರಗೊಂಡಿದ್ದರಿಂದ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ ಕಳುಹಿಸಿದೆ. ಅದು ತಾತ್ಕಾಲಿಕ ಸಮಾಧಾನವಷ್ಟೇ. ಈ ಮಸೂದೆಯು ವಿವಿಧತೆಯಲ್ಲಿ ಏಕತೆಯ ವಿರುದ್ಧ ಮಾತ್ರವಲ್ಲದೆ ಸಂವಿಧಾನದ ಭರವಸೆಯಂತೆ ಮತ ಧರ್ಮದ ಹಕ್ಕಿನ ವಿರುದ್ಧವೂ ಆಗಿದೆ. ಇದು ಸಂವಿಧಾನದ 25, 26, 27, 28, 29, 30ನೇ ವಿಧಿಗಳಿಗೆ ವಿರುದ್ಧವಾಗಿದೆ. ಭೂಮಿ ರಾಜ್ಯ ಪಟ್ಟಿಗೆ ಸೇರಿದೆ. ಆದರೆ, ಕೇಂದ್ರವು ಈ ಮಸೂದೆಯನ್ನು ಮಂಡಿಸುವ ಮೂಲಕ ಒಕ್ಕೂಟ ವ್ಯವಸ್ಥೆಯ ಮೇಲೆ ದಾಳಿ ಮಾಡಿದೆ. ಈ ಮಸೂದೆಯ ಮೂಲಕ ಮುಸ್ಲಿಮೇತರರನ್ನೂ ವಕ್ಫ್ ಆಡಳಿತ ಮಂಡಳಿಯ ಸದಸ್ಯರನ್ನಾಗಿ ಮಾಡಲಾಗುತ್ತಿದೆ. ಇದನ್ನು ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ನೇರ ದಾಳಿ. ಸಂಸತ್ತಿನಲ್ಲಿ ಮತ್ತು ಸಂಸತ್ತಿನ ಹೊರಗೆ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳ ವಿಶಾಲ ಏಕತೆ ಮತ್ತು ಚಳುವಳಿಯೊಂದಿಗೆ ಸಾರ್ವಜನಿಕ ವಲಯದಲ್ಲಿ ದ್ವೇಷಪೂರಿತ ಮತ್ತು ಸಂವಿಧಾನ ವಿರೋಧಿ ವಕ್ಫ್ ಕಾಯ್ದೆ ತಿದ್ದುಪಡಿ ಮಸೂದೆಯನ್ನು ಕೇಂದ್ರವು ಹಿಂಪಡೆಯುವಂತೆ ಮಾಡುವುದು ಇಂದಿನ ಅವಶ್ಯಕವಾಗಿದೆ.

ಟ್ರಂಪ್ ವಿಜಯ.... ಪುಟ 9 ರಿಂದ

ಮುಂದಿಡುವಲ್ಲಿ ಅವರು ವಿಫಲರಾಗಿದ್ದರು. ದುಡಿಯುವ ಜನರ ಹಕ್ಕುಗಳ ಪರವಾಗಿ ಮತ್ತು ಕಾರ್ಪೋರೇಟ್ ಲೂಟಿ ಹಾಗೂ ಬೆಲೆಯೇರಿಕೆ ಬಿಸಿ ಮತ್ತು ವಾಲ್‌ಸ್ಟ್ರೀಟ್ ಶ್ರೀಮಂತರ ವಿರುದ್ಧ ಹೆಚ್ಚು ತೀವ್ರವಾಗಿ ಪ್ರಚಾರ ಮಾಡಿದ್ದಿದ್ದರೆ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್‌ಗೆ ಇನ್ನಷ್ಟು ಬೆಂಬಲ ಸಿಗಬಹುದಿತ್ತು. ಆದರೆ, ಡೆಮಾಕ್ರಟಿಕ್ ಪಕ್ಷದ ವ್ಯವಸ್ಥೆ ಹಾಗೂ ವಾಲ್‌ಸ್ಟ್ರೀಟ್ ಫೈನಾನ್ಶಿಯರ್‌ಗಳು ಮತ್ತು ತಂತ್ರಜ್ಞಾನ ಮಿಲಿಯಾಧಿಪತಿಗಳೊಂದಿಗೆ ಸಂಪರ್ಕ ಹೊಂದಿರುವ ಅದರ ಒಳಗಿನ ಕೂಟವು, ಕಮಲಾ ಪ್ರಚಾರ ಕೇವಲ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ಹೇಳುವುದಕ್ಕೆ ಹಾಗೂ ತಾಳಮೇಳ ಇಲ್ಲದ ನೀತಿ ಉಪಕ್ರಮಗಳು ಹಾಗೂ ಆಶ್ವಾಸನೆಗಳಿಗೆ ಸೀಮಿತವಾಗಿತ್ತು. ಮಹಿಳೆಯರ ಪುನರುತ್ಪಾದನಾ ಹಕ್ಕುಗಳು ಮತ್ತು ಗರ್ಭಪಾತದ ಹಕ್ಕಿಗಾಗಿ ದನಿಯೆತ್ತಿದರಷ್ಟೇ ಹೆಚ್ಚು ಸಮಗ್ರ ಬೆಂಬಲ ಕ್ರೋಡೀಕರಿಸಲು ಸಾಲದು. ಲಿಂಗ ವಿಚಾರ ಕೂಡ ಅಷ್ಟೇ ಪ್ರಮುಖವಾದುದು ಎನ್ನುವುದನ್ನು ಫಲಿತಾಂಶ ತೋರಿಸಿಕೊಟ್ಟಿದೆ. ಹಿಂದೆ ಟ್ರಂಪ್ ಪರವಾಗಿ ಹೆಚ್ಚಾಗಿ ನಿಲ್ಲುತ್ತಿದ್ದ ಬಿಳಿಯ ಪುರುಷರಲ್ಲದೆ, ಈ ಬಾರಿ ಕರಿಯ ಹಾಗೂ ಲ್ಯಾಟಿನೊ ಪುರುಷರ ಒಂದು ವಿಭಾಗವೂ ಕಮಲಾರಿಗೆ ಬೆಂಬಲ ನೀಡಲಿಲ್ಲ. ಇದು ಸ್ತ್ರೀ ದ್ವೇಷವು ಸಮಾಜದಲ್ಲಿ ಎಷ್ಟು ಆಳವಾಗಿ ಬೇರೂರಿದೆ ಎನ್ನವುದನ್ನು ಬಟಾ ಬಯಲುಗೊಳಿಸಿದೆ.

ಡೆಮಾಕ್ರಟಿಕ್ ಪಕ್ಷವು ವೃತ್ತಿಪರರು, ಹೆಚ್ಚು ವೇತನದ ಕಾಲೇಜ್ ಪದವೀಧರರು ಮತ್ತು ಕಾರ್ಪೊರೇಟ್‌ಗಳ ಹಿತವನ್ನು ಪ್ರತಿನಿಧಿಸುತ್ತದೆ ಎಂದು ಕಾಣಲಾಗುತ್ತದೆ. ಈ ಪರಿಕಲ್ಪನೆಯೇ ಸಾಂಪ್ರದಾಯಿಕವಾಗಿ ಡೆಮಾಕ್ರಟಿಕ್ ಪಕ್ಷದ ಬೆಂಬಲಿಗರಾಗಿರುವ ದುಡಿಯುವ ಜನರು ಅದರಿಂದ ದೂರವಾಗುವಂತೆ ಮಾಡಿತು. ವಿಶೇಷವಾಗಿ ಮಿಚಿಗನ್, ಪೆನ್ಸಿಲ್ವೇನಿಯಾ, ವಿಸ್ಕಾನ್ಸಿನ್ ಮತ್ತು ಓಹಿಯೋದಂಥ ಮಧ್ಯ–ಪಶ್ಚಿಮ ರಾಜ್ಯಗಳಲ್ಲಿ ಇದು ಸ್ಪಷ್ಟವಾಗಿದೆ. ಸಹಜವಾಗಿಯೇ ವರ್ತಕರು, ಉದ್ಯಮಿಗಳು, ಧನಿಕರ ತೆರಿಗೆ ಕಡಿತದಂಥ ಕಾರ್ಪೊರೇಟ್–ಪರ ಧೋರಣೆಗಳನ್ನು ಹೊಂದಿರುವ ಬಿಲಿಯಾಧಿಪತಿ ಅಭ್ಯರ್ಥಿಯನ್ನು ದುಡಿಯುವ ವರ್ಗವು ಬೆಂಬಲಿಸಿದ್ದು ನಿಶ್ಚಯವಾಗಿಯೂ ಒಂದು ವಿರೋಧಾಭಾಸವಾಗಿದೆ.

ಪರಿಸರ ರಕ್ಷಣೆ ಕುರಿತಾದ ಕಾನೂನುಗಳನ್ನು ಟ್ರಂಪ್ ಖಂಡಿತವಾಗಿಯೂ ಸಂಪೂರ್ಣವಾಗಿ ತಿರುವು ಮುರುವು ಮಾಡುತ್ತಾರೆ ಹಾಗೂ ತೈಲ ಮತ್ತು ತ್ಯಾಜ್ಯ ನೀರು (ಫ್ರಾಕಿಂಗ್) ಉದ್ಯಮವನ್ನು ಉತ್ತೇಜಿಸುತ್ತಾರೆ. ಮಿಚಿಗನ್‌ನಂಥ ರಾಜ್ಯದಲ್ಲಿ ಅರಬ್–ಅಮೆರಿಕನ್ ಮತಗಳ ನಷ್ಟವಾಗಿ ಕಮಲಾ ಸೋಲಿಗೆ ಕಾರಣವಾಗಿದ್ದು ಒಂದು ಅಣಕವಾಗಿದೆ. ಬೈಡೆನ್–ಹ್ಯಾರಿಸ್ ಆಡಳಿತವು ಗಾಜಾ ನರಮೇಧವನ್ನು ಕಣ್ಮುಚ್ಚಿಕೊಂಡು ನೋಡುತ್ತಾ ಕುಳಿತದ್ದು ಅರಬ್–ಅಮೆರಿಕನ್ ಮತದಾರರ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಕಾರಣಕ್ಕಾಗಿ, ಅನೇಕ ಯುವಜನರು ಕೂಡ ಕಮಲಾ ಹ್ಯಾರಿಸ್‌ರನ್ನು ಬೆಂಬಲಿಸಲಿಲ್ಲ.

ಅತಿ ಬಲಪಂಥೀಯತೆ

ಯುರೋಪ್ ಮತ್ತಿತರ ದೇಶಗಳಲ್ಲಿ ಅತಿ ಬಲಪಂಥೀಯ ಪಕ್ಷಗಳು ಮುನ್ನಡೆ ಸಾಧಿಸುತ್ತಿರುವ ಹಿನ್ನೆಲೆಯಲ್ಲಿ ಟ್ರಂಪ್ ಜಯವನ್ನು ನೋಡಬೇಕಾಗುತ್ತದೆ. ವಲಸೆ ಮತ್ತು ಹೊರಗಿನವರ ಭಯವು ಈ ವಿದ್ಯಮಾನದ ಅತಿ ಪ್ರಮುಖ ಅಂಶವಾಗಿದೆ. ರಿಪಬ್ಲಿಕನ್ನರು ಸೆನೆಟ್‌ನಲ್ಲಿ ಬಹುಮತ ಪಡೆದಿದ್ದು ಇದೀಗ ಕಾಂಗ್ರೆಸ್ ಕೂಡ ರಿಪಬ್ಲಿಕನ್ನರ ಪಾಲಾಗಿರುವುದರಿಂದ, ಬಲಪಂಥೀಯ ಹಾಗೂ ಪ್ರತಿಗಾಮಿ ಕ್ರಮಗಳನ್ನು ಕೈಗೊಳ್ಳಲು ಟ್ರಂಪ್ ಹಾದಿ ಸುಗಮವಾಗಲಿದೆ.

ಹೊರ ಪ್ರಪಂಚಕ್ಕೆ, ಡೆಮಾಕ್ರಟಿಕ್ ಮತ್ತು ರಿಪಬ್ಲಿಕನ್ ಪಕ್ಷಗಳ ಅಧ್ಯಕ್ಷರ ನಡುವೆ ಆಯ್ಕೆ ಮಾಡಿಕೊಳ್ಳಲು ಹೆಚ್ಚಿನದ್ದೇನೂ ಉಳಿದಿರುವುದಿಲ್ಲ. ಎರಡೂ ಪಕ್ಷಗಳು ಸಾಮ್ರಾಜ್ಯಶಾಹಿ ಯುದ್ಧಕೋರ ಪಕ್ಷಗಳೇ ಆಗಿವೆ. ಕ್ಲಿಂಟನ್ ಆಗಲಿ ಬುಷ್ ಆಗಲಿ, ಇರಾಕ್ ಮತ್ತು ಪಶ್ಚಿಮ ಏಷ್ಯಾದ ಜನರು ಅಮೆರಿಕನ್ ಯುದ್ಧ ಯಂತ್ರದ ಟಾರ್ಗೆಟ್ ಆಗಿರುತ್ತಾರೆ. ಟ್ರಂಪ್‌ನಂತೆ ಬೈಡೆನ್ ಕೂಡ ಇಸ್ರೇಲ್‌ಗೆ ಅಂಥ ಬೆಂಬಲ ನೀಡುವ ನೀತಿಯನ್ನೇ ಅನುಸರಿಸಿದರು. ಗಾಜಾದಲ್ಲಿನ ನರಮೇಧದ ಯುದ್ಧಕ್ಕೆ ಬೈಡೆನ್ ಆಡಳಿತ ಹಣಕಾಸು ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸಿ ಬೆಂಬಲ ನೀಡಿದೆ. ಮಿಲಿಟರಿ ಮಧ್ಯಪ್ರವೇಶಗಳ ಮೂಲಕ ಅಥವಾ ನಿರ್ಬಂಧಗಳನ್ನು ಹೇರಿ ಅಮೆರಿಕದ ಏಕಸ್ವಾಮ್ಯವನ್ನು ಸಾಧಿಸುವ ವಿಚಾರದಲ್ಲಿ ಡೆಮಾಕ್ರಾಟರು ಮತ್ತು ರಿಪಬ್ಲಿಕನ್ನರ ನಡುವೆ ಅಂಥ ವ್ಯತ್ಯಾಸವೇನೂ ಇಲ್ಲ. ಟ್ರಂಪ್ ಎರಡನೇ ಸಲ ಅಧ್ಯಕ್ಷರಾಗಿದ್ದು ಪ್ಯಾಲೆಸ್ತೀನಿಯರಿಗೆ ನಿಜಕ್ಕೂ ಕೆಟ್ಟ ಸುದ್ದಿ. ಟ್ರಂಪ್ ಇಸ್ರೇಲ್‌ನ ಕಟ್ಟಾ ಬೆಂಬಲಿಗ ಆಗಿರುವುದು ಮಾತ್ರವಲ್ಲದೆ, ಬೆಂಜಮಿನ್ ನೆತನ್ಯಾಹುಗೆ ಪ್ರಬಲವಾಗಿ ಬೆಂಬಲಿಸುವುದೇ ಇದಕ್ಕೆ ಕಾರಣ. ಚೀನಾ ಜತೆಗಿನ ಬಾಂಧವ್ಯ ಇನ್ನಷ್ಟು ಹಳಸಬಹುದು. ಯಾಕೆಂದರೆ, ಟ್ರಂಪ್ ಚೀನಿ ಸರಕುಗಳ ಮೇಲೆ ಹೆಚ್ಚು ತೆರಿಗೆ ವಿಧಿಸಬಹುದು ಹಾಗೂ ವಾಣಿಜ್ಯ ಸಂಬಂಧಗಳಲ್ಲಿ ನಿರ್ಬಂಧ ಹೇರಬಹುದು. ಅಮೆರಿಕ ಫಸ್ಟ್ ಎಂಬ ಟ್ರಂಪ್ ಧೋರಣೆಯ ಕಾರಣದಿಂದಾಗಿ ಯುರೋಪ್‌ನ ಮಿತ್ರರು ಹಾಗೂ ನ್ಯಾಟೋ ಜೊತೆಗಿನ ಸಂಬಂಧ ಅನಿಶ್ಚಿತ ಘಟ್ಟವನ್ನು ಪ್ರವೇಶಿಸಲಿದೆ. ರಷ್ಯಾ ಜತೆಗಿನ ಯೂಕ್ರೇನ್ ಯುದ್ಧಕ್ಕೆ ಬೇಷರತ್ ಬೆಂಬಲ ನೀತಿಗೆ ಟ್ರಂಪ್ ಬದ್ಧರಾಗಿರುತ್ತಾರೆಯೋ ಎಂಬುದನ್ನು ಕಾದು ನೋಡಬೇಕಿದೆ. ಒಟ್ಟಿನಲ್ಲಿ ಹೇಳುವುದಾದರೆ, ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಮಹಾ ಅನಿಶ್ಚಯದ ಅವಧಿ ಬರುವುದಂತೂ ನಿಶ್ಚಿತ.

ಭಾರತದಲ್ಲಿ, ಅಮೆರಿಕದ ಚುನಾವಣಾ ಫಲಿತಾಂಶದಿಂದ ನರೇಂದ್ರ ಮೋದಿಯವರಿಗೆ ಖುಷಿಯಾಗಬಹುದು. ಯಾಕೆಂದರೆ, ಮೋದಿಯವರಿಗೆ ಟ್ರಂಪ್ ಸೈದ್ಧಾಂತಿಕ ಸಾಮೀಪ್ಯವಿರುವ ಗೆಳೆಯನಾಗಿದ್ದಾರೆ. ಬಹಳ ವೇಗವಾಗಿ ಮಿಲಿಟರಿ ಒಪ್ಪಂದಗಳು ಏರ್ಪಡಬಹುದೆಂದು ನಿರೀಕ್ಷಿಸಬಹುದಾಗಿದೆ.

ಅನು: ವಿಶ್ವ

“ಕಾಯಿರಿ, ಯೋಚಿಸಿ, ನಂತರ ಪ್ರತಿಕ್ರಿಯಿಸಿ’

ಡಿಜಿಟಲ್ ವಂಚನೆಗಳ ಬಗ್ಗೆ ಮೋದಿಯವರ ‘ಮೂರು ಮಂತ್ರಗಳು’!!

“ದೂರವಾಣಿ ಕರೆ ಮಾಡಿ ‘ನಿಮ್ಮನ್ನು ಡಿಜಿಟಲ್ ಅರೆಸ್ಟ್ ಮಾಡಲಾಗಿದೆ’ ಎಂದು ಹೆದರಿಸಿ, ಬ್ಯಾಂಕ್ ಖಾತೆಯಲ್ಲಿರುವ ಹಣವನ್ನು ಲಪಟಾಯಿಸುವ ದಂಧೆ ದೇಶಾದ್ಯಂತ ವ್ಯಾಪಿಸಿರುವಾಗಲೇ, ಅದರ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಜನಸಾಮಾನ್ಯರು ಎಚ್ಚೆತ್ತುಕೊಳ್ಳುವಂತೆ ಸಲಹೆ ನೀಡಿದ್ದಾರೆ...

“ಇಂತಹ ಕ್ರಿಮಿನಲ್‌ಗಳಿಂದ ಪಾರಾಗಲು ಅವರು ದೇಶವಾಸಿಗಳಿಗೆ ಮೂರು ಸಲಹೆಗಳನ್ನು ನೀಡಿದ್ದಾರೆ...”

ಹೀಗೆ ಬಂಡವಾಳಶಾಹಿ ಮಾಧ್ಯಮಗಳು (ಅಥವಾ ಗೋಡಿ ಮಾಧ್ಯಮಗಳು) ಪ್ರಧಾನಿ ನರೇಂದ್ರ ಮೋದಿಯವರನ್ನು ಹೊಗಳಿದವು. ಆದರೆ, “ನಿಮ್ಮ ಒಂದೇ ಒಂದು ಪೈಸೆಯನ್ನೂ ಡಿಜಿಟಲ್ ವಂಚಕರು ಕಿತ್ತುಕೊಳ್ಳಲು ನಾವು ಬಿಡುವುದಿಲ್ಲ, ವಂಚಕರು ಜಗತ್ತಿನ ಯಾವ ಮೂಲೆಯಲ್ಲಿದ್ದರೂ ಅವರನ್ನು ಪತ್ತೆ ಹಚ್ಚಿ ಶಿಕ್ಷಿಸಲಾಗುತ್ತದೆ. ನೀವು ಧೈರ್ಯದಿಂದ ಡಿಜಿಟಲ್ ವ್ಯವಹಾರ ಮುಂದುವರಿಸಿ. ದೇಶದಲ್ಲಿ ಡಿಜಿಟಲ್ ಪಾವತಿ ಸುರಕ್ಷಿತವಾಗಿರುತ್ತದೆ.” ಈ ರೀತಿ ಹೇಳುವ ಮೂಲಕ ಪ್ರಧಾನಿಯವರು ಜನರಲ್ಲಿ ಧೈರ್ಯ ತುಂಬಲಿಲ್ಲವಲ್ಲ ಎಂದು ಯಾವ ಮಾಧ್ಯಮಗಳೂ ಪ್ರಧಾನಿಯವರಿಗಿರುವ ಜವಾಬ್ಧಾರಿಯ ಕಡೆ ಬೆಟ್ಟು ಮಾಡಿ ತೋರಿಸಲಿಲ್ಲ.

ಪ್ರಧಾನಿ ನರೇಂದ್ರ ಮೋದಿ ಅವರು ಅಕ್ಟೋಬರ್ 17ರಂದು ‘ಮನ್ ಕಿ ಬಾತ್’(ಮನದ ಮಾತು)ನ 115ನೇ ಸಂಚಿಕೆಯಲ್ಲಿ ರಾಷ್ಟ್ರವನ್ನುದ್ದೇಶಿಸಿ ಮಾತನಾಡುವಾಗ "ಡಿಜಿಟಲ್ ಬಂಧನ ವಂಚನೆ" (**digital arrest frauds**) ಕುರಿತು ಕಳವಳ ವ್ಯಕ್ತಪಡಿಸಿದರು.

“ಒಂದು ನಿಮಿಷ ನಿಲ್ಲಿ. ಅದರ ಬಗ್ಗೆ ಯೋಚಿಸಿ. ಆ ನಂತರವಷ್ಟೇ ಪ್ರತಿಕ್ರಿಯಿಸಿ. ಇಂದಿನ ಡಿಜಿಟಲ್ ಯುಗದಲ್ಲಿ ನಾವು ಆನ್‌ಲೈನ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಾಕಷ್ಟು ಪ್ರಗತಿಯನ್ನು ಕಾಣುತ್ತಿದ್ದೇವೆ. ಅದೇ ಸಮಯದಲ್ಲಿ, ಸೈಬರ್ ಅಪರಾಧಿಗಳ ತಂತ್ರಗಳು ಸಹ ಬದಲಾಗುತ್ತಿವೆ. ಜನರು ದಿನವೂ ಹೊಸ ವಿಧಾನದಿಂದ ವಂಚನೆಗೊಳಗಾಗುತ್ತಿದ್ದಾರೆ.” ಹೆಚ್ಚುತ್ತಿರುವ ಡಿಜಿಟಲ್ ವಂಚನೆಗಳ ಬಗ್ಗೆ, ಸೈಬರ್ ಅಪರಾಧಗಳ ಗಂಭೀರತೆ ಕುರಿತು ಸ್ವತಃ ಪ್ರಧಾನಿಯೇ ಕಳವಳ ವ್ಯಕ್ತಪಡಿಸಿದ್ದು ಹೀಗೆ. ಇದೇ ಸಂದರ್ಭದಲ್ಲಿ, ಪ್ರಧಾನಿಯಾಗಿ ಇಂತಹ ಅಪರಾಧಗಳನ್ನು ಎದುರಿಸಲು ತಮ್ಮ ಸರ್ಕಾರ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂಬುದನ್ನು ಅವರು ಹೇಳಲಿಲ್ಲ. ಹೀಗೆ ಎಚ್ಚರಿಕೆ ವಹಿಸುವಂತೆ ಜನರಿಗೆ ಪಾಠ ಮಾಡುವ ಮೂಲಕ ‘ವಂಚಕರ ಬಗ್ಗೆ ಚಿಂತಿಸುವ ಅಗತ್ಯವಿಲ್ಲ, ಎಚ್ಚರವಿದ್ದರೆ ಸಾಕು’ ಎಂದು ಪ್ರಧಾನಿ ತೀರ್ಮಾನಿಸಿದಂತಿದೆ.

ಡಿಜಿಟಲ್ ಇಂಡಿಯಾದ ಜಪದಿಂದ ಡಿಜಿಟಲ್ ಅರೆಸ್ಟ್ ಗೆ!!

ಇದುವರೆಗೂ ಡಿಜಿಟಲ್ ಇಂಡಿಯಾದ ಜಪ ಮಾಡುತ್ತಿದ್ದ ಪ್ರಧಾನಿ ನರೇಂದ್ರ ಮೋದಿಯವರು, ಈಗ ಡಿಜಿಟಲ್ ವಂಚನೆಗಳ ಬಗ್ಗೆ ಮಾತನಾಡಿರುವುದು ಕೊಂಚ ಅಚ್ಚರಿ ಮೂಡಿಸಿದೆ. ವ್ಯಾಪಕವಾದ ಈ ವಂಚನೆ, ಇಂತಹ ವಂಚನೆಯನ್ನು ಹೇಗೆಲ್ಲಾ ಮಾಡುತ್ತಾರೆ ಎಂಬುದೆಲ್ಲಾ ಪ್ರಧಾನಿಯವರ ಗಮನಕ್ಕೂ ಬಂದಿದೆಯಾದರೂ, ವರ್ಷಗಳು ಕಳೆದರೂ ಇಂತಹ ವಂಚನೆಗಳನ್ನು ತಡೆಗಟ್ಟಲು ಸಾಧ್ಯವಾಗಿಲ್ಲ ಎಂದರೆ, ಮೋದಿ ಆಡಳಿತದ ಅಡಿಯಲ್ಲಿ ಸಮಾಜ ಮತ್ತಷ್ಟು ಅಪಾಯವನ್ನು ಎದುರಿಸುತ್ತಿದೆ ಎಂಬುದನ್ನು ಮೋದಿಯವರ ಈ ‘ಮನದ ಮಾತು’ಗಳಿಂದ ಸ್ಪಷ್ಟವಾಗುತ್ತದೆ.

ಮೋದಿಯವರು ಈ ಮಾತು ಹೇಳುವಾಗಲೂ, ಇಂತಹ ವಂಚನೆಗಳಿಗೆ ಕಡಿವಾಣ ಹಾಕಲು ತಮ್ಮ ಸರ್ಕಾರದ ಯೋಜನೆಗಳನ್ನು ಪ್ರಸ್ತಾಪಿಸಲಿಲ್ಲ. ತನಿಖಾ ಸಂಸ್ಥೆಗಳು ರಾಜ್ಯಗಳ ಸಹಕಾರದೊಂದಿಗೆ ಈ ಪಿಡುಗನ್ನು ತೊಡೆದುಹಾಕಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿವೆ ಎಂದಷ್ಟೇ ಕಣ್ಣೊರೆಸುವ ಮಾತುಗಳನ್ನಾಡಿದರು.

ಐದು ವರ್ಷಗಳ ಸರಾಸರಿ 5 ಲಕ್ಷಕ್ಕೂ ಹೆಚ್ಚು ಪ್ರಕರಣ

ಕ್ಯೂಆರ್ ಸ್ಕ್ಯಾನರ್‌ಗಳು ಬಹುತೇಕ ಎಲ್ಲಾ ಮಾರಾಟ ಕೇಂದ್ರಗಳಲ್ಲಿ ಮತ್ತು ಹಳ್ಳಿಗಳಲ್ಲಿಯೂ ಇಂದು ಕಂಡುಬರುತ್ತವೆ. ಭಾರತ, ಮಲೇಷ್ಯಾ, ಫಿಲಿಪೈನ್ಸ್, ಸಿಂಗಾಪುರ್ ಮತ್ತು ಥೈಲ್ಯಾಂಡ್‌ನ ವೇಗದ ಪಾವತಿ ವ್ಯವಸ್ಥೆಯನ್ನು ಜೋಡಿಸುವ ಪ್ರಸ್ತಾಪವನ್ನು ಆರ್‌ಬಿಐ ಇತ್ತೀಚೆಗೆ ಪ್ರಕಟಿಸಿದೆ. ಇದೆಲ್ಲವೂ ನಾಣ್ಯದ ಒಂದು ಮುಖವಷ್ಟೆ. ಎರಡನೇ ಭಾಗವು ಆತಂಕಕಾರಿ ಸನ್ನಿವೇಶಗಳಿಗೆ ಸಾಕ್ಷಿಯಾಗಿದೆ. ಕೇಂದ್ರ ಗೃಹ ಸಚಿವಾಲಯ ಮತ್ತು ಆರ್‌ಬಿಐ ಲೆಕ್ಕಾಚಾರದ ಪ್ರಕಾರ, ಕಳೆದ ಐದು ವರ್ಷಗಳಲ್ಲಿ ವರದಿಯಾದ ವಂಚನೆ ಪ್ರಕರಣಗಳ ಸಂಖ್ಯೆ ಸರಾಸರಿ 5 ಲಕ್ಷಕ್ಕೂ ಹೆಚ್ಚು. ಇನ್ನು ದೂರು ಕೊಡದ, ಬೆಳಕಿಗೆ ಬಾರದ ಪ್ರಕರಣಗಳೆಷ್ಟೋ?

ರಾಷ್ಟ್ರೀಯ ಸೈಬರ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್ (ಎನ್‌ಸಿಆರ್‌ಪಿ) ಡೇಟಾ ಪ್ರಕಾರ, ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿರುವಂತೆ 2023ರಲ್ಲಿ 15.56 ಲಕ್ಷ ದೂರುಗಳನ್ನು ಸ್ವೀಕರಿಸಲಾಗಿದೆ. 2021ರಲ್ಲಿ 4.52 ಲಕ್ಷ ಇದ್ದ ದೂರುಗಳ ಸಂಖ್ಯೆ 2022ರಲ್ಲಿ 9.66 ಲಕ್ಷಕ್ಕೆ ಏರಿಕೆಯಾಗಿದೆ.

ಭಾರತೀಯರು ‘ಡಿಜಿಟಲ್ ಬಂಧನ’ ಪ್ರಕರಣದಲ್ಲಿ ರೂ. 120.30 ಕೋಟಿ, ವ್ಯಾಪಾರ ಹಗರಣದಲ್ಲಿ ರೂ. 1,420.48 ಕೋಟಿ, ಹೂಡಿಕೆ ಹಗರಣದಲ್ಲಿ ರೂ. 222.58 ಕೋಟಿ ಮತ್ತು ಪ್ರಣಯ/ಡೇಟಿಂಗ್ ಹಗರಣ (romance/ dating scam)ದಲ್ಲಿ ರೂ. 13.23 ಕೋಟಿ ಕಳೆದುಕೊಂಡಿದ್ದಾರೆ ಎಂದು ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರದ (Indian Cybercrime Coordination Center -I4C) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ. ಇಂಡಿಯನ್ ಎಕ್ಸ್‌ಪ್ರೆಸ್ ವರದಿಯ ಪ್ರಕಾರ, ಮೇ ತಿಂಗಳಲ್ಲಿ ಜನವರಿ–ಏಪ್ರಿಲ್ ಡೇಟಾವನ್ನು ಬಿಡುಗಡೆ ಮಾಡುವಾಗ ರಾಜೇಶ್ ಕುಮಾರ್ ಈ ಮಾಹಿತಿ ನೀಡಿದ್ದಾರೆ.

ನಾಲ್ಕು ತಿಂಗಳಲ್ಲಿ ದಾಖಲಾದ ಪ್ರಕರಣಗಳು 7.4 ಲಕ್ಷ

ದೇಶದಲ್ಲಿ ದಿನಕ್ಕೆ ಸರಾಸರಿ 6,000 ಕ್ಕೂ ಹೆಚ್ಚು ಸೈಬರ್ ಅಪರಾಧಗಳ ದೂರುಗಳನ್ನು ಸ್ವೀಕರಿಸುವ I4C ಈ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ 7.4 ಲಕ್ಷ ಪ್ರಕರಣಗಳು ದಾಖಲಾಗಿವೆ ಎಂದು ಖಚಿತಪಡಿಸುತ್ತದೆ. ದೇಶದಲ್ಲಿ ನಡೆಯುತ್ತಿರುವ ಡಿಜಿಟಲ್ ಬಂಧನಗಳು, ಪ್ರಣಯ/ಡೇಟಿಂಗ್, ವ್ಯಾಪಾರ ಮತ್ತು ಹೂಡಿಕೆ ವಂಚನೆಗಳಲ್ಲಿ ಸುಮಾರು 46 ಪ್ರತಿಶತದಷ್ಟು ಆಗ್ನೇಯ ಏಷ್ಯಾದ ರಾಷ್ಟ್ರಗಳಾದ ಮ್ಯಾನ್ಮಾರ್, ಲಾವೋಸ್ ಮತ್ತು ಕಾಂಬೋಡಿಯಾ ಈ ಮೂರು ದೇಶಗಳ ವಂಚಕರಿಂದ ನಡೆಯುತ್ತಿವೆ ಎಂದು ಕಂಡುಬಂದಿದೆ. ಇದರಲ್ಲಿ ಬಲಿಪಶುಗಳು ಒಟ್ಟು 1,776 ಕೋಟಿ ರೂ.ಗಳನ್ನು ಕಳೆದುಕೊಂಡಿದ್ದಾರೆ.

ಷೇರು ವಹಿವಾಟಿನಲ್ಲಿ 23 ರಾಜ್ಯಗಳ 168 ಮಂದಿಗೆ 22 ಕೋಟಿ ರೂ.ಗಳಿಗೂ ಹೆಚ್ಚು ಹಣ ಸಂದಾಯ ಮಾಡಿರುವ ಗಾಜಿಯಾಬಾದ್ ಗ್ಯಾಂಗ್‌ನ ಕೈವಾಡ ಇತ್ತೀಚೆಗೆ ಬಯಲಾಗಿದೆ. ಜಾರ್ಖಂಡ್, ರಾಜಸ್ಥಾನ, ಹರಿಯಾಣ ಮತ್ತು ಉತ್ತರ ಪ್ರದೇಶದಲ್ಲಿ ಸೈಬರ್ ಗ್ಯಾಂಗ್‌ಗಳಿಂದ ಶೇಕಡಾ 80ರಷ್ಟು ಇಂತಹ ಅಪರಾಧಗಳು ನಡೆಯುತ್ತಿವೆ ಎಂದು ಐಐಟಿ ಕಾನ್ಪುರ ಅಧ್ಯಯನವು ಇತ್ತೀಚೆಗೆ ತೀರ್ಮಾನಿಸಿದೆ. ರಾಷ್ಟ್ರೀಯ ಸೈಬರ್ ಭದ್ರತಾ ಸಂಯೋಜಕ, ನಿವೃತ್ತ ಲೆಫ್ಟಿನೆಂಟ್ ಜನರಲ್ ಡಾ.ರಾಜೇಶ್ ಪಂತ್ ಅವರು ಪ್ರತಿ ದಿನ ಸಾವಿರಾರು ದೂರುಗಳನ್ನು ಸ್ವೀಕರಿಸುತ್ತಾರೆ. ಆದರೆ ತನಿಖೆಯ ಪ್ರಮಾಣವು ಕಡಿಮೆಯಾಗಿದೆ. ಇದು ಸೈಬರ್ ಅಪರಾಧಿಗಳ ವಿರುದ್ಧದ ಹೋರಾಟದಲ್ಲಿನ ವ್ಯವಸ್ಥಿತ ವೈಫಲ್ಯವನ್ನು ಎತ್ತಿ ತೋರಿಸುತ್ತದೆ.

ಮುಂದಿನ ವರ್ಷದ ವೇಳೆಗೆ ದೇಶದಲ್ಲಿ ಇಂಟರ್ನೆಟ್ ಬಳಕೆದಾರರ ಸಂಖ್ಯೆ 90 ಕೋಟಿ ತಲುಪಲಿದ್ದು, ಮೊಬೈಲ್ ಸಂಪರ್ಕಗಳ ಸಂಖ್ಯೆ ಈಗಾಗಲೇ 116 ಕೋಟಿ ದಾಟಿದೆ. ಬಳಕೆಯ ಸ್ಫೋಟ ತಡೆಯಲು ಸರ್ಕಾರ ಕನಿಷ್ಠ ಮುಂಜಾಗ್ರತಾ ಕ್ರಮಗಳನ್ನೂ ತೆಗೆದುಕೊಳ್ಳದೇ ಇರುವುದರಿಂದ ಗಂಭೀರ ಪರಿಣಾಮಗಳು ಉಂಟಾಗುತ್ತಿವೆ. ಈ ಪೈಕಿ ನೆರೆಯ ಮ್ಯಾನ್ಮಾರ್, ಲಾವೋಸ್ ಮತ್ತು ಕಾಂಬೋಡಿಯಾದಲ್ಲಿ ಈ ಗ್ಯಾಂಗ್‌ಗಳು ಬೆಳೆಯುತ್ತಿವೆ ಎಂದು ಕೇಂದ್ರ ಗೃಹ ಸಚಿವಾಲಯ ಬಹಿರಂಗಪಡಿಸಿದೆ. ಡಿಜಿಟಲ್ ಭದ್ರತಾ ಮೋಸಗಳನ್ನು ತಪ್ಪಿಸಲು ಕನಿಷ್ಠ ಮುನ್ನೆಚ್ಚರಿಕೆಗಳನ್ನು ಹೇಗೆ ತೆಗೆದುಕೊಳ್ಳಬೇಕು ಮತ್ತು ಆನ್‌ಲೈನ್ ವಂಚನೆಯ ಸಂದರ್ಭದಲ್ಲಿ ತಕ್ಷಣ ಯಾರನ್ನು ಸಂಪರ್ಕಿಸಬೇಕು ಎಂಬುದನ್ನು ಎಲ್ಲಾ ನಾಗರಿಕರಿಗೆ ತಿಳಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ.

ಸೈಬರ್ ಅಪರಾಧಿಗಳಿಗೆ ಕಡಿವಾಣ ಹಾಕಲು ಮುಂದಾಗಬೇಕಿದೆ

ಇಂತಹ ವಂಚನೆ ಕೃತ್ಯಗಳು ಮುಂದುವರೆದಿದ್ದು ಲಕ್ಷಾಂತರ ಜನರು ಹಣ ಹಾಗೂ ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡಿದ್ದಾರೆ. ಅಪರಾಧಿಗಳು ಎಲ್ಲಿದ್ದರೂ ಜಂಟಿ ಕ್ರಮ ಮತ್ತು ತಾಂತ್ರಿಕ ಕಣ್ಗಾವಲುಗಳೊಂದಿಗೆ ಆನ್‌ಲೈನ್ ಅಪರಾಧಿಗಳನ್ನು ಹೇಗೆ ಬಲೆಗೆ ಬೀಳಿಸುವುದು ಎಂಬುದರ ಕುರಿತು ಸರ್ಕಾರಗಳು ಗಮನಹರಿಸಬೇಕಿದೆ. ಇತ್ತೀಚೆಗೆ 61 ದೇಶಗಳ ಪೊಲೀಸ್ ಪಡೆಗಳು ‘ಆಪರೇಷನ್ ಫಸ್ಟ್ ಲೈಟ್ 2024’ ಹೆಸರಿನಲ್ಲಿ ಏಕಪಕ್ಷೀಯ ದಾಳಿಯಲ್ಲಿ 4,000 ವಂಚಕರು ಸಿಕ್ಕಿಬಿದ್ದರು. ಆಸ್ಟ್ರೇಲಿಯಾ ಮತ್ತು ಜಿಂಬಾಬ್ವೆಯಂತಹ ದೇಶಗಳು ಸೈಬರ್ ಭದ್ರತೆಗಾಗಿ ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಿವೆ. ಆಯಾ ದೇಶಗಳ ಅನುಭವಗಳಿಂದ ಸೈಬರ್ ಬೆದರಿಕೆಗಳನ್ನು ಎದುರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಕಾರ್ಯತಂತ್ರಗಳನ್ನು ಚುರುಕುಗೊಳಿಸಬೇಕಿದೆ. ಸೈಬರ್ ಅಪರಾಧಿಗಳಿಗೆ ಕಡಿವಾಣ ಹಾಕಲು ಸರ್ಕಾರಗಳು ಒಗ್ಗೂಡಿದರೆ ಮಾತ್ರ ದೇಶದಲ್ಲಿ ಡಿಜಿಟಲ್ ಪಾವತಿ ಸುರಕ್ಷಿತವಾಗಿರುತ್ತದೆ. ಆದರೆ, ‘ನಿಲ್ಲಿ... ಯೋಚಿಸಿ... ನಂತರ ನಿರ್ಧರಿಸಿ...’ ಎಂಬ ಪ್ರಧಾನಿಯವರ ಮಂತ್ರಗಳಿಂದ ಸೈಬರ್ ವಂಚನೆಗಳಿಂದ ಮುಕ್ತರಾಗಲು ಸಾಧ್ಯವಾಗುವುದಿಲ್ಲ.

–ಸಿಚಿ

ದೇಶದಲ್ಲಿ ಡಿಜಿಟಲ್ ವಂಚನೆಗಳು ಹೆಗ್ಗಿಲ್ಲದೆ ನಡೆಯುತ್ತಿವೆ. ಲಕ್ಷಾಂತರ ಜನರು ತಮ್ಮ ಹಣ ಹಾಗೂ ನೆಮ್ಮದಿ ಕಳೆದುಕೊಳ್ಳುತ್ತಿದ್ದಾರೆ. ಇಂತಹ ವಂಚನೆ ದಿನೇ ದಿನೇ ಹೆಚ್ಚುತ್ತಲೇ ಇವೆ. ಸೈಬರ್ ಅಪರಾಧಿಗಳು ಈ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಭಾರತದಲ್ಲಿ ರೂ.1770 ಕೋಟಿವರೆಗೆ ವಂಚಿಸಿದ್ದಾರೆ. ದಿನವೊಂದರಲ್ಲಿ ಸರಾಸರಿ 6,000 ಕ್ಕೂ ಹೆಚ್ಚು ಸೈಬರ್ ಅಪರಾಧಗಳ ದೂರುಗಳನ್ನು I4C ಸ್ವೀಕರಿಸುತ್ತಿದೆ. ಇಂತಹ ವಂಚಕರ ವಿರುದ್ಧ ಕಠಿಣ ಕ್ರಮ ತೆಗೆದುಕೊಂಡು, ಡಿಜಿಟಲ್ ವಂಚನೆಯಿಂದ ಪ್ರಜೆಗಳನ್ನು ರಕ್ಷಿಸುವ ಜವಾಬ್ಧಾರಿ ಹೊತ್ತಿರುವ ಪ್ರಧಾನಿ ನರೇಂದ್ರ ಮೋದಿಯವರು ‘‘ಕಾಯಿರಿ, ಯೋಚಿಸಿ, ನಂತರ ಪ್ರತಿಕ್ರಿಯಿಸಿ’ ಎಂಬ ಮೂರು ಮಂತ್ರವನ್ನು ಪಾಲಿಸುವಂತೆ ಸೂಚನೆ ನೀಡಿದ್ದಾರೆ!! ಜನರು ಎಚ್ಚರಿಕೆಯಿಂದ ಇರುತ್ತಿಲ್ಲವಾದ ಕಾರಣಕ್ಕೆ ತಮ್ಮ ಹಣ ಕಳೆದುಕೊಳ್ಳುತ್ತಿದ್ದಾರೆ ಎಂದು ಮೋದಿಯವರು ಪರೋಕ್ಷವಾಗಿ ಹೇಳುತ್ತಿದ್ದಾರೆಯೇ?



ಪಿಎಲ್ಐ, ಡಿಎಲ್ಐ, ಇಎಲ್ಐ ಹೆಸರಿನಲ್ಲಿ ಬಂಡವಳಿಗರಿಗೆ 7ಲಕ್ಷ ಕೋಟಿ ರೂ.ಗಳ 'ಸಬ್ಸಿಡಿ'!

ಹತ್ತು ವರ್ಷಗಳ ಹಿಂದೆ, ಸೆಪ್ಟಂಬರ್ 25, 2014 ರಂದು, ಅಂದರೆ ಈಗ ಮರೆತೇ ಹೋಗಿರುವ 'ಅಚ್ಛೇ ದಿನ್'ಗಳ ಆರಂಭದ ದಿನಗಳಲ್ಲಿ 'ಮೇಕ್ ಇನ್ ಇಂಡಿಯ' ಯೋಜನೆಯನ್ನು ಆರಂಭಿಸಲಾಯಿತು. ನಿಜ, ಇದರ ಬಗ್ಗೆ ಆಗಷ್ಟೇ ಅಧಿಕಾರಕ್ಕೆ ಬಂದ ಹೊಸ ಸರಕಾರ ಬಹಳಷ್ಟು ಬೆನ್ನು ತಟ್ಟಿಕೊಂಡರೂ, ಈ ಅವಧಿಯ ಬಹಳಷ್ಟು ಯೋಜನೆಗಳಂತೆ ಇದೇನೂ ನವೀನ ಯೋಜನೆಯಾಗಿರಲಿಲ್ಲ, ಹೊಸ ಹೆಸರು ಪಡೆದ ಹಳೆಯ ಯೋಜನೆಯಾಗಿತ್ತು ಎಂಬುದು ಬೇರೆ ಮಾತು. ಏಕೆಂದರೆ, ಹಿಂದಿನ (ಯುಪಿಎ-2) ಸರಕಾರದ ಅಧಿಕಾರಾವಧಿಯ ಕೊನೆಯಲ್ಲಿ 'ನ್ಯೂ ಮ್ಯಾನುಫ್ಯಾಕ್ಚರಿಂಗ್ ಪಾಲಿಸಿ' ಎಂಬುದನ್ನು ರೂಪಿಸಲಾಗಿತ್ತು. ಇದನ್ನು ರೂಪಿಸಬೇಕಾಗಿ ಬಂದದ್ದು, ಜಿಡಿಪಿ ಆ ದಶಕದಲ್ಲಿ ಶೇ. 7-8ರ ದರದಲ್ಲಿ ಹೆಚ್ಚುತ್ತಿದ್ದರೂ, ತಯಾರಿಕಾ ವಲಯದ ಪಾಲು ಮಾತ್ರ ಸ್ಥಗಿತಗೊಂಡಿತ್ತು. ಪರಿಣಾಮವಾಗಿ ಆಮದು ಪ್ರಮಾಣ ಹೆಚ್ಚಿತ್ತು, ಉದ್ಯೋಗ ನಿರ್ಮಾಣ ಹೆಚ್ಚುತ್ತಿರಲಿಲ್ಲ.

ಇಂತಹ ಹಿನ್ನೆಲೆಯಲ್ಲಿ 'ಮೇಕ್ ಇನ್ ಇಂಡಿಯ'ವನ್ನು ಆರಂಭಿಸಿದ್ದು 1) ತಯಾರಿಕಾ ವಲಯದ ಪಾಲನ್ನು ಆಗಿದ್ದ ಜಿಡಿಪಿಯ ಶೇ. 14-15ರಿಂದ ಶೇ.25ಕ್ಕೆ ಏರಿಸುವುದಕ್ಕಾಗಿ ಮತ್ತು 2) 10 ಕೋಟಿ ಹೆಚ್ಚುವರಿ ಕೈಗಾರಿಕಾ ಉದ್ಯೋಗಗಳನ್ನು ನಿರ್ಮಿಸುವುದಕ್ಕಾಗಿ.

10 ವರ್ಷಗಳ ನಂತರ ಈ 'ಮೇಕ್ ಇನ್ ಇಂಡಿಯ' ಸಾಧಿಸಿದ್ದೇನು? ಜಿಡಿಪಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ ಬದಲಾವಣೆ ಮಾಡಿದರೂ ತಯಾರಿಕಾ ವಲಯದ ಪಾಲು ಕಳೆದ ಮೂರು ದಶಕಗಳಲ್ಲಿ ಶೇ. 15-17ರ ಸುತ್ತಲೇ ಗಿರಕಿ ಹೊಡೆಯುತ್ತಿದ್ದರೆ, ಎರಡನೇ ಉದ್ದೇಶವಾದ ಉದ್ಯೋಗ ನಿರ್ಮಾಣದಲ್ಲಿ ಈ ವಲಯದ ಪಾಲು 2011-12ರಲ್ಲಿ ಶೇ. 12.6 ಇದ್ದದ್ದು, 2022-23ರಲ್ಲಿ ಶೇ. 11.4ಕ್ಕೆ ಇಳಿಯಿತು! ಇದರಲ್ಲಿ ಸಿಂಹಪಾಲು ಹೊಂದಿರುವ ಅಸಂಘಟಿತ ಅಥವ 'ಅನೌಪಚಾರಿಕ' ತಯಾರಿಕಾ ವಲಯದಲ್ಲಿ ಉದ್ಯೋಗಗಳ ಸಂಖ್ಯೆ 2015-16ರಲ್ಲಿ 3.88 ಕೋಟಿ ಇದ್ದದ್ದು, 2022-23ರಲ್ಲಿ 3.06 ಕೋಟಿಗೆ ಇಳಿಯಿತು, ಅಂದರೆ 82ಲಕ್ಷ ಉದ್ಯೋಗಗಳ ಕಡಿತವಾಯಿತು! ಇನ್ನೊಂದೆಡೆಯಲ್ಲಿ, ಕೃಷಿ ವಲಯದಲ್ಲಿ ಉದ್ಯೋಗದ ಪ್ರಮಾಣ 2018-19ರಲ್ಲಿ ಶೇ. 42.5 ಇದ್ದದ್ದು, 2022-23ರಲ್ಲಿ ಶೇ. 45.8ಕ್ಕೆ ಏರಿತು.

ಅಂದರೆ ಒಂದು ರೀತಿಯ 'ಅಪ-ಕೈಗಾರಿಕೀಕರಣ' (ಡಿಇಂಡಸ್ಟ್ರಿಯಲೈಸೇಷನ್)ನಡೆಯುತ್ತಿದೆಯೇ ಎಂದು ಕೆಲವು ಪರಿಣಿತರು ಪ್ರಶ್ನಿಸುವಂತಾಗಿದೆ. (ಆರ್. ನಾಗರಾಜ್, ಇಂಡಿಯನ್ ಎಕ್ಸ್‌ಪ್ರೆಸ್, ಸೆಪ್ಟಂಬರ್ 30)

ಗಮನಿಸಬೇಕಾದ ಸಂಗತಿಯೆಂದರೆ, ಈ ಅವಧಿಯಲ್ಲಿ ನವ-ಉದಾರವಾದೀ ಕಾಲದ ಅಚ್ಚುಮೆಚ್ಚಿನ 'ಸುಗಮ ವ್ಯಾಪಾರ'(ಈಸ್ ಆಫ್ ಡೂಯಿಂಗ್ ಬಿಸಿನೆಸ್-ಇಡಿಬಿ) ಎಂಬದರ ವಿಶ್ವ ಬ್ಯಾಂಕ್ ಸೂಚ್ಯಂಕದಲ್ಲಿ ಭಾರತದ ಶ್ರೇಯಾಂಕ 2014-15ರಲ್ಲಿ 142 ಇದ್ದದ್ದು 2019-20ಕ್ಕೆ 63ಕ್ಕೆ ಏರಿತು. ಏಕೆಂದರೆ **ಪ್ರಧಾನಿ ಮೋದಿಯವರ ಪ್ರಕಾರ ಸಂಪತ್ತನ್ನು ಸೃಷ್ಟಿಸುವವರು ಉದ್ದಿಮೆದಾರರು/ಬಂಡವಳಿಗರು, ಅವರಿಗೆ ಹೆಚ್ಚೆಚ್ಚು ಉತ್ತೇಜನೆ ನೀಡಿದರೆ ಮಾತ್ರ ಉದ್ಯೋಗ ನಿರ್ಮಾಣ ಸಾಧ್ಯ ಎಂಬುದು ಅವರ ನಂಬಿಕೆ. ಆ ಪ್ರಕಾರ ಅವರಿಗೆ ಹತ್ತು-ಹಲವು ಉತ್ತೇಜನೆಗಳನ್ನು ನೀಡಲಾಯಿತು.**

2019-20ರ ಬಜೆಟಿನಲ್ಲಿ 14 ತಯಾರಿಕಾ ಕ್ಷೇತ್ರಗಳಿಗೆ 1.97 ಲಕ್ಷ ಕೋಟಿ ರೂ. ಮೊತ್ತದ ಉತ್ಪಾದನೆಗೆ-ಜೋಡಿಸಿದ ಉತ್ತೇಜನಾ (ಪ್ರೊಡಕ್ಷನ್ ಲಿಂಕ್ಡ್ ಇನ್ಸೆಂಟಿವ್-ಪಿಎಲ್ಐ) ಸ್ಕೀಮ್ ಪ್ರಕಟಿಸಲಾಯಿತು.


ಅದೇ ರೀತಿಯಲ್ಲಿ 2021ರಲ್ಲಿ ಸೆಮಿಕಂಡಕ್ಟರ್ ಉದ್ದಿಮೆಗೆ ಡಿಸೈನ್ ಲಿಂಕ್ಡ್ ಇನ್ಸೆಂಟಿವ್ ಸ್ಕೀಮ್ ಮತ್ತು ಬಂಡವಾಳ ಹೂಡಿಕೆ ವೆಚ್ಚ ಉತ್ತೇಜನೆ (ಕೆಪೆಕ್ಸ್ ಇನ್ಸೆಂಟಿವ್) ಪ್ರಕಟಿಸಲಾಯಿತು. ಇದಕ್ಕೆ 76 ಸಾವಿರ ಕೋಟಿ ರೂ. ಎತ್ತಿಡಲಾಯಿತು. 2021ರಲ್ಲಿ ವೆಚ್ಚದ ಶೇ. 40ರಷ್ಟಿದ್ದ ಉತ್ತೇಜನೆಯನ್ನು 2022ರಲ್ಲಿ ಶೇ. 50ಕ್ಕೆ ಏರಿಸಲಾಯಿತು.

ಬಂಡವಳಿಗರಿಗೆ ಇಷ್ಟೆಲ್ಲ 'ಉತ್ತೇಜನೆ'ಗಳನ್ನು ನೀಡಿದರೂ, ಸರಕಾರದ ಅಂಕಿ-ಅಂಶಗಳ(ಆರ್ಥಿಕ ಸರ್ವೆ 2023-24) ಪ್ರಕಾರವೂ ಉದ್ಯೋಗ ನಿರ್ಮಾಣದಲ್ಲಿ ಗಮನಾರ್ಹ ಹೆಚ್ಚಳವೇನೂ ಆಗಿಲ್ಲ. ನಿಯತಕಾಲಿಕ ಶ್ರಮ ಶಕ್ತಿ ಸರ್ವೆ(ಪಿಎಲ್ಎಫ್ಎಸ್) ಪ್ರಕಾರ ತಯಾರಿಕಾ ವಲಯದಲ್ಲಿ ಕಾರ್ಮಿಕರ ಪ್ರಮಾಣ 2018-19ರಲ್ಲಿ ಶೇ. 12.1 ಇದ್ದದ್ದು 2023-24ರಲ್ಲಿ ಶೇ. 11.4ಕ್ಕೆ ಇಳಿಯಿತು. ಜಿಡಿಪಿಯಲ್ಲಿ ತಯಾರಿಕಾ ವಲಯದ ಪಾಲು 2010ರಲ್ಲಿ ಶೇ. 17 ಇದ್ದದ್ದು, 2014ರಲ್ಲಿ ಶೇ. 15ಕ್ಕೆ ಮತ್ತು 2023ರಲ್ಲಿ ಶೇ. 13ಕ್ಕೆ ಇಳಿಯಿತು.

ಸುಮಾರು 3 ಲಕ್ಷ ಕೋಟಿ ರೂ.ಗಳ 'ಉತ್ತೇಜನೆ'ಯ ಹೊರತಾಗಿಯೂ, 2014-23ರ ಅವಧಿಯಲ್ಲಿ ಖಾಸಗಿ ವಲಯ ಪ್ರಕಟಿಸಿದ ಹೂಡಿಕೆಗಳಲ್ಲಿ ಕೇವಲ ಶೇ. 26.33 ಮಾತ್ರ ಸಾಕಾರಗೊಂಡಿತು ಎಂದು ಸಿಎಂಐಇ ಸರ್ವೆ ಹೇಳುತ್ತದೆ. ವಿದೇಶಿ ನೇರ ಹೂಡಿಕೆಯ ಪ್ರಮಾಣವೂ 2020ರಲ್ಲಿ ಶೇ. 6.5 ಇದ್ದದ್ದು, 2023ರಲ್ಲಿ ಶೇ. 2.1ಕ್ಕೆ ಇಳಿಯಿತು.

ಆದರೂ, 2024-25ರ ಬಜೆಟಿನಲ್ಲಿ ಮತ್ತೆ ಇದೇ ಬಂಡವಳಿಗರಿಗೆ 2ಲಕ್ಷ ಕೋಟಿ ರೂ.ಗಳ 'ಉದ್ಯೋಗಕ್ಕೆ ಜೋಡಿಸಿದ ಉತ್ತೇಜನೆ(ಎಂಪ್ಲಾಯ್‌ಮೆಂಟ್ ಲಿಂಕ್ಡ್ ಇನ್ಸೆಂಟಿವ್-ಇಎಲ್ಐ) ಸ್ಕೀಮ್' ಅನ್ನು ಪ್ರಕಟಿಸಲಾಗಿದೆ. ಇದರಲ್ಲಿ ಮೂರು ಭಾಗಗಳಿದ್ದು, 3.1 ಕೋಟಿ ಉದ್ಯೋಗಾವಕಾಶ ನಿರ್ಮಾಣಕ್ಕೆಂದು 1.07 ಲಕ್ಷ ಕೋಟಿ ರೂ.ಗಳನ್ನು, 1 ಕೋಟಿ ಯುವಜನರ ಕೌಶಲ ವೃದ್ಧಿಗಾಗಿ ಇಂಟರ್ನ್‌ಷಿಪ್ ಕಾರ್ಯಕ್ರಮಕ್ಕೆಂದು 63,000 ಕೋಟಿ ರೂ.ಗಳನ್ನು ಮತ್ತು ಐಟಿಐಗಳನ್ನು ಮೇಲ್ದರ್ಜೆಗೇರಿಸಲೆಂದು 30,000 ಕೋಟಿ ರೂ.ಗಳನ್ನು ಕೊಡುವುದಾಗಿ ಹೇಳಲಾಗಿದೆ.

ಇಂಟರ್ನ್‌ಷಿಪ್ ಕಾರ್ಯಕ್ರಮದ ಅಡಿಯಲ್ಲಿ 500 ಕಂಪನಿಗಳಿಗೆ 21ರಿಂದ 24 ವರ್ಷದ ವರೆಗಿನ ಯುವಜನರಿಗೆ ಕೌಶಲ ತರಬೇತಿಗಾಗಿ 5 ವರ್ಷಗಳವರೆಗೆ ತಲಾ 5,000 ರೂ. ಮಾಸಿಕ ಸ್ಟೈಪೆಂಡನ್ನು ಸರಕಾರ ಭರಿಸುತ್ತದೆ. ಅಂದರೆ ಈ 500 ಕಂಪನಿಗಳು ಸರಕಾರದ ಖರ್ಚಿನಲ್ಲಿ ಅವರ 'ಕೌಶಲ್ಯ'ವೃದ್ಧಿ ಮಾಡುತ್ತ ಪುಕ್ಕಟೆಯಾಗಿ ತಮ್ಮ ಕೆಲಸ ಮಾಡಿಸಿಕೊಳ್ಳುತ್ತವೆ. ಈ ಪಿಎಲ್ಐ ಅಲ್ಲದೆ ಸೆಮಿಕಂಡಕ್ಟರ್ ಮತ್ತು ಚಿಪ್ ತಯಾರಿಕಾ 1.26 ಲಕ್ಷ ಕೋಟಿ ರೂ.ಗಳ ಕೆಪೆಕ್ಸ್ ಇನ್ಸೆಂಟಿವ್‌ನ ಎರಡನೇ ಆವೃತ್ತಿಗಾಗಿ ಮತ್ತು ಇಲೆಕ್ಟ್ರಾನಿಕ್ಸ್ ಉದ್ದಿಮೆಗೆ 35ರಿಂದ 45 ಸಾವಿರ ಕೋಟಿ ರೂ.ಗಳ ಮತ್ತೊಂದು ಪಿಎಲ್ಐ ಸ್ಕೀಮಿನ ಬಗ್ಗೆ ಚರ್ಚೆ ನಡೆಯುತ್ತಿದೆಯಂತೆ.



"ಮುಂದಿನ ಐದು ವರ್ಷ ಬದುಕುಳಿಯಲು 'ಕೌಶಲ್ಯ'ವನ್ನು ಬೆಳೆಸಿಕೊಳ್ಳಿ!"
ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಅಂದರೆ ಉದ್ಯೋಗಾವಕಾಶ ನಿರ್ಮಾಣಕ್ಕೆಂದು ಒಟ್ಟು ಸುಮಾರು 7ಲಕ್ಷ ಕೋಟಿ ರೂ.ಗಳ 'ಉತ್ತೇಜನೆ'ಯನ್ನು ಬಂಡವಳಿಗರಿಗೆ ನೀಡಲಾಗುತ್ತಿದೆ. ಆದರೂ ಕಳೆದ 10 ವರ್ಷಗಳ ಅನುಭವವೆಂದರೆ, ಉದ್ಯೋಗ ಪರಿಸ್ಥಿತಿ ಶೋಚನೀಯವಾಗಿದೆ, ರಫ್ತುಗಳು ಇಳಿಯುತ್ತಿವೆ, ಆಮದುಗಳು ಹೆಚ್ಚುತ್ತಿವೆ, ಖಾಸಗಿ ಹೂಡಿಕೆಗಳು/ಯೋಜನೆಗಳು ಪೂರ್ಣಗೊಳ್ಳುತ್ತಿಲ್ಲ. ಎಫ್‌ಡಿಐ ಹರಿವಿನ ಪಾಲು ಇಳಿಯುತ್ತಿದೆ ಮತ್ತು ಜಿಡಿಪಿಯಲ್ಲಿ ತಯಾರಿಕಾ ವಲಯದ ಪಾಲು ಇಳಿಯುತ್ತಿದೆ.

'ಮೇಕ್ ಇನ್ ಇಂಡಿಯ'ದ ಶತಮಾನದ ಆಚರಣೆಯಲ್ಲಿ ಭಾಗವಹಿಸಿದ ಕಾರ್ಪೊರೇಟ್ ಫಲಾನುಭವಿಗಳಲ್ಲಿ ಹಲವರು ತಯಾರಿಕಾ ವಲಯದಲ್ಲಿ ಉಂಟಾಗಿರುವ ಅಡಚಣೆಗಳನ್ನು ನಿವಾರಿಸಲು ಚೀನೀ ತಂತ್ರಜ್ಞರಿಗೆ ಅವಕಾಶ ನೀಡಬೇಕು ಎಂದು ಸರಕಾರವನ್ನು ಆಗ್ರಹಿಸಿದರು ಎಂದೂ ಮಾಧ್ಯಮಗಳಲ್ಲಿ ವರದಿಯಾಗಿದೆ!

ಅಂದರೆ ಈ ಪಿಎಲ್ಐ, ಡಿಎಲ್ಐ, ಕೆಪೆಕ್ಸ್ ಇತ್ಯಾದಿಗಳು ನಿರೀಕ್ಷಿತ ಫಲಿತಾಂಶ ನೀಡಿಲ್ಲ. ಇಎಲ್ಐ, ಪಿಎಲ್ಐ ಮತ್ತು ಕೆಪೆಕ್ಸ್‌ನ ಇನ್ನೊಂದು ಆವೃತ್ತಿಯ ಫಲಿತಾಂಶ ಇದಕ್ಕಿಂತ ಉತ್ತಮವಾಗಿರುತ್ತದೆ ಎಂಬ ನಿರೀಕ್ಷೆಯನ್ನೂ ಇಟ್ಟುಕೊಳ್ಳುವಂತಿಲ್ಲ. ಈ ಹೊಸ 'ಉತ್ತೇಜನೆ'ಗಳ ಹೆಸರಿನಲ್ಲಿ 500 ಕಂಪನಿಗಳು 5 ವರ್ಷಗಳ ಕಾಲ ಪುಕ್ಕಟೆ ಶ್ರಮವನ್ನು ಪಡೆಯುತ್ತವೆ, ಇನ್ನೂ ಹಲವು ಕಂಪನಿಗಳು ತಮ್ಮ ಭವಿಷ್ಯ ನಿಧಿ ಮತ್ತು ಇತರ ಕಾನೂನು ಬಾಧ್ಯತೆಗಳಿಗೆ ಸರಕಾರದ ಬೊಕ್ಕಸದಿಂದಲೇ ಹಣ ಪಡೆಯುತ್ತವೆಯಷ್ಟೇ.

ಒಟ್ಟಿನಲ್ಲಿ ಬಂಡವಳಿಗರಿಗೆ ಉತ್ತೇಜನೆಗಳ ಹೆಸರಿನಲ್ಲಿ ಒಂದೆಡೆಯಲ್ಲಿ ಕುಶಲ ಕೆಲಸಗಾರರ ಮೀಸಲು ಪಡೆ ಬೃಹತ್ ಪ್ರಮಾಣದಲ್ಲಿ ಸೃಷ್ಟಿಯಾದರೆ, ಇತ್ತ ಕಾರ್ಪೊರೇಟ್‌ಗಳು ಸರಕಾರದಿಂದ ಅಪಾರ ಪ್ರಮಾಣದಲ್ಲಿ ಸಬ್ಸಿಡಿ ಪಡೆಯುತ್ತವೆ.

(ಕೆ.ಎನ್. ಉಮೇಶ್, ಪೀಪಲ್ಸ್ ಡೆಮಾಕ್ರಸಿ, ನವಂಬರ್ 6)



ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್

'ಎ' ಟು 'ಝಡ್' ಅಲ್ಲ- 'ಎ' ಮತ್ತು 'ಝಡ್' ಮಾತ್ರ!

ಕಳೆದ ಸಂಚಿಕೆಯಲ್ಲಿ ಈ ಕಾಲಂನಲ್ಲಿ, ನಿವೃತ್ತರಾಗುತ್ತಿರುವ ದೇಶದ ಸರ್ವೋಚ್ಚ ನ್ಯಾಯಾಲಯದ 50ನೇ ಸಿಜೆಐ ತನ್ನನ್ನು ಇತಿಹಾಸ ಹೇಗೆ ನೆನಪಿಸಿಕೊಳ್ಳುತ್ತದೆ ಎಂದು ಯೋಚಿಸುತ್ತಿದ್ದಾರೆ ಎಂಬ ವರದಿಯನ್ನು ವಿಶ್ಲೇಷಿಸಲಾಗಿತ್ತು. ಆ ನಂತರ 'ನೆನಪಿಸಿ'ಕೊಳ್ಳಬೇಕಾದ ಮತ್ತೊಂದು ಹೇಳಿಕೆ ಅವರಿಂದ ಬಂದಿದೆ.

"ನಾನು ಸದಾ ಎ ಯಿಂದ ಝಡ್ ವರೆಗೆ, ಅರ್ಣಾಬ್‌ನಿಂದ ಝುಬೇರ್ ವರೆಗೆ ಜಾಮೀನು ಕೊಟ್ಟಿದ್ದೇನೆ" ಎಂದು ಅವರು ಸಮಾರಂಭವೊಂದರಲ್ಲಿ ಹೇಳಿರುವುದಾಗಿ ವರದಿಯಾಗಿದೆ. ಈ ಸುದ್ದಿ ಓದಿದಾಗ ಯಾರಿಗಾದರೂ ತಟ್ಟನೆ ಉಮರ್‌ಖಾಲಿದ್ ಕಳೆದ ನಾಲ್ಕು ವರ್ಷಗಳಿಂದ ವಿಚಾರಣೆಯೇ ಇಲ್ಲದೆ, ಭೀಮಾ ಕೊರೆಗಾಂವ್ ಪ್ರಕರಣದ ಆರೋಪಿಗಳು ಇನ್ನೂ ಹೆಚ್ಚು ಕಾಲದಿಂದ ಮತ್ತೆ-ಮತ್ತೆ ಜಾಮೀನು ನಿರಾಕರಿಸಲ್ಪಟ್ಟು ಜೈಲಿನಲ್ಲಿರುವುದು ನೆನಪಾಗದಿರದು.

ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರಿಗೆ ಯಾವ ಕೇಸನ್ನು ಯಾವ ನ್ಯಾಯಾಧೀಶರ ಪೀಠಕ್ಕೆ ವಹಿಸಬೇಕು ಎಂದು ನಿರ್ಧರಿಸುವ ಅಧಿಕಾರವಿರುತ್ತದೆ. ನ್ಯಾಯಮೂರ್ತಿ ಚಂದ್ರಚೂಡ್ ಅಧಿಕಾರದ ಅವಧಿಯಲ್ಲಿ ಮಾನವ ಹಕ್ಕುಗಳ ಹೋರಾಟಗಾರರ ಮೇಲಿನ ಹೆಚ್ಚಿನ ಯುಎಪಿಎ ಕೇಸುಗಳನ್ನು ನ್ಯಾಯಮೂರ್ತಿ ಎಂ.ಆರ್. ಶಹಾರವರ ಅಧ್ಯಕ್ಷತೆಯ ಪೀಠಕ್ಕೆ ವಹಿಸಿಕೊಡಲಾಗಿದೆ, ಇವರು ಹೈಕೋರ್ಟ್ ನ್ಯಾಯಾಧೀಶರಾಗಿದ್ದಾಗ ಪ್ರಧಾನ ಮಂತ್ರಿ ಮೋದಿ ಒಬ್ಬ 'ಹೀರೋ', 'ಮಾದರಿ' ಎಂದು ಉಲ್ಲೇಖಿಸಿದವರು ಎಂದು ಸುಪ್ರೀಂ ಕೋರ್ಟಿನ ಹಿರಿಯ ವಕೀಲೆ ಇಂದಿರಾ ಜೈಸಿಂಗ್ ನೆನಪಿಸಿಕೊಳ್ಳುತ್ತ (ನ್ಯೂಸ್‌ಕ್ಲಿಕ್, ನವಂಬರ್ 6), ಈ ನಿಟ್ಟಿನಲ್ಲಿ ಅವರ 'ಸಾಧನೆ'ಗಳನ್ನು ಪಟ್ಟಿ ಮಾಡಿದ್ದಾರೆ.

ಬದುಕು ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ಬಹಳಷ್ಟು ಕೇಸುಗಳು ನ್ಯಾಯಮೂರ್ತಿ ಬೇಲಾ ತ್ರಿವೇದಿಯವರಿದ್ದ ಪೀಠಕ್ಕೆ ಹೋದವು.



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ಇವರು ಮೋದಿಯವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ಅವರ ಸರಕಾರದ ಕಾನೂನು ಕಾರ್ಯದರ್ಶಿಯಾಗಿದ್ದವರು ಎಂದೂ ಇಂದಿರಾ ಜೈಸಿಂಗ್ ನೆನಪಿಸಿದ್ದಾರೆ. 'ಸಾಮಾನ್ಯವಾಗಿ ಬೇಲ್, ಅಪರೂಪವಾಗಿ ಮಾತ್ರ ಜೇಲ್' ಎಂದು ಸಿಜೆಐ ಸಾರಿದರೂ, ಬೇಲ್ ಬದಲು ವಿಚಾರಣಾ-ಪೂರ್ವ ಜೈಲು ಸುಪ್ರೀಂ ಕೋರ್ಟಿನ ಸಾಮಾನ್ಯ ಸಂಗತಿಯಾದದ್ದು ಈ ಕಾಲದಲ್ಲಿಯೇ. ಈ ನಿಲುವು ನ್ಯಾಯಾಂಗದಲ್ಲೆಲ್ಲ ಹರಡಿ, ನ್ಯಾಯಮೂರ್ತಿ ಚಂದ್ರಚೂಡ್‌ರವರ ಕಣ್ಣ ಮುಂದೆಯೇ ಹಲವು ಹೈಕೋರ್ಟ್‌ಗಳ ಮತ್ತು ಸುಪ್ರೀಂ ಕೋರ್ಟಿನ ನ್ಯಾಯಾಧೀಶರುಗಳು ಮಾನವ ಹಕ್ಕುಗಳ ರಕ್ಷಣೆಗೆ ಮುಂದಾದವರ ಜಾಮೀನು ವಿಚಾರಣೆಗಳನ್ನು ವಿಳಂಬಗೊಳಿಸಿರುವುದು ಮತ್ತು ಜಾಮೀನು ನಿರಾಕರಿಸುವುದು ನಡೆದಿದೆ ಎನ್ನುತ್ತಾರೆ ಇಂದಿರಾ ಜೈಸಿಂಗ್.

ಸಾಮ್ರಾಜ್ಯಶಾಹಿಯ ಪಾತ್ರವನ್ನು ಮರೆಮಾಚಲು ಯತ್ನಿಸುವ ಮುಖ್ಯಧಾರೆಯ ಅರ್ಥಶಾಸ್ತ್ರ





ಮುಖ್ಯಧಾರೆಯ ಅರ್ಥಶಾಸ್ತ್ರವು, ಸಾಮ್ರಾಜ್ಯಶಾಹಿ ಎಂಬ ವಿದ್ಯಮಾನವನ್ನು ಉದ್ದೇಶಪೂರ್ವಕವಾಗಿ ನಿರಾಕರಿಸುತ್ತದೆ. ಮುಖ್ಯಧಾರೆಯ ಸಂಪ್ರದಾಯದೊಳಗೆ ಅನೇಕ ವೃತ್ತಿಪರ ಅರ್ಥಶಾಸ್ತ್ರಜ್ಞರು ವಾಸ್ತವವನ್ನು ಮರೆಮಾಚುವಲ್ಲಿ ಪ್ರಜ್ಞಾಪೂರ್ವಕವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿರುವವರು ಎಂದು ಹೇಳುವುದು ಸರಿಯಲ್ಲವಾದರೂ, ಬಹುತೇಕ ಮಂದಿಗೆ ಆಳುವ ವ್ಯವಸ್ಥೆಯ 'ಲಕ್ಷ್ಮಣ ರೇಖೆ'ಯನ್ನು ದಾಟದಿರುವುದು ಒಂದು ಸುಲಭದ ಆಯ್ಕೆಯಾಗಿದೆ. ಮತ್ತು, ವೈಯಕ್ತಿಕವಾಗಿ ಈ ವಿಷಯದ ಅಧ್ಯಯನದಲ್ಲಿ ತೊಡಗಿರುವ ಯಾರೊಬ್ಬರೂ ಉದ್ದೇಶಪೂರ್ವಕವಾಗಿ ಅಪ್ರಾಮಾಣಿಕರಲ್ಲದಿದ್ದರೂ ಸಹ, ಸಾಮ್ರಾಜ್ಯಶಾಹಿಯು ವಹಿಸುವ ಪಾತ್ರವನ್ನು ಹೊರತುಪಡಿಸುವ ಒಂದಿಡೀ ಕಥನವೇ ಹೆಣೆದುಕೊಳ್ಳುತ್ತದೆ. ಇದರಲ್ಲಿ ಮೂರನೇ ಜಗತ್ತಿನಲ್ಲಿ ಕಂಡುಬರುವ ಸಾಮೂಹಿಕ ಬಡತನವನ್ನು ಮುಂದುವರೆದ ದೇಶಗಳೊಂದಿಗಿನ ಅವುಗಳ ವ್ಯಾಪಾರದಿಂದ ಬೇರ್ಪಡಿಸಿ ಸಾಮ್ರಾಜ್ಯಶಾಹಿಯ ಅಗತ್ಯ ಮತ್ತು ಅದು ವಹಿಸಿದ ಪಾತ್ರ ಈ ಎರಡನ್ನೂ ಮುಚ್ಚಿಡುವ ಒಂದು ಕುಟಿಲ ಪ್ರಯತ್ನವಿದೆ. ಮತ್ತು ಇದು ಒಂದು ಸೈದ್ಧಾಂತಿಕ ಯೋಜನೆ.

ಪ್ರೊ.ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ಯಾವುದನ್ನು "ಮುಖ್ಯಧಾರೆಯ ಅರ್ಥಶಾಸ್ತ್ರ" ಎಂದು ಕರೆಯಲಾಗುತ್ತದೆಯೋ ಅದು ಒಂದು ಆಳವಾದ ಸೈದ್ಧಾಂತಿಕ ನೆಲೆಗಟ್ಟನ್ನು ಹೊಂದಿದೆ. ಈ ರಾಜಕೀಯ-ತಾತ್ವಿಕ ನೆಲೆಗಟ್ಟು ಹೊಂದಿರುವ ಉದ್ದೇಶವು ಸತ್ಯವನ್ನು ಬಹಿರಂಗಪಡಿಸುವುದಲ್ಲ, ಬದಲಿಗೆ ಅದನ್ನು ಮರೆಮಾಚುವುದು. ಕಾರ್ಲ್ ಮಾರ್ಕ್ಸ್, ಅರ್ಥಶಾಸ್ತ್ರವು ಹೊಂದಬಹುದಾದ ಸೈದ್ಧಾಂತಿಕ ಗುಣ-ಲಕ್ಷಣಗಳ ಬಗ್ಗೆ ಅಪಾರ ಅರಿವು ಹೊಂದಿದ್ದರು ಮತ್ತು ಶಾಸ್ತ್ರೀಯ ರಾಜಕೀಯ ಅರ್ಥಶಾಸ್ತ್ರ ಮತ್ತು ಒರಟು ಅರ್ಥಶಾಸ್ತ್ರದ ನಡುವಿನ ವ್ಯತ್ಯಾಸವನ್ನು ಗುರುತಿಸಿದ್ದರು. ಈ ಒರಟು ಅರ್ಥಶಾಸ್ತ್ರವು ತನ್ನ ಗಮನವನ್ನು ವಿಶೇಷವಾಗಿ ವಿನಿಮಯ ವಲಯದ ಮೇಲೆ ಕೇಂದ್ರೀಕರಿಸಿದೆ. ಅದು ಉತ್ಪಾದನಾ ವಲಯದತ್ತ ದೃಷ್ಟಿ ಹರಿಸುವುದಿಲ್ಲ. ಅದು ಮಾರುಕಟ್ಟೆಯಲ್ಲಿ ಭಾಗವಹಿಸುವ ಎಲ್ಲ ಘಟಕಗಳನ್ನೂ ಒಂದೇ ನೆಲೆಯಲ್ಲಿ ನೋಡುವುದರಿಂದಾಗಿ, ಉತ್ಪಾದನಾ ವಲಯದಲ್ಲಿ ನಡೆಯುತ್ತಿದ್ದ ಶೋಷಣೆಯ ಸಂಗತಿಯು ಸಂಪೂರ್ಣವಾಗಿ ಮರೆಮಾಚಿಕೊಂಡಿತು.

ಅರ್ಥಶಾಸ್ತ್ರದ ಸೈದ್ಧಾಂತಿಕ ಗುಣ-ಲಕ್ಷಣಗಳ ಕುರಿತಂತೆ ಮಾರ್ಕ್ಸ್‌ರವರ ವಾಗ್ವಾದವು ಅವರ ಕೇಂದ್ರ ಕಾಳಜಿಯಾದ ಬಂಡವಾಳಶಾಹಿಯ ಅಡಿಯಲ್ಲಿ ಕಂಡುಬರುವ ಮಿಗುತಾಯ ಮೌಲ್ಯದ ಮೂಲಕ್ಕೆ ಸಂಬಂಧಿಸಿದೆ. ಆದರೂ ಸಿದ್ಧಾಂತವು ಮತ್ತೊಂದು ಮಟ್ಟದಲ್ಲಿಯೂ ಒಳಹೊಕ್ಕು ಚಾಚಿಕೊಳ್ಳುತ್ತದೆ. ಅದು, ಮುಖ್ಯಧಾರೆಯ ಅರ್ಥಶಾಸ್ತ್ರವು ಮಾಡುವಂತೆ, ವ್ಯವಸ್ಥೆಯನ್ನು ಸಂಪೂರ್ಣವಾಗಿ ಪ್ರತ್ಯೇಕಿಸಿ ನೋಡುತ್ತದೆ, ಮೇಲು-ಮೇಲಿನಲ್ಲಿ ಮಾತ್ರವಲ್ಲ, ಬದಲಾಗಿ ಸಾಮ್ರಾಜ್ಯಶಾಹಿಯ ವಿದ್ಯಮಾನವನ್ನು ಸೂಚ್ಯವಾಗಿ ಮತ್ತು ಉದ್ದೇಶಪೂರ್ವಕವಾಗಿ ನಿರಾಕರಿಸುತ್ತದೆ.

ಈ ಅಂಶವನ್ನು ಒತ್ತಿಹೇಳುತ್ತಿರುವುದು, ಮುಖ್ಯಧಾರೆಯ ಸಂಪ್ರದಾಯದೊಳಗೆ ಅನೇಕ ವೃತ್ತಿಪರ ಅರ್ಥಶಾಸ್ತ್ರಜ್ಞರು ಉದ್ದೇಶಪೂರ್ವಕವಾಗಿ ಅಪ್ರಾಮಾಣಿಕರು ಮತ್ತು ವಾಸ್ತವವನ್ನು ಮರೆಮಾಚುವಲ್ಲಿ ಪ್ರಜ್ಞಾಪೂರ್ವಕವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ ಎಂದು ಸೂಚಿಸುವ ಉದ್ದೇಶದಿಂದ ಅಲ್ಲ. ಅವರು ಆ ರೀತಿ ತೊಡಗಿಕೊಂಡಿದ್ದಾರೆ ಎನ್ನುವುದು ಸತ್ಯಕ್ಕೆ ದೂರವಾದ ಮಾತಾಗುತ್ತದೆ. ಬದಲಿಗೆ, ಅವರು "ವೃತ್ತಿಯ ದಬ್ಬಾಳಿಕೆ"ಗೆ ಒಳಗಾಗಿದ್ದಾರೆ ಎಂದು ಹೇಳಬಹುದು. ಅನೇಕ ವೃತ್ತಿಪರ ಅರ್ಥಶಾಸ್ತ್ರಜ್ಞರಲ್ಲಿ ಕಂಡುಬರುವ ಈ ವಿದ್ಯಮಾನವನ್ನು ಅಕೆಡೆಮಿಕ್ ಜೀವನಕ್ಕೆ ಸಂಬಂಧಿಸಿ ಪ್ರತ್ಯೇಕವಾಗಿ ಸಮಾಜಶಾಸ್ತ್ರೀಯ ಅಧ್ಯಯನದ ಒಂದು ಭಾಗವಾಗಿ ಅಧ್ಯಯನ ಮಾಡಬೇಕಾಗಿದೆ: ನಿಮ್ಮ ಸಮಾನ-ಸ್ಕಂದರಿಂದ ನಿಮಗೆ ಸಿಗುವ ಮನ್ನಣೆ, ನಿಮ್ಮ ವೃತ್ತಿ ಜೀವನ, ನಿಮ್ಮ ಮುಂಬಡ್ತಿ, ನಿಮ್ಮ ಕೃತಿಗಳ ಪ್ರಕಟಣೆ ಮತ್ತು ನೀವು ಪಡೆವ ಪ್ರಶಸ್ತಿಗಳು, ಇವೆಲ್ಲದಕ್ಕೂ ನೀವು ಅಕೆಡೆಮಿಕ್ ಉದ್ದೇಶದ 'ಲಕ್ಷ್ಮಣ ರೇಖೆ'ಯ ಒಳಗೇ ಇರಬೇಕಾಗುತ್ತದೆ. ಈ ಲಕ್ಷ್ಮಣ ರೇಖೆಯನ್ನು ಒಂದು ವೇಳೆ ನೀವು ದಾಟಿದ್ದೇ ಆದರೆ ಮತ್ತು ಸಾಮ್ರಾಜ್ಯಶಾಹಿಯಂತಹ ವಿಷಯಗಳ ಬಗ್ಗೆ ಮಾತನಾಡಿದರೆ ಅದಕ್ಕೆ ಭಾರೀ ಬೆಲೆಯನ್ನೇ ತೆರಬೇಕಾಗುತ್ತದೆ. ಆದ್ದರಿಂದ, ಅರ್ಥಶಾಸ್ತ್ರ ಸಂಬಂಧಿತ ವೃತ್ತಿಯಲ್ಲಿರುವ ಬಹುತೇಕ ಮಂದಿಗೆ ಲಕ್ಷ್ಮಣ ರೇಖೆಯನ್ನು ದಾಟದಿರುವುದು ಒಂದು ಸುಲಭದ ಆಯ್ಕೆಯಾಗಿದೆ. ಮತ್ತು, ವೈಯಕ್ತಿಕವಾಗಿ ಈ ವಿಷಯದ ಅಧ್ಯಯನದಲ್ಲಿ ತೊಡಗಿರುವ ಯಾರೊಬ್ಬರೂ ಉದ್ದೇಶಪೂರ್ವಕವಾಗಿ ಅಪ್ರಾಮಾಣಿಕರಲ್ಲದಿದ್ದರೂ ಸಹ, ಸಾಮ್ರಾಜ್ಯಶಾಹಿಯು ವಹಿಸುವ ಪಾತ್ರವನ್ನು ಹೊರತುಪಡಿಸುವ ಒಂದಿಡೀ ಕಥನವೇ ಹೆಣೆದುಕೊಳ್ಳುತ್ತದೆ.

ಚಾರಿತ್ರಿಕ ಅಂಶದ ನಿರಾಕರಣೆ

ನಾನು ಇಲ್ಲಿ ಈ ವಿದ್ವಜ್ಜನರ ಕಾರ್ಯ-ವಿಧಾನದ ಸಮಾಜಶಾಸ್ತ್ರದ ಬೆನ್ನಟ್ಟಿ ಹೋಗುವುದಿಲ್ಲ. ಆದರೆ, ಮುಖ್ಯಧಾರೆಯ ಅರ್ಥಶಾಸ್ತ್ರವು ಸಾಮ್ರಾಜ್ಯಶಾಹಿಯ ಪಾತ್ರವನ್ನು ಹೇಗೆ ಮರೆಮಾಚುತ್ತದೆ ಎಂಬುದನ್ನು ತೋರಿಸಲು ಒಂದೆರಡು ಉದಾಹರಣೆಗಳನ್ನು ಮಾತ್ರ ನೀಡುತ್ತೇನೆ. ಮೊದಲ ಉದಾಹರಣೆಯು ಬೆಳವಣಿಗೆಯ ಸಿದ್ಧಾಂತಕ್ಕೆ ಸಂಬಂಧಿಸಿದೆ. ಇಲ್ಲಿ ಪ್ರಧಾನ ದೃಷ್ಟಿಕೋನವು ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯ ಆರ್ಥಿಕ ಬೆಳವಣಿಗೆಯ ದರವನ್ನು ಅದರ ಶ್ರಮ-ಪಡೆಯ ಬೆಳವಣಿಗೆಯ ನೈಸರ್ಗಿಕ ದರದೊಂದಿಗೆ ಮತ್ತು ಆ ಕಾರಣದಿಂದ ಅಂತಿಮವಾಗಿ ಬೆಳವಣಿಗೆಯು ಜನಸಂಖ್ಯೆಯ ಬೆಳವಣಿಗೆಯ ನೈಸರ್ಗಿಕ ದರದೊಂದಿಗೆ ಕಟ್ಟಿಹಾಕಿಕೊಂಡಿದೆ ಎಂದು ನೋಡುತ್ತದೆ.

ಅರ್ಥಶಾಸ್ತ್ರಜ್ಞ ಸೇ ಅವರ ನಿಯಮ (ಈ ನಿಯಮವನ್ನು ಮಾರ್ಕ್ಸ್ ಖಂಡಿಸಿದ್ದರು) ವನ್ನು ನಂಬುವ ಈ ದೃಷ್ಟಿಕೋನವು ಒಂದು ಅರ್ಥವ್ಯವಸ್ಥೆಯಲ್ಲಿ ಒಟ್ಟು ಬೇಡಿಕೆಯು ವಹಿಸುವ ಪಾತ್ರವನ್ನೇ ತಳ್ಳಿಹಾಕುತ್ತದೆ. ಈ ಸೇ ನಿಯಮದ ಪ್ರಕಾರ, ಒಟ್ಟಾರೆಯಾಗಿ ಎಷ್ಟು ಉತ್ಪತ್ತಿಯಾಗುತ್ತದೆಯೋ (ಸಣ್ಣ ಪುಟ್ಟ ಹೊಂದಾಣಿಕೆಗಳು ಮಾತ್ರ ಇರಬಹುದಾದರೂ ಅತಿ-ಉತ್ಪಾದನೆಯ ಸಾಧ್ಯತೆ ಇಲ್ಲ) ಅದಷ್ಟೂ ಮಾರುಕಟ್ಟೆಯಲ್ಲಿ ತಂತಾನೇ/ಸ್ವಯಂಚಾಲಿತವಾಗಿ ಬೇಡಿಕೆಯನ್ನು ಪಡೆಯುತ್ತದೆ. ಇದು, ಎಲ್ಲಕ್ಕಿಂತ ಮಿಗಿಲಾಗಿ, ಸ್ಪಷ್ಟವಾಗಿ ಕಾಣುವ ಒಂದು ಚಾರಿತ್ರಿಕ ಅಂಶದ ನಿರಾಕರಣೆಯಾಗುತ್ತದೆ.

ಹತ್ತೊಂಬತ್ತನೇ ಶತಮಾನದ ಆರಂಭದವರೆಗಿನ ಅವಧಿಯಲ್ಲಿ ಗಣಿಗಳು ಮತ್ತು ತೋಟಗಳಲ್ಲಿ ಕೆಲಸ ಮಾಡಿಸಲು ಬಂಡವಾಳಶಾಹಿಗೆ ಅಗತ್ಯವಾದ ಮಾನವ-ಶಕ್ತಿಯನ್ನು ಪೂರೈಸಲು ಆಫ್ರಿಕಾದಿಂದ ಇಪ್ಪತ್ತು ಮಿಲಿಯನ್ ಗುಲಾಮರನ್ನು "ಹೊಸ ಜಗತ್ತಿಗೆ" ಸಾಗಿಸಲಾಯಿತು. ಅಂತೆಯೇ, ಗುಲಾಮರ ವ್ಯಾಪಾರ ಅಂತ್ಯಗೊಂಡ ನಂತರ, ಬಂಡವಾಳಶಾಹಿಯ ಮಾನವ-ಶಕ್ತಿಯ ಅಗತ್ಯವನ್ನು ಪೂರೈಸಲು ಅಂದಾಜು ಐವತ್ತು ಮಿಲಿಯನ್ ಭಾರತೀಯ ಮತ್ತು ಚೀನೀ ಕಾರ್ಮಿಕರನ್ನು ಮೊದಲ ವಿಶ್ವ ಯುದ್ಧದವರೆಗಿನ ಅವಧಿಯಲ್ಲಿ ಒಪ್ಪಂದ ಅಥವಾ ಕೂಲಿ ಕಾರ್ಮಿಕರಾಗಿ ವಿವಿಧ ಉಷ್ಣವಲಯದ ಅಥವಾ ಅರೆ-ಉಷ್ಣವಲಯದ ಸ್ಥಳಗಳಿಗೆ ಸಾಗಿಸಲಾಯಿತು (ಅದೇ ಅವಧಿಯಲ್ಲಿ ಐವತ್ತು ಮಿಲಿಯನ್ ಯುರೋಪಿಯನ್ನರು ತಮ್ಮ ಸ್ವಂತ ಇಚ್ಛೆಯ ಮೇಲೆ 'ಹೊಸ ಜಗತ್ತಿಗೆ' ವಲಸೆ ಹೋದರು, ಮತ್ತು ಬಲ ಪ್ರಯೋಗ ನಡೆಸಿ ಸ್ಥಳೀಯರಿಂದ ಅವರ ಸ್ವಾಧೀನದಲ್ಲಿದ್ದ ಭೂಮಿಯನ್ನು ಕಸಿದುಕೊಂಡರು).

ಅಸಂಬದ್ಧ ನಂಬಿಕೆ

ಮಾನವಶಕ್ತಿಯ ಅಗತ್ಯಗಳನ್ನು ಪೂರೈಸಲು ಬಂಡವಾಳಶಾಹಿಯ ಆಶ್ರಯದಲ್ಲಿ ಇಷ್ಟೊಂದು ಬೃಹತ್ ಸಂಖ್ಯೆಯ ಜನರ ಸ್ಥಳಾಂತರವಾದರೂ, ಬಂಡವಾಳಶಾಹಿಯು ತನ್ನ ಗಡಿಯೊಳಗಿನ ಜನಸಂಖ್ಯೆಯ ಬೆಳವಣಿಗೆಯ ನೈಸರ್ಗಿಕ ದರಕ್ಕೆ ವಿನಮ್ರವಾಗಿ ಹೊಂದಿಕೊಳ್ಳುತ್ತದೆ ಎಂದು ನಂಬುವುದು ಒಂದು ಅಸಂಬದ್ಧವೇ ಸರಿ. ಆದಾಗ್ಯೂ, ಮುಖ್ಯಧಾರೆಯ ಅರ್ಥಶಾಸ್ತ್ರವು ಬಂಡವಾಳಶಾಹಿ ಆರ್ಥಿಕ ಬೆಳವಣಿಗೆಯು ಜನಸಂಖ್ಯೆಯ ಬೆಳವಣಿಗೆಯ ನೈಸರ್ಗಿಕ ದರಕ್ಕೆ ಹೊಂದಿಕೊಳ್ಳುತ್ತದೆ ಎಂಬುದಾಗಿಯೇ ಪ್ರಚಾರ ಮಾಡುತ್ತದೆ.

ಈ ಸಿದ್ಧಾಂತವು, ಸಾಮ್ರಾಜ್ಯಶಾಹಿ ಎಂಬುದೊಂದು ಇರಲಿಲ್ಲವೆಂದಾದರೆ ಏನಾಗುತ್ತದೆ ಎಂಬುದನ್ನು ಮಾತ್ರ ತೋರಿಸುತ್ತದೆ ಮತ್ತು ಆ ಮೂಲಕ ಬಂಡವಾಳಶಾಹಿಯು ಎದುರಿಸುತ್ತಿರುವ ಕಾರ್ಮಿಕರ ಕೊರತೆಯನ್ನು ನೀಗಿಸುವ ಸಲುವಾಗಿ ಸಾಮ್ರಾಜ್ಯಶಾಹಿಯ ಅಗತ್ಯವಿದೆ ಎಂಬುದನ್ನು ಒತ್ತಿಹೇಳುತ್ತದೆ ಎಂದು ವಾದ ಹೂಡಬಹುದು; ಆಸ್ಟ್ರಿಯನ್ ಮಾರ್ಕ್ಸ್‌ವಾದಿ ಒಟ್ಟೊ ಬಾಯರ್ಸ್ ಇದನ್ನೇ ಆಧರಿಸಿ ಸಾಮ್ರಾಜ್ಯಶಾಹಿ ಕುರಿತ ಒಂದು ಸಿದ್ಧಾಂತವನ್ನು ಅಭಿವೃದ್ಧಿಪಡಿಸಿದರು. ಆದರೆ ಮುಖ್ಯಧಾರೆ ಅರ್ಥಶಾಸ್ತ್ರದ ಉದ್ದೇಶ ಇದಲ್ಲ. ಬಂಡವಾಳಶಾಹಿಯ ಮಾನವಶಕ್ತಿಯ ಅವಶ್ಯಕತೆಗಳನ್ನು ಪೂರೈಸಲು ಜಗತ್ತಿನಾದ್ಯಂತ ಬೃಹತ್ ಸಂಖ್ಯೆಯ ಜನರ ಚಲನೆ ಸಂಭವಿಸಿತ್ತು ಎಂಬುದನ್ನು ಬಂಡವಾಳಶಾಹಿ ಗುರುತಿಸಿದೆ ಎಂಬುದರ ಸುಳಿವು ಕೂಡ ಈ ಅರ್ಥಶಾಸ್ತ್ರದೊಳಗೆ ಇಲ್ಲ. ಅದಕ್ಕಿಂತಲೂ ಮಿಗಿಲಾಗಿ, ಯಾವುದೇ ನಿರ್ದಿಷ್ಟ ಅವಧಿ ಅಥವಾ ಅವಧಿಗಳು ಒಂದು ನಿರ್ದಿಷ್ಟ ಪರಿಮಾಣದ ಕಾರ್ಮಿಕ ಬಲವನ್ನು ಹೊಂದಿಲ್ಲದಿದ್ದರೆ ಈ ಸಿದ್ಧಾಂತವು ತಾರ್ಕಿಕವಾಗಿಯೂ ಸಮರ್ಥನೀಯವಲ್ಲ. (ಏಕೆಂದರೆ ಎಲ್ಲ "ಉತ್ಪಾದನಾ ಅಂಶಗಳ" ನಿರ್ದಿಷ್ಟ ಪೂರೈಕೆಗಳ ಪೂರ್ಣಬಳಕೆ ಪ್ರತಿ ಅವಧಿಯಲ್ಲೂ ಆದಾಯದ ವಿತರಣೆಯನ್ನು ನಿರ್ಧರಿಸುತ್ತವೆ).

ನಾನು ಈಗ ಯಾವುದೇ ಪ್ರಭಾವ ಹೊಂದಿರದ ಒಂದು ಸಿದ್ಧಾಂತದ ಬಗ್ಗೆ ಮಾತನಾಡುವ ಮೂಲಕ ಒಂದು ಸತ್ತ ಕುದುರೆಯನ್ನು ಥಳಿಸುತ್ತಿದ್ದೇನೆ ಎಂದು ಭಾವಿಸಲಾಗದು. ಏಕೆಂದರೆ ಥಾಮಸ್ ಪಿಕೆಟ್ಟಿ 2013ರಲ್ಲಿ ಪ್ರಕಟವಾದ -ಕ್ಯಾಪಿಟಲ್ ಇನ್ ದಿ ಟ್ವೆಂಟಿ ಫಸ್ಟ್ ಸೆಂಚುರಿ-(ಇಪ್ಪತ್ತೊಂದನೇ ಶತಮಾನದಲ್ಲಿ ಬಂಡವಾಳ) ಎಂಬ ತಮ್ಮ ಪ್ರಭಾವಶಾಲಿ ಕೃತಿಯಲ್ಲಿ ವರಮಾನ ವಿತರಣೆಯಲ್ಲಿ ಗಮನಿಸಿದ ಚಲನೆಗಳಿಗೆ ಸಂಬಂಧಿಸಿದ ತಮ್ಮ ಎಲ್ಲ ವಿವರಣೆಗಳನ್ನು ಖಂಡ ಖಂಡಗಳ ನಡುವೆ ಜರುಗಿದ, ಬಹುಪಾಲು ಬಲವಂತದಿಂದ ನಡೆದ ಶ್ರಮಿಕರ ಐತಿಹಾಸಿಕ ಚಲನೆಗಳನ್ನು ನಿರ್ಲಕ್ಷಿಸಿದ ಇದೇ ಈ ಸಿದ್ಧಾಂತವನ್ನು ಆಧರಿಸಿ ಮಂಡಿಸುತ್ತಾರೆ.

ಮುಕ್ತ ವ್ಯಾಪಾರ ಸಿದ್ಧಾಂತ

ನನ್ನ ಎರಡನೇ ಉದಾಹರಣೆಯು ವ್ಯಾಪಾರ ಸಿದ್ಧಾಂತಕ್ಕೆ ಸಂಬಂಧಿಸಿದೆ. ಮುಕ್ತ ವ್ಯಾಪಾರದ ಮೂಲಕ ಪ್ರತಿಯೊಂದು ದೇಶದ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ ಎಂದು ವಾದಿಸುವ ಒಂದು ದೀರ್ಘ ಪರಂಪರೆಯೇ ಇದೆ. ಈ ವಾದವು, ಒಂದು ದೇಶವು ಮುಕ್ತ ವ್ಯಾಪಾರಕ್ಕೆ ತೆರೆದುಕೊಳ್ಳುವ ಮೊದಲು ಮತ್ತು ನಂತರ, ಈ ಎರಡೂ ಸಂದರ್ಭಗಳಲ್ಲೂ ತನ್ನ ಎಲ್ಲ "ಉತ್ಪಾದನೆಯ ಅಂಶಗಳನ್ನು" ಸಂಪೂರ್ಣವಾಗಿ ಬಳಕೆ ಮಾಡಿಕೊಂಡಿರುತ್ತದೆಯಾದರೂ, ಅದು ಉತ್ಪಾದಿಸುವ ವಸ್ತುಗಳ ಸಂಯೋಜನೆ ಬದಲಾಗಿರುತ್ತದೆ ಎಂಬ ಒಂದು ಪ್ರತಿಪಾದನೆಯನ್ನು ಆಧರಿಸಿದೆ. ಮತ್ತು ಎಲ್ಲ ದೇಶಗಳೂ ಅವುಗಳು ಉತ್ಪಾದಿಸುವ ವಸ್ತುಗಳ ಸಂಯೋಜನೆಯನ್ನು ಬದಲಿಸಿಕೊಂಡರೆ, ಒಟ್ಟಾರೆಯಾಗಿ ಒಂದು ಅಗಾಧ ಪ್ರಮಾಣದ ಸರಕುಗಳನ್ನು ಉತ್ಪಾದಿಸುವ ಇಡೀ ವಿಶ್ವವೇ ತನ್ನ ಸಂಪನ್ಮೂಲಗಳನ್ನು ಅತ್ಯುತ್ತಮ ರೀತಿಯಲ್ಲಿ ಬಳಸಿಕೊಂಡಂತಾಗುತ್ತದೆ ಮತ್ತು ಅದರಿಂದಾಗಿ ಪ್ರತಿಯೊಂದೂ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬಹುದು. ಈ ರೀತಿಯಲ್ಲಿ ವ್ಯಾಪಾರವು, ಸೀಮಿತ ಸಂಪನ್ಮೂಲಗಳನ್ನು ಬಾಚಿಕೊಳ್ಳುವ ಡಾರ್ವಿನ್ -ಮಾದರಿ ಪೈಪೋಟಿಯಲ್ಲಿ ದೇಶ ದೇಶಗಳು ಪರಸ್ಪರ ಹೋರಾಡುವುದರ ಬದಲು ಅವುಗಳ ನಡುವೆ ಸಹಕಾರವನ್ನು ಉಂಟುಮಾಡುತ್ತದೆ ಎಂದು ಈ ಸಿದ್ಧಾಂತ ಹೇಳುತ್ತದೆ.

ಆದರೆ, ಪ್ರತಿಯೊಂದು ದೇಶವೂ ವ್ಯಾಪಾರದ ಮೊದಲು ಪುಟ 15 ಕ್ಕೆ

ಮದರಸಾ ಪಾಠಶಾಲೆ–ಅದು ಅವರ ಹಕ್ಕು

ಭಾರತದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ಅಧ್ಯಕ್ಷತೆಯಲ್ಲಿ ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠವು, ಉತ್ತರ ಪ್ರದೇಶ ಬೋರ್ಡ್ ಆಫ್ ಮದರಸಾ ಎಜುಕೇಶನ್ ಆಕ್ಟ್, 2004 (ಮದರಸಾ ಕಾಯ್ದೆ)ರ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿದಿದೆ. ಇದರಿಂದಾಗಿ, ಉತ್ತರ ಪ್ರದೇಶದ ಮದರಸಾಗಳಲ್ಲಿ ಓದುತ್ತಿರುವ 17 ಲಕ್ಷ ವಿದ್ಯಾರ್ಥಿಗಳಿಗೆ ದೊಡ್ಡ ಪರಿಹಾರ ಸಿಕ್ಕಿದೆ. ಆ ರಾಜ್ಯದಲ್ಲಿ ಸ್ಥಾಪಿಸಲಾಗಿರುವ 16,000ಕ್ಕೂ ಹೆಚ್ಚು ಮದರಸಾಗಳು ಕಾನೂನುಬದ್ಧವಾಗಿವೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಈ ಪಾಠಶಾಲೆಗಳು ಜಾತ್ಯಾತೀತ ತತ್ವಗಳಿಗೆ ವಿರುದ್ಧವಾಗಿವೆ ಎಂದು ಅಲಹಾಬಾದ್ ಹೈಕೋರ್ಟ್ ನೀಡಿದ್ದ ತೀರ್ಪನ್ನು ನವೆಂಬರ್ 5ರಂದು ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ನೇತೃತ್ವದ ಪೀಠ ತಳ್ಳಿಹಾಕಿದೆ. ಕಾನೂನು ರಚನೆಯಲ್ಲಿ ದೋಷಗಳಿವೆ ಎಂದು ಸಾಬೀತಾದಾಗ, ಮೂಲಭೂತ ಹಕ್ಕುಗಳು ಮತ್ತು ಸಾಂವಿಧಾನಿಕ ನಿಬಂಧನೆಗಳನ್ನು ಉಲ್ಲಂಘಿಸಲಾಗಿದೆ ಎಂದು ದೃಢಪಡಿಸಿದಾಗ ಮಾತ್ರ ಆ ಕಾನೂನನ್ನು ರದ್ದುಗೊಳಿಸಬಹುದು ಎಂದು ಅದು ಹೇಳಿದೆ.

ಉತ್ತರಪ್ರದೇಶ ಸರ್ಕಾರವು 2004ರಲ್ಲಿ ಮುಸ್ಲಿಂ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ಮದರಸಾ ಶಿಕ್ಷಣ ಮಂಡಳಿ ಕಾಯಿದೆಯನ್ನು ತಂದಿತು. ಸಂವಿಧಾನದ 25ನೇ ತಿದ್ದುಪಡಿಗೆ ಅನುಗುಣವಾಗಿಯೇ ಈ ಕಾಯ್ದೆ ಇದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ಸೇರಿದ ಜನರಿಗೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ನಿರ್ವಹಿಸುವ ಹಕ್ಕನ್ನು ಸಂವಿಧಾನವು ಒದಗಿಸಿದೆ ಎಂದು ನ್ಯಾಯಾಲಯವು ನೆನಪಿಸಿದೆ. ಆದರೆ, ಮದರಸಾ ಶಿಕ್ಷಣ ಸಂಸ್ಥೆಗಳು ನೀಡಿರುವ 'ಫಾಜಿಲ್ (ಪದವಿ ಸಮಾನ)' ಮತ್ತು 'ಕಾಮಿಲ್ (ಪಿಜಿಗೆ ಸಮಾನ)' ಪದವಿಗಳಿಗೆ ಪೀಠ ಆಕ್ಷೇಪ ವ್ಯಕ್ತಪಡಿಸಿದೆ. ಇದು ಯುಜಿಸಿ ನಿಯಮಗಳಿಗೆ ವಿರುದ್ಧವಾಗಿದೆ ಎಂಬುದು ಸ್ಪಷ್ಟವಾಗಿದೆ.

ಉತ್ತರ ಪ್ರದೇಶದ ಪರವಾಗಿ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್, "ಮದರಸಾಗಳಲ್ಲಿ ಬೋಧನಾ ಕೋರ್ಸ್‌ಗಳಲ್ಲಿ

> **ಮದರಸಾ ಪಾಠಶಾಲೆಗಳು ಜಾತ್ಯಾತೀತ ತತ್ವಗಳಿಗೆ ವಿರುದ್ಧವಾಗಿವೆ ಎಂದು ಅಲಹಾಬಾದ್ ಹೈಕೋರ್ಟ್ ನೀಡಿದ್ದ ತೀರ್ಪನ್ನು .ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ನೇತೃತ್ವದ ಪೀಠ ತಳ್ಳಿಹಾಕಿದೆ. ಮುಸ್ಲಿಮರ ಶಿಕ್ಷಣ ಸಂಸ್ಥೆಗಳನ್ನು ಅನುಮಾನದಿಂದ ನೋಡುವ ಪರಿಪಾಠವಿರುವ ಈ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ಈ ತೀರ್ಪು ಮತಾಂಧರಿಗೆ ಕಪಾಳಮೋಕ್ಷವಾಗಿದೆ. ಒಂದು ನಿರ್ದಿಷ್ಟ ಧರ್ಮವು ಶಾಲೆಗಳನ್ನು ನಡೆಸಬಾರದು ಎಂದು ಪ್ರತಿಪಾದಿಸಲು ಪ್ರಾರಂಭಿಸಿದರೆ, ಅದು ಕ್ರಮೇಣ ಇತರ ಧರ್ಮಗಳು ನಡೆಸುವ ಶಾಲೆಗಳಿಗೂ ಅನ್ವಯಿಸುವ ಸಾಧ್ಯತೆ ಇದೆ. ಹಿಂದೂ ಸಂಸ್ಥೆಗಳೂ ಶಾಲೆಗಳನ್ನು ನಡೆಸುತ್ತವೆ. ಆರ್‌ಎಸ್‌ಎಸ್ ಸರಸ್ವತಿ ಶಿಶು ವಿದ್ಯಾಮಂದಿರದಂತಹ ಕಾರ್ಯಗಳನ್ನು ಮುಂದುವರೆಸಿದೆ. ಅದರಲ್ಲಿ ಮಾಡುವ ಪ್ರಾರ್ಥನೆಗಳೂ ವಿಭಿನ್ನವಾಗಿವೆ. ಆದರೆ ಯಾರೂ ಅದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುತ್ತಿಲ್ಲ.**

ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನದಂತಹ ವಿಷಯಗಳು ಒಳಗೊಂಡಿರುವುದಿಲ್ಲ" ಎಂಬ ವಾದವನ್ನು ಮಂಡಿಸಿದರು. ಆ ವಾದವನ್ನು ತಳ್ಳಿಹಾಕಿದ ಸುಪ್ರೀಂ ಕೋರ್ಟ್, "ಉತ್ತರ ಪ್ರದೇಶದ ಬೋರ್ಡ್ ಆಫ್ ಮದರಸಾ ಎಜುಕೇಶನ್ ಆಕ್ಟ್, 2004 ಅನ್ನು ವಜಾಗೊಳಿಸುವುದರಲ್ಲಿ ಇದಕ್ಕೆ ಯಾವುದೇ ಪರಿಹಾರವಿಲ್ಲ. ಮದರಸಾಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರವು ಇತರ ಶಿಕ್ಷಣ ಸಂಸ್ಥೆಗಳಲ್ಲಿ ನೀಡುವ ಗುಣಮಟ್ಟದ ಶಿಕ್ಷಣವನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಸಾಕಷ್ಟು ನಿರ್ದೇಶನಗಳನ್ನು ನೀಡಬೇಕು" ಎಂದು ಹೇಳಿದೆ. ಮದರಸಾಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳ ಬಗ್ಗೆ ರಾಜ್ಯ ಸರ್ಕಾರವು 'ಕಾನೂನುಬದ್ಧ ಸಾರ್ವಜನಿಕ ಹಿತಾಸಕ್ತಿ' ಹೊಂದಿದ್ದರೆ, ಅವರಿಗೆ ಗುಣಮಟ್ಟದ ಶಿಕ್ಷಣ ಲಭ್ಯವಾಗುವಂತೆ ನೋಡಿಕೊಳ್ಳಬೇಕು,



ಇದರಿಂದ ಅವರು ಜೀವನದಲ್ಲಿ ಉತ್ತಮವಾಗಿ ನಿಲ್ಲುತ್ತಾರೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಮುಸ್ಲಿಮರ ಶಿಕ್ಷಣ ಸಂಸ್ಥೆಗಳನ್ನು ಅನುಮಾನದಿಂದ ನೋಡುವ ಪರಿಪಾಠವಿರುವ ಈ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನ ಇತ್ತೀಚಿನ ತೀರ್ಪು ಮತಾಂಧರಿಗೆ ಕಪಾಳಮೋಕ್ಷವಾಗಿದೆ. ಮದರಸಾಗಳಲ್ಲಿ ಓದುವವರು ಉತ್ತರ ಪ್ರದೇಶದಲ್ಲಿ ಮಾತ್ರವಲ್ಲ ದೇಶದಾದ್ಯಂತ ಇದ್ದಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಮದರಸಾಗಳು ಪ್ರಮುಖ ಪಾತ್ರ ವಹಿಸಿವೆ ಎಂಬ ಅಂಶವನ್ನು ನಿರ್ಲಕ್ಷಿಸಬಾರದು. ಈ ವಿದ್ಯಾವಂತರಲ್ಲಿ ಅನೇಕರು ಇಂದು ಉನ್ನತ ಹುದ್ದೆಯಲ್ಲಿದ್ದಾರೆ. ಸ್ವಾತಂತ್ರ್ಯದ ನಂತರ ಮದರಸಾಗಳನ್ನು ಕಾನೂನುಬದ್ಧವಾಗಿ ಸ್ಥಾಪಿಸಲಾಯಿತು. ಇವುಗಳ ನಿರ್ವಹಣೆ ರಹಸ್ಯ ವಿಷಯವಲ್ಲ. ಮೊದಲಿನಿಂದಲೂ ಇವುಗಳ ವಿರುದ್ಧ ವಾಗ್ದಾಳಿ ನಡೆಸುತ್ತಿರುವ ಬಿಜೆಪಿ, ತಾನು ಅಧಿಕಾರಕ್ಕೆ ಬಂದ ನಂತರ ಇವರನ್ನು ದ್ವೇಷದ ರಾಜಕಾರಣದ ಭಾಗವನ್ನಾಗಿ ಮಾಡಿಕೊಂಡಿದೆ. ಮದರಸಾಗಳು ಕೇವಲ ಇಸ್ಲಾಂ ಧರ್ಮವನ್ನು ಬೋಧಿಸುತ್ತಿಲ್ಲ. ಇದರೊಂದಿಗೆ ಹಿಂದಿ, ಇಂಗ್ಲಿಷ್, ಕಂಪ್ಯೂಟರ್ ಶಿಕ್ಷಣ ಇತ್ಯಾದಿ ಭಾಷೆಗಳಿವೆ. ಅಲಹಾಬಾದ್ ಹೈಕೋರ್ಟ್ ತೀರ್ಪಿನ ನಂತರ, ಈ ಶಾಲೆಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಸಾಮಾನ್ಯ ಶಾಲೆಗಳಿಗೆ ಸೇರಿಸಲು ಬಯಸಿದ್ದರು. ಅನೇಕ ಶಕ್ತಿಗಳು ಅದಕ್ಕೆ ಅನೇಕ ಅಡಚಣೆಗಳನ್ನು ಉಂಟುಮಾಡಿದವು. ಆ ವಿದ್ಯಾರ್ಥಿಗಳ ಬದುಕನ್ನೇ ಪ್ರಶ್ನಿಸಲಾಯಿತು.

ಉತ್ತರಪ್ರದೇಶದ 'ಬೋರ್ಡ್ ಆಫ್ ಮದರಸಾ ಎಜುಕೇಶನ್ ಆಕ್ಟ್, 2004' ಕಾಯಿದೆಯು ಮದರಸಾ ಶಿಕ್ಷಣಕ್ಕೆ ಕಾನೂನು ಚೌಕಟ್ಟನ್ನು ಒದಗಿಸುತ್ತದೆ. ಅಲ್ಲಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ (NCERT) ಪಠ್ಯಕ್ರಮದ ಹೊರತಾಗಿ, ಧಾರ್ಮಿಕ ಶಿಕ್ಷಣವನ್ನು ಸಹ ನೀಡಲಾಗುತ್ತದೆ. ಫೆಬ್ರವರಿ 3, 2020ರಂದು ಸಂಸತ್ತಿಗೆ ಕೇಂದ್ರವು ಪ್ರಸ್ತುತಪಡಿಸಿದ ಮಾಹಿತಿಯ ಪ್ರಕಾರ, 2018–19ರ ಹೊತ್ತಿಗೆ, ಭಾರತದಲ್ಲಿನ ಒಟ್ಟು 24,010 ಮದರಸಾಗಳಲ್ಲಿ, ಶೇ. 60ಕ್ಕಿಂತ ಹೆಚ್ಚು (14,528) ಯುಪಿಯಲ್ಲಿವೆ. ಇವುಗಳಲ್ಲಿ 11,621 ಮಾನ್ಯತೆ ಪಡೆದ ಮದರಸಾಗಳು ಸೇರಿದ್ದವು. 2023ರಲ್ಲಿ ಸುಮಾರು 1.69 ಲಕ್ಷ ವಿದ್ಯಾರ್ಥಿಗಳು ಯುಪಿ ಮದರಸಾ ಶಿಕ್ಷಣ ಮಂಡಳಿಯ ಪರೀಕ್ಷೆಗಳಿಗೆ (10 ನೇ ತರಗತಿ ಮತ್ತು 12 ನೇ ತರಗತಿಗೆ ಸಮನಾದ ಪರೀಕ್ಷೆಗಳಿಗೆ) ಕುಳಿತಿದ್ದಾರೆ.

ಹಿಂದೂ ಸಂಸ್ಥೆಗಳೂ ಶಾಲೆಗಳನ್ನು ನಡೆಸುತ್ತವೆ

ಒಂದು ನಿರ್ದಿಷ್ಟ ಧರ್ಮವು ಶಾಲೆಗಳನ್ನು ನಡೆಸಬಾರದು ಎಂದು ಪ್ರತಿಪಾದಿಸಲು ಪ್ರಾರಂಭಿಸಿದರೆ, ಅದು ಕ್ರಮೇಣ ಇತರ ಧರ್ಮಗಳು ನಡೆಸುವ ಶಾಲೆಗಳಿಗೂ ಅನ್ವಯಿಸುವ ಅಪಾಯವಿದೆ. ಹಿಂದೂ ಸಂಸ್ಥೆಗಳೂ ಶಾಲೆಗಳನ್ನು ನಡೆಸುತ್ತವೆ. ಆರ್‌ಎಸ್‌ಎಸ್ ಸರಸ್ವತಿ ಶಿಶು ವಿದ್ಯಾಮಂದಿರದಂತಹ ಕಾರ್ಯಗಳನ್ನು ಮುಂದುವರೆಸಿದೆ. ಅದರಲ್ಲಿ ಮಾಡುವ ಪ್ರಾರ್ಥನೆಗಳೂ ವಿಭಿನ್ನವಾಗಿವೆ. ಆದರೆ ಯಾರೂ ಅದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುತ್ತಿಲ್ಲ. ಅದೇ ಮದರಸಾಗಳ ವಿಷಯಕ್ಕೆ ಬಂದಾಗ ಹಲವು ಆಕ್ಷೇಪಗಳು ವ್ಯಕ್ತವಾಗುತ್ತವೆ. ಮದರಸಾ ಶಿಕ್ಷಣವನ್ನು ಸುಧಾರಿಸಬೇಕಾಗಬಹುದು. ಇದನ್ನು ಸುಧಾರಿಸಲು ರಾಜ್ಯ ಸರಕಾರಗಳು ಆ ಧರ್ಮದ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಬಹುದು. ಒಂದು ಧರ್ಮದವರು, ವಿಶೇಷವಾಗಿ ಶಾಲೆಗಳನ್ನು ಸ್ಥಾಪಿಸಿದರೆ ಅದನ್ನು ವಕ್ರ ದೃಷ್ಟಿಯಲ್ಲಿ ನೋಡಬೇಕಾದ ಅಗತ್ಯವಿಲ್ಲ. ಜಾತಿ, ಧರ್ಮದ ಭೇದವಿಲ್ಲದೆ ಪ್ರತಿಯೊಬ್ಬರಿಗೂ ಅವರವರ ಇಷ್ಟದ ಧರ್ಮವನ್ನು ಅನುಸರಿಸುವ ಸ್ವಾತಂತ್ರ್ಯವನ್ನು ಸಂವಿಧಾನ ನೀಡಿದೆ. ಅದೇ ಸಮಯದಲ್ಲಿ, ಅದು ಮತಾಂತರಗೊಳ್ಳುವ ಹಕ್ಕನ್ನು ಮಾತ್ರವಲ್ಲದೆ ಯಾವುದೇ ಧರ್ಮವನ್ನು ಅನುಸರಿಸದಿರುವ ಹಕ್ಕನ್ನು ಸಹ ನೀಡಿದೆ. ಹೀಗಿರುವಾಗ, ಒಂದು ಧರ್ಮದವರ ಕಲಿಕೆಯನ್ನೇ ನೋಡುವುದು ನಿಜವಾಗಿಯೂ ಸಂವಿಧಾನ ವಿರೋಧಿಯಾಗಿದೆ. ❍

ಟ್ರಂಪ್ ಮತ್ತೆ ಅಧ್ಯಕ್ಷ..... ಪುಟ 9 ರಿಂದ

ಎಂದಲ್ಲ, ಅವರು ಜೀವನ ವೆಚ್ಚ, ಆರ್ಥಿಕ ವಿಷಯಗಳ ಬಗ್ಗೆ ಭರವಸೆ ಕೊಟ್ಟಿದ್ದಾರೆ. ಕಮಲಾ ಅದರ ಬಗ್ಗೆ ಮಾತಾಡಿಲ್ಲ ಎಂಬುದೇ ಈ ಫಲಿತಾಂಶಕ್ಕೆ ಮುಖ್ಯ ಕಾರಣ. ಆದರೆ ಕಮಲಾ ಕರಿಯ–ಏಶ್ಯನ್ ಮಹಿಳೆ ಆಗಿರುವುದು ಅವರ ಸೋಲಿನಲ್ಲಿ ಯಾವುದೇ ಪಾತ್ರ ವಹಿಸಿಲ್ಲವೆಂದು ಹೇಳುವಂತಿಲ್ಲ.

ಜನರ ಜೀವನ ವೆಚ್ಚ, ಆರ್ಥಿಕ ಪರಿಸ್ಥಿತಿ ಗಳ ಜತೆಗೆ ಜನರ ಅವೈಜ್ಞಾನಿಕ, ಅತಾರ್ಕಿಕ, ಜನಾಂಗೀಯ, ಧಾರ್ಮಿಕ, ಪುರುಷಾಹಂಕಾರದ ಭಾವನೆಗಳನ್ನು ಬಳಸುವ ಸಂಕಥನಗಳನ್ನು ಟ್ರಂಪ್ ಪ್ರಚಾರ ಬಳಸಿತು. ವಲಸೆ ಕಾರ್ಮಿಕರ ಪೆಡಂಭೂತವನ್ನು ಟ್ರಂಪ್ ಪ್ರಚಾರ ಪರಿಣಾಮಕಾರಿಯಾಗಿ ಬಳಸಿತು. ಆದರೆ ಇದು ತಮ್ಮ ಮತಗಳನ್ನು ಕಾಪಾಡಿಕೊಳ್ಳಲು ಕಾರಣವಾಯಿತೇ ವಿನಹ, ಇದರರ್ಥ ಡೆಮೊಕ್ರಾಟಿಕ್ ಪಕ್ಷದ ಸಾಂಪ್ರದಾಯಿಕ ಬೆಂಬಲಿಗರು ಮತ್ತು ಅಣಿ ನೆರೆಸಬೇಕೆಂದಿದ್ದ ವಿಭಾಗಗಳು ಟ್ರಂಪ್ ಪ್ರಚಾರಕ್ಕೆ ಮರುಳಾದವು ಎಂದಲ್ಲ. ಮತದಾನದ ವಿಶ್ಲೇಷಣೆ ಡೆಮೊಕ್ರಾಟಿಕ್ ಪಕ್ಷ ಮತಗಳು ಟ್ರಂಪ್ ಗೆ ಹೋಗಲಿಲ್ಲ. ಬದಲಾಗಿ ದೊಡ್ಡ ಪ್ರಮಾಣದಲ್ಲಿ ಟ್ರಂಪ್ ಗೆ ಮತ ಹಾಕುವ ಮನಸ್ಸಿಲ್ಲದ ಡೆಮೊಕ್ರಾಟಿಕ್ ಪಕ್ಷದ ಬೆಂಬಲಿಗ ಮತ್ತು ಸ್ವತಂತ್ರ ಜನವಿಭಾಗಗಳು ಮತದಾನಕ್ಕೆ ಬರಲೇ ಇಲ್ಲ ಎಂದು ತೋರಿಸಿದೆ.

2020ರಲ್ಲಿ 15.8 ಕೋಟಿ ಜನ ಮತದಾನ ಮಾಡಿದ್ದರೆ, ಈ ಬಾರಿ ಅದು 14.3 ಕೋಟಿಗೆ ಇಳಿಯಿತು. ಮತದಾನಕ್ಕೆ ಅರ್ಹರಾಗಿದ್ದವರಲ್ಲಿ 2020ರಲ್ಲಿ 65.9% ಮತದಾನ ಮಾಡಿದರೆ, ಈ ಬಾರಿ ಅದು ಶೇ. 58.2 ಕ್ಕೆ ಇಳಿಯಿತು. 2020ರಲ್ಲಿ 1.2 ಕೋಟಿ ಅರ್ಹ ಮತದಾರರು ರಿಜಿಸ್ಟರ್ ಮಾಡಿರಲಿಲ್ಲ. ಈ ಬಾರಿ ಅದು 1.9 ಕೋಟಿಗೆ ಏರಿತು. ಟ್ರಂಪ್ ಈ ಬಾರಿ ಸಹ 2020ರಷ್ಟೇ ಮತ ಗಳಿಸಿದ್ದಾರೆ. ಆದರೆ ಕಮಲಾ ಬೈಡನ್ 2020ರಲ್ಲಿ ಗಳಿಸಿದ್ದಕ್ಕಿಂತ (8.12 ಕೋಟಿ) 1.1 ಕೋಟಿ ಕಡಿಮೆ ಮತ ಗಳಿಸಿದ್ದಾರೆ. ಮತದಾನದಲ್ಲಿ ಆದ 1.5 ಕೋಟಿ ಕಡಿತದಲ್ಲಿ 1.1 ಕೋಟಿ ಸಿಂಹಪಾಲು ಕಮಲಾ ಅವರದ್ದಾಗಿತ್ತು.

ವಿವಿಧ ಜನವಿಭಾಗಗಳ ಮತಗಳಲ್ಲಿ ಇಬ್ಬರ ಪಾಲು ವಿಶ್ಲೇಷಿಸಿದರೆ ಈ ಅಂಶಗಳು ಬೆಳಕಿಗೆ ಬಂದಿವೆ:

* ಕಾರ್ಮಿಕರ ಮತಗಳು ಟ್ರಂಪ್ ಗೆ ಹೋಗಲಿಲ್ಲ. ಆದರೆ ಕಡಿಮೆ ಆದಾಯದ, ಕಡಿಮೆ ಶೈಕ್ಷಣಿಕ ಅರ್ಹತೆ ಇರುವ, ನಿರುದ್ಯೋಗಿ ಕಾರ್ಮಿಕರು ಮತ ಹಾಕಲಿಲ್ಲ.
* ಮಹಿಳೆಯರಲ್ಲಿ ಮದುವೆಯಾಗದ ಯುವತಿಯರಲ್ಲಿ ಟ್ರಂಪ್ ಮತ ಕಳೆದುಕೊಂಡರೆ, ಮದುವೆಯಾದ ವಯಸ್ಕ ಮಹಿಳೆಯರಲ್ಲಿ ಟ್ರಂಪ್ ಮತ ಗಳಿಕೆ ಹೆಚ್ಚಾಯಿತು. ಅಂದರೆ ಮದುವೆಯಾಗದ ಯುವತಿಯರಿಗೆ ಗರ್ಭಪಾತ ಕಾನೂನಿನ ವಿಷಯ ಮುಖ್ಯವಾದರೆ, ವಯಸ್ಕ ಮಹಿಳೆಯರಿಗೆ ಆರ್ಥಿಕ ವಿಷಯ ಮುಖ್ಯವಾಯಿತು.
* ಯುವಜನರಲ್ಲಿ ಮತದಾನದ ಪ್ರಮಾಣವೇ ಬಹಳ ಕಡಿಮೆಯಾಯಿತು. ಹೊಸ ಮತದಾರರು ಮತದಾನಕ್ಕೆ ರಿಜಿಸ್ಟರ್ ಮಾಡಲೇ ಇಲ್ಲ.
* ಕರಿಯರು, ಲ್ಯಾಟಿನೊಗಳಲ್ಲಿ ಸಹ ಕಡಿಮೆ ಶೈಕ್ಷಣಿಕ ಅರ್ಹತೆ ಇರುವವರಲ್ಲಿ ಟ್ರಂಪ್ ಮತಗಳಿಕೆ ಹೆಚ್ಚಾಯಿತು, ಕಮಲಾ ಮತಗಳಿಕೆ ಕಡಿಮೆಯಾಯಿತು.
* ಕಡಿಮೆ ಆದಾಯದ, ಕಡಿಮೆ ಶೈಕ್ಷಣಿಕ ಅರ್ಹತೆ ಇರುವ ಬಿಳಿಯರಲ್ಲಿ ಕಮಲಾ ಮತಗಳಿಕೆ ಕಡಿಮೆಯಾಯಿತು.

ಇದರ ಒಟ್ಟು ಸಾರಾಂಶವೆಂದರೆ, ಜನಾಂಗೀಯ–ಧಾರ್ಮಿಕ ಅಲ್ಪಸಂಖ್ಯಾತರಲ್ಲಿ (ಕರಿಯರು, ಲ್ಯಾಟಿನೊ, ಮುಸ್ಲಿಮರು, ಏಶ್ಯನ್ನರು), ಮಹಿಳೆಯರಲ್ಲಿ, ಯುವಜನರಲ್ಲಿ, ನಗರವಾಸಿಗಳಲ್ಲಿ, ಪದವೀಧರರಲ್ಲಿ ಬೈಡನ್ ಗಳಿಸಿದ್ದ ಬಹುಮತದಲ್ಲಿ ಕಮಲಾ ಗೆ ಸಾಕಷ್ಟು ಕುಸಿತ ಕಂಡಿತು, ಹೆಚ್ಚಾಗಿ ಮತದಾನದಲ್ಲಿ ಭಾಗವಹಿಸದ್ದರಿಂದ. ಅದೇ ಸಮಯದಲ್ಲಿ ಬಿಳಿಯರಲ್ಲಿ (ಮಹಿಳೆಯರನ್ನೂ ಸೇರಿಸಿ), ಪದವೀಧರರಲ್ಲದವರಲ್ಲಿ ಟ್ರಂಪ್ ಬಹುಮತ ಹೆಚ್ಚಿತು. ಇದರಿಂದಾಗಿ ಮತದಾರರು ಬಲಪಂಥದತ್ತ ಅಥವಾ ಫ್ಯಾಸಿಸಂ ನತ್ತ ವಾಲಿಲ್ಲ. ಆರ್ಥಿಕ, ಜೀವನೋಪಾಯದ ಪ್ರಶ್ನೆಗಳನ್ನು ಎತ್ತದ ಪರಿಹರಿಸದ ಪಕ್ಷದ, ಸರಕಾರಕ್ಕೆ ಶಿಕ್ಷೆ ನೀಡಿದ್ದಾರೆ ಎನ್ನಬಹುದು. ❍

‘ಕರ್ನಲ್ ಗೆ ಯಾರೂ ಬರೆಯುವುದಿಲ್ಲ’; ಕೆ.ಪಿ. ಲಕ್ಷ್ಮಣ್ ಮತ್ತು ಸಮುದಾಯದ ಕ್ರಾಂತಿ-ಪ್ರೀತಿಯ ಕತೆ!

ನವೀನ್ ಸೂರಿಂಜೆ

"ಪಿಂಚಣಿಗೆ ಹೋರಾಡಿ ಹೋರಾಡಿ ಸುಸ್ತಾದ ಮಾಜಿ ಸೈನಿಕ ರಾಮ್ ಕಿಶನ್ ಗ್ರೇವಲ್ 2016 ನವೆಂಬರ್ ನಲ್ಲಿ ಆತ್ಮಹತ್ಯೆ ಮಾಡಿಕೊಂಡರು".

ಇದು 2014ರ ನಂತರದ ಭಾರತದ ಸೈನಿಕರ ಪರಿಸ್ಥಿತಿ! ದಿಲ್ಲಿಯ ಜಂತರ್ ಮಂತರ್ ನಲ್ಲಿ ಪಿಂಚಣಿಗಾಗಿ ಪ್ರತಿಭಟನೆ ನಡೆಸುತ್ತಿದ್ದ ಮಾಜಿ ಸೈನಿಕರು, "ಯುದ್ಧ ನಡೆಯುವಾಗ ನಾವು ದೇಶಭಕ್ತರು. ಪಿಂಚಣಿಗಾಗಿ ಹೋರಾಟ ಮಾಡಿದರೆ ದೇಶದ್ರೋಹಿಗಳು", ಹೀಗೆ ಹೇಳುತ್ತಿದ್ದನ್ನು ಬಹುಶಃ ಜನ ಮರೆತಿರಬಹುದು.

ಅದನ್ನು ಮತ್ತೆ ನೆನಪಿಸುವ ‘ಕರ್ನಲ್ ಗೆ ಯಾರೂ ಬರೆಯುವುದಿಲ್ಲ’ ನಾಟಕವನ್ನು ನಿರ್ದೇಶಕ ಕೆ.ಪಿ. ಲಕ್ಷ್ಮಣ್ ರಂಗಕ್ಕಿಳಿಸಿದ್ದಾರೆ. ತುರ್ತುಪರಿಸ್ಥಿತಿ ದಿನಗಳಲ್ಲಿ ಆರಂಭವಾದ ಬಂಡಾಯ ಸಾಂಸ್ಕೃತಿಕ ಸಂಘಟನೆ "ಸಮುದಾಯ" ಬೆಂಗಳೂರು ಘಟಕವು ಈ ನಾಟಕವನ್ನು ಪ್ರಸ್ತುತಪಡಿಸಿದೆ.

ಘೋಷಿತ/ಅಘೋಷಿತ ಸರ್ವಾಧಿಕಾರಿಗಳ ಆಡಳಿತದಲ್ಲಿ ಸೈನಿಕರ ಪರಿಸ್ಥಿತಿ ಹೇಗಿರುತ್ತದೆ ಎಂದು ಹೇಳುವ "ಕರ್ನಲ್ ಗೆ ಯಾರೂ ಬರೆಯುವುದಿಲ್ಲ" ನಾಟಕವು ರಂಗಶಂಕರ ಥಿಯೇಟರ್ ಫೆಸ್ಟಿವಲ್ ನಲ್ಲಿ ಮೊದಲ ಪ್ರದರ್ಶನ ನಡೆಯಿತು. ಬೆಂಗಳೂರಿನ ರಂಗಶಂಕರಕ್ಕೆ 20 ವರ್ಷ ಪೂರೈಸಿದ ಹಿನ್ನಲೆಯಲ್ಲಿ ’ರಂಗಶಂಕರ ಥಿಯೇಟರ್ ಫೆಸ್ಟಿವಲ್’ ನಡೆಯುತ್ತಿದೆ.

20 ನೇ ಶತಮಾನದ ಮಹತ್ವದ ಸಾಹಿತಿಯಾಗಿರುವ, ಸ್ಪೇನ್ ಮೂಲದ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ ಅವರ "ನೋ ಒನ್ ರೈಟ್ಸ್ ಟು ದಿ ಕರ್ನಲ್" ಕಾದಂಬರಿಯ ಕನ್ನಡ ಅನುವಾದವೇ ‘ಕರ್ನಲ್ ಗೆ ಯಾರೂ ಬರೆಯುವುದಿಲ್ಲ’! (ಅನುವಾದ:ಶ್ರೀನಿವಾದ ವೈದ್ಯ) 1982ರಲ್ಲಿ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೇಜ್ ಅವರು ಸಾಹಿತ್ಯದಲ್ಲಿ ನೋಬೆಲ್ ಪ್ರಶಸ್ತಿ ಪುರಸ್ಕೃತರಾಗಿದ್ದರು.

ಈ ನೆಲದ ಶೋಷಿತರ ಕತೆಗಳನ್ನು ರಂಗರೂಪಕ್ಕಿಳಿಸಿದ್ದ ನಿರ್ದೇಶಕ ಕೆ.ಪಿ. ಲಕ್ಷ್ಮಣ್ ದಕ್ಲ ಕಥಾ ದೇವಿಕಾವ್ಯ, ಪಂಚಮಪದಗಳು, ಬಾಬ್ ಮಾರ್ಲಿ ಫ್ರಂ ಕೋಡಿಹಳ್ಳಿ ನಾಟಕಗಳ ಮೂಲಕ ಜನಮನ್ನಣೆ ಗಳಿಸಿದ್ದರು. ದಕ್ಲ ಕಥಾ ದೇವಿ ನಾಟಕದಲ್ಲಿ ಮ್ಯಾಜಿಕಲ್ ರಿಯಾಲಿಸಂ ಮೂಲಕ ದಲಿತರ ಕತೆ ಹೇಳಿದರೆ, ಪಂಚಮ ಪದಗಳು ಹಾಡಿನ ಮೂಲಕವೂ, ಬಾಬ್ ಮಾರ್ಲಿ ಫ್ರಂ ಕೋಡಿಹಳ್ಳಿ ನಾಟಕದಲ್ಲಿ ವರ್ತಮಾನ ಸಂವಾದದ ಮೂಲಕ ಶೋಷಿತರ ಕತೆ ಹೇಳಿದರು. ‘ಕರ್ನಲ್ ಗೆ ಯಾರೂ ಬರೆಯುವುದಿಲ್ಲ’ ನಾಟಕ ಮ್ಯಾಜಿಕಲ್ ರಿಯಲಿಸಂ ಅಲ್ಲ, ಹಾಗಂತ ವರ್ತಮಾನವನ್ನೂ ನೇರವಾಗಿ ಪ್ರಸ್ತಾಪಿಸುವುದಿಲ್ಲ.

2015 ರಿಂದ ಭಾರತದಲ್ಲಿ ನಡೆದ ಮಾಜಿ ಸೈನಿಕರ ಹೋರಾಟಗಳು, ಉಪವಾಸ ಸತ್ಯಾಗ್ರಹಗಳು, ದೇಶಭಕ್ತರ ಎದುರು ಸೈನಿಕರೇ ದೇಶದ್ರೋಹಿಗಳಾಗಿದ್ದು, ಪಿಂಚಣಿಗಾಗಿ ಹೋರಾಡಿದ ಸೈನಿಕರ ಬಂಧನ.... ಇಂತಹ ಸುದ್ದಿಗಳನ್ನೊಮ್ಮೆ ನೆನಪಿಸಿಕೊಂಡು ನಾಟಕ ನೋಡಿದರೆ, ’ಕರ್ನಲ್ ಗೆ ಯಾರೂ ಬರೆಯುವುದಿಲ್ಲ’ ನಾಟಕ ನಮ್ಮದೇ ನೆಲದ ಕತೆ ಎಂದು ಅನ್ನಿಸಿಕೊಳ್ಳುತ್ತದೆ.

ಯುದ್ದದಲ್ಲಿ ಪಾಲ್ಗೊಂಡಿದ್ದ ಕರ್ನಲ್ ನ ನಿವೃತ್ತ ಜೀವನವನ್ನಾಧರಿಸಿದ ಕತೆ ಇದು. ಹದಿನೈದು ವರ್ಷದ ಹಿಂದೆ ನೀಡಿದ್ದ ಪಿಂಚಣಿ ಭರವಸೆಯ ಈಡೇರಿಕೆಗಾಗಿ ಕರ್ನಲ್ ಕಾಯುತ್ತಿದ್ದಾನೆ. ಕರ್ನಲ್ ನ ಮಗ ಪೊಲೀಸರ ಗುಂಡಿಗೆ ಬಲಿಯಾಗಿದ್ದ. ಕರ್ನಲ್ ವಾಸಿಸುತ್ತಿದ್ದ ಊರಿನಲ್ಲಿ ಸಂಗೀತಗಾರನ ಸಾವಾಗಿತ್ತು. ದೇಶದ ತುರ್ತು ಪರಿಸ್ಥಿತಿಯ ಬಗ್ಗೆ ಹಾಡುವುದು, ಕವಿತೆ ಬರೆಯುವುದು, ಲೇಖನ ಬರೆಯುವುದು ನಿಷೇದಿಸಲಾಗಿತ್ತು. ಪತ್ರಿಕೆಗಳಲ್ಲಿ



ಸರ್ಕಾರದ ವಿರುದ್ದದ ಸುದ್ದಿ ಬರೆಯುವುದೂ ಅಪರಾಧ ಆಗಿತ್ತು. ಹಾಗಾಗಿ ಪತ್ರಿಕೆಗಳನ್ನು ಕ್ರಾಂತಿಕಾರಿಗಳು ರಹಸ್ಯವಾಗಿ ಪ್ರಸಾರ ಮಾಡುತ್ತಿದ್ದರು.

ಅಷ್ಟೇ ಅಲ್ಲ, ಸಂಗೀತಗಾರನ ಶವಯಾತ್ರೆಗೂ ಪೊಲೀಸರ ಅನುಮತಿ ಬೇಕಾಗಿತ್ತು. ಸರ್ಕಾರ ಹೇರಿರುವ ತುರ್ತುಪರಿಸ್ಥಿತಿ ವಿರುದ್ದ ಹೋರಾಡುವ ಕ್ರಾಂತಿಕಾರಿಗಳ ಜೊತೆ ಸೇರಿದ್ದ ಕರ್ನಲ್, ಒಂದೆಡೆ ಕ್ರಾಂತಿಯ ಭಾಗವಾಗುತ್ತಾನೆ. ಇನ್ನೊಂದೆಡೆ ಪಿಂಚಣಿಗಾಗಿ ಹೋರಾಡುತ್ತಾನೆ. ತಾನು ಗನ್ ಹಿಡಿದು ಯಾವ ಸರ್ಕಾರಕ್ಕಾಗಿ ಕೆಲಸ ಮಾಡಿದ್ದೇನೋ ಅದೇ ಸರ್ಕಾರದ ಅದೇ ಗನ್ ಗಳು ತನ್ನನ್ನೂ ಗುರಿಯಾಗಿಸುತ್ತದೆ ಎಂದು ಕರ್ನಲ್ ಗೆ ಮನವರಿಕೆ ಆಗುತ್ತದೆ.

20ನೇ ಶತಮಾನದಲ್ಲಿ ನಡೆದ ಯುದ್ದ ಮತ್ತು ತುರ್ತುಪರಿಸ್ಥಿತಿ ದಿನಗಳ ಸುತ್ತ ಈ ಕತೆ ಸುತ್ತುತ್ತದೆ. ತುರ್ತು ಪರಿಸ್ಥಿತಿ ಎಂದರೇನು? ಹಸಿವು ಮತ್ತು ಸ್ವಾಭಿಮಾನಗಳು ಪರಸ್ಪರ ಜೊತೆಯಾಗಿ ಪ್ರಭುತ್ವದ ಮತ್ತು ಪಟ್ಟಭದ್ರ ಸಮಾಜದ ವಿರುದ್ದ ಹೋರಾಡುವ ಪರಿಸ್ಥಿತಿಯೇ ತುರ್ತುಪರಿಸ್ಥಿತಿ. ಇಂತಹ ತುರ್ತು ಪರಿಸ್ಥಿತಿ ಎನ್ನುವುದು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಎಲ್ಲಾ ಶತಮಾನಗಳಲ್ಲೂ ಜಾರಿಯಲ್ಲಿ ಇರುತ್ತದೆ.

‘ಭಾರತದ ಎಲ್ಲಾ ಕಾಲಮಾನಗಳ ದಲಿತ ತಲೆಮಾರುಗಳು ಸಾಮಾಜಿಕ ತುರ್ತು ಪರಿಸ್ಥಿತಿಯನ್ನು ಎದುರಿಸಿದೆ’. ಕೆ.ಪಿ. ಲಕ್ಷ್ಮಣ್ ಅವರ ದಕ್ಲ ಕಥಾ ದೇವಿಕಾವ್ಯ ಮತ್ತು ಬಾಬ್ ಮಾರ್ಲಿ ಫ್ರಂ ಕೋಡಿಹಳ್ಳಿ ನಾಟಕಗಳು ಪ್ರತ್ಯೇಕ ಕಾಲಮಾನದ ಸಾಮಾಜಿಕ ತುರ್ತುಪರಿಸ್ಥಿತಿಯ ಕತೆಯನ್ನೇ ಹೇಳುತ್ತದೆ. ರಾಜಕೀಯವಾಗಿ ಘೋಷಿತ ತುರ್ತುಪರಿಸ್ಥಿತಿಗಿಂತ ಸಾಮಾಜಿಕ ಅಘೋಷಿತ ತುರ್ತುಪರಿಸ್ಥಿತಿ ಹೆಚ್ಚು ಕ್ರೂರವೂ, ಭಯಾನಕವೂ ಆಗಿದೆ ಎಂಬುದನ್ನು ಕೆ.ಪಿ. ಲಕ್ಷ್ಮಣ್ ಅವರು ಕತೆ, ಸಂಭಾಷಣೆ, ದೃಶ್ಯದ ಮೂಲಕ ಮನಮುಟ್ಟುವಂತೆ ಹೇಳಿದ್ದರು. ಈಗ ರಾಜಕೀಯ ತುರ್ತುಪರಿಸ್ಥಿತಿಯನ್ನು ಹೇಳಲು ಕೆ.ಪಿ. ಲಕ್ಷ್ಮಣ್ ಮತ್ತು ಸಮುದಾಯ ‘ಕರ್ನಲ್’ ಕತೆಯನ್ನು ಆಯ್ದುಕೊಂಡಿದ್ದಾರೆ.

ಸಮುದಾಯದ ಕಲಾವಿದರನ್ನು ನಿರ್ದೇಶಕ ಕೆ.ಪಿ.ಲಕ್ಷ್ಮಣ್ ಅವರು ನುರಿತ ಕಲಾವಿದರನ್ನಾಗಿ ಮಾರ್ಪಡಿಸಿದ್ದಾರೆ. ಕರ್ನಲ್ ನ ಅಸ್ತಮಾ ಪೀಡಿತ ಪತ್ನಿ (ನಟಿ-ಚಂದನ) ಕೆಮ್ಮಿದರೆ ಪ್ರೇಕ್ಷಕರಿಗೆ ಸಹಜವಾಗಿ ಕೆಮ್ಮು ಪ್ರಾರಂಭವಾಗುತ್ತದೆ. ಇದನ್ನು "ಸೈಕೋಜೆನಿಕ್ ಕಫ್" (Psychogenic Cough) ಎನ್ನುತ್ತಾರೆ. ಆದರೆ ಇದಕ್ಕೆ ಶಾರೀರಿಕ ಕಾರಣವಿಲ್ಲ. ಇದು ಕೇವಲ ಮನಸ್ಸಿನ ಪ್ರತಿಕ್ರಿಯೆ. ಸಹಜ ಅಭಿನಯಕ್ಕೊಂದು ಉದಾಹರಣೆ ಇದು. ಸಬಾಸ (ನಟ-ಪ್ರಣವ್) ನಕ್ಕರೆ ಇಡೀ ಸಭಾಂಗಣದಲ್ಲಿ ಮುಗುಳ್ನಗು ಮೂಡುತ್ತದೆ. ಕಲಾವಿದೆಯೊಬ್ಬರು ಲೈವ್ ಆಗಿ ನುಡಿಸುವ ಉಕುಲೆಲೆ ಗಿಟಾರ್ ನ ಸಣ್ಣ ಧ್ವನಿ, ಗುಂಪು ಹಾಡು, ಮ್ಯೂಸಿಕ್, ಡ್ಯಾನ್ಸ್, ಹಡಗು ಪ್ರಯಾಣಿಕರ ವಿಶಿಷ್ಟ ಭಾಷೆಯ ಸಹಜತೆಗೆ ತಲೆದೂಗಲೇಬೇಕು.

ಒಟ್ಟಾರೆ, ಸ್ಪೇನ್ ಮೂಲದ ಸಾಹಿತಿ ಬರೆದ ಕಾದಂಬರಿ ನಮ್ಮ ನೆಲದ ಸೈನಿಕರ ಕತೆಯಂತಿದೆ. ತೀರಾ ಬಡವನಾದ ಕರ್ನಲ್ ಮತ್ತವನ ಅಸ್ತಮಾ ಪೀಡಿತೆ ಪತ್ನಿ ಒಂದು ಹೊತ್ತಿನ ಊಟಕ್ಕೂ ಪರದಾಡುತ್ತಾರೆ. ‘ನಾಳೆಗೆ ಏನು ತಿನ್ನೋಣಾ?’ ಎಂಬ ಪತ್ನಿಯ ಹಸಿವಿನ ಪ್ರಶ್ನೆ ಕರ್ನಲ್ ನ ಹೃದಯದಲ್ಲಿ ಕ್ರಾಂತಿ ಮತ್ತು ಪ್ರೀತಿಯನ್ನು ಹುಟ್ಟಿಸುತ್ತೆ. ಹಾಗಾಗಿ, ಕರ್ನಲ್ ಗೆ ಯಾರೂ ಬರೆಯುವುದಿಲ್ಲ ಎಂಬ ನಾಟಕವು ತುರ್ತುಪರಿಸ್ಥಿತಿ ದಿನಗಳ ‘ಕ್ರಾಂತಿ ಮತ್ತು ಪ್ರೀತಿ’ಯ ಕತೆಯೂ ಹೌದು.

ಸಾಮ್ರಾಜ್ಯಶಾಹಿಯ ಪಾತ್ರವನ್ನು ಮರೆಮಾಚಲು..... ಪುಟ 13 ರಿಂದ

ಮತ್ತು ನಂತರದ ಎರಡೂ ಸಂದರ್ಭಗಳಲ್ಲೂ ತನ್ನ ಎಲ್ಲ "ಉತ್ಪಾದನೆಯ ಅಂಶಗಳನ್ನು" ಸಂಪೂರ್ಣವಾಗಿ ಬಳಕೆ ಮಾಡಿಕೊಂಡಿರುತ್ತದೆ ಎಂದು ಭಾವಿಸಿಕೊಳ್ಳಬೇಕಾದರೆ, ‘ಸೇ ನಿಯಮ’ ಹೇಳುವಂತೆ, ಒಟ್ಟಾರೆಯಾಗಿ ಬೇಡಿಕೆಯ ಕೊರತೆಯ ಸಮಸ್ಯೆ ಎಂಬುದೇ ಇಲ್ಲ ಎಂದು ಊಹಿಸಿಕೊಳ್ಳಬೇಕಾಗುತ್ತದೆ. ಇದು ನಿಸ್ಸಂಶಯವಾಗಿಯೂ ಒಂದು ಅಸಂಬದ್ಧವೇ ಹೌದು. ಸೇ ಅವರ ನಿಯಮವೇ ಸರಿಯಲ್ಲ, ವಿಶ್ವದ ಒಟ್ಟು ಉತ್ಪತ್ತಿಯು ವಿಶ್ವದ ಬೇಡಿಕೆಯ ಮಟ್ಟವನ್ನು ಅವಲಂಬಿಸಿರುತ್ತದೆ. ಈ ಬೇಡಿಕೆಗಿಂತ ಹೆಚ್ಚಿನದನ್ನು ಉತ್ಪಾದಿಸುವುದು ಉತ್ಪನ್ನವು ಮಾರಾಟವಾಗದಿರಲು ಕಾರಣವಾಗುತ್ತದೆ ಮತ್ತು ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತದೆ. ಆದ್ದರಿಂದ ಒಂದು ದೇಶವು ಒಂದು ವೇಳೆ ಹೆಚ್ಚು ಉತ್ಪಾದಿಸಿದರೆ, ಆಗ ಅದು ಈ ಹೆಚ್ಚುವರಿ ಉತ್ಪಾದನೆಯನ್ನು ಬೇರೆ ಯಾವುದಾದರೂ ದೇಶಕ್ಕೆ ತನಗೆ ನಷ್ಟ ಮಾಡಿಕೊಂಡು ಮಾತ್ರ ಮಾರಾಟ ಮಾಡಬಹುದು. ಮುಕ್ತ ವ್ಯಾಪಾರವು ಪ್ರತಿಯೊಂದೂ ದೇಶದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದರ ಬದಲು, ಬೇರೆ ಬೇರೆ ದೇಶಗಳಿಗೆ ನಷ್ಟವನ್ನುಂಟುಮಾಡಿ ಕೆಲವೇ ಕೆಲವು ದೇಶಗಳ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಬಹುದು. ಇದು ಮಾರುಕಟ್ಟೆಗಳಿಗಾಗಿ ದೇಶ ದೇಶಗಳ ನಡುವೆ ನಡೆಯುವ ಹೋರಾಟಗಳಿಗೆ ಕಾರಣವೂ ಆಗಿದೆ ಮತ್ತು ಆಧಾರವೂ ಆಗಿದೆ. ಮಾರುಕಟ್ಟೆಗಳಿಗಾಗಿ ದೇಶ ದೇಶಗಳ ನಡುವೆ ನಡೆಯುತ್ತಿರುವ ಹೋರಾಟಗಳ ತಳದಲ್ಲಿರುವ ಅಂಶವೇ ಸಾಮ್ರಾಜ್ಯಶಾಹಿ. ಆದ್ದರಿಂದ ಈ ಅಂಶವನ್ನು ಮರೆ ಮಾಡುವುದು ಮತ್ತು ಮುಕ್ತ ವ್ಯಾಪಾರವನ್ನು ಮಾರುಕಟ್ಟೆಯ ಹೋರಾಟವಾಗಿ ಪ್ರಸ್ತುತಪಡಿಸುವುದರ ಬದಲು ಪ್ರತಿಯೊಂದು ದೇಶವನ್ನೂ ಉತ್ತಮಗೊಳಿಸುವ ಸಹಕಾರದ ಒಂದು ಸೂಚ್ಯ ರೂಪವಾಗಿ ಪ್ರಸ್ತುತಪಡಿಸುವ ಕ್ರಮವು ಸಾಮ್ರಾಜ್ಯಶಾಹಿ ವಿದ್ಯಮಾನವನ್ನೇ ಮುಚ್ಚಿಡುತ್ತದೆ.

ವಿದೇಶಿ ಉತ್ಪಾದಕರ ಹಾವಳಿಯ ವಿರುದ್ಧ ರಕ್ಷಣೆ

ಕುತೂಹಲದ ಸಂಗತಿಯೆಂದರೆ, ಬಂಡವಾಳಶಾಹಿಯ ಒಬ್ಬ ರಕ್ಷಕರೂ ಮತ್ತು ಸಮಾಜವಾದದ ಒಬ್ಬ ಕಟ್ಟಾ ವಿರೋಧಿಯೂ ಆಗಿದ್ದ ಜಾನ್ ಮೇನಾರ್ಡ್ ಕೇನ್ಸ್ ಕೂಡ ಸೇ ನಿಯಮವನ್ನು ತಿರಸ್ಕರಿಸುವ ಮೂಲಕ ಮಾರುಕಟ್ಟೆಗಳ ಅನ್ವೇಷಣೆಯ ಪ್ರಾಮುಖ್ಯತೆಯನ್ನು ಮತ್ತು ಆ ಮೂಲಕ ಸಾಮ್ರಾಜ್ಯಶಾಹಿಯ ಪ್ರಾಮುಖ್ಯತೆಯನ್ನು ಗುರುತಿಸಿದ್ದರು. ಅವರ ‘ದಿ ಜನರಲ್ ಥಿಯರಿ ಆಫ್ ಎಂಪ್ಲಾಯ್‌ಮೆಂಟ್, ಇಂಟರೆಸ್ಟ್ ಅಂಡ್ ಮನಿ’ ಎಂಬ ಮೇರು ಕೃತಿಯಲ್ಲಿ ಅವರು ಹೀಗೆ ಬರೆದಿದ್ದಾರೆ: “... ವ್ಯಕ್ತಿಗಳ ವ್ಯವಹಾರದಲ್ಲಿ ಸರ್ಕಾರದ ಹಸ್ತಕ್ಷೇಪವಿರಬಾರದು ಎಂಬ(laissez-faire) ವ್ಯವಸ್ಥೆಯನ್ನು ದೇಶೀಯವಾಗಿ ಹೊಂದಿದ್ದ ಮತ್ತು ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಒಂದು ಸಂಪ್ರದಾಯವಾಗಿದ್ದ ಅಂತಾರಾಷ್ಟ್ರೀಯ ಚಿನ್ನದ ಮಾನದಂಡದ ಅಡಿಯಲ್ಲಿ, ದೇಶದ ಆರ್ಥಿಕ ಸಂಕಷ್ಟವನ್ನು ತಗ್ಗಿಸುವ ಸಲುವಾಗಿ ಮಾರುಕಟ್ಟೆಗಳಿಗಾಗಿ ಸ್ಪರ್ಧಾತ್ಮಕ ಹೋರಾಟ ಮಾಡುವ ಮಾರ್ಗವನ್ನು ಹೊರತುಪಡಿಸಿ ಸರ್ಕಾರಕ್ಕೆ ಯಾವ ದಾರಿಯೂ ಇರುವುದಿಲ್ಲ". ನಿರುದ್ಯೋಗವನ್ನು ನಿವಾರಿಸುವ ಸಲುವಾಗಿ ಸರ್ಕಾರದ ಮಧ್ಯಪ್ರವೇಶದ ವಿಧಾನವನ್ನು ಒಂದು ವೇಳೆ ಬಳಸಬಹುದಾದರೆ, ಆಗ ಹೊರಗಿನ ಮಾರುಕಟ್ಟೆಗಳ ಅನ್ವೇಷಣೆಯ ಅಗತ್ಯವೇ ಇರುವುದಿಲ್ಲ ಮತ್ತು ಅದರಿಂದಾಗಿ ಸಾಮ್ರಾಜ್ಯಶಾಹಿ ಯುದ್ಧಗಳ ಅಗತ್ಯವೂ ಇರುವುದಿಲ್ಲ ಎಂಬುದನ್ನು ಕೀನ್ಸ್ ಇಲ್ಲಿ ಸೂಚ್ಯವಾಗಿ ಹೇಳಿದ್ದಾರೆ. ಆದರೆ, ಸರ್ಕಾರದ ವೆಚ್ಚಗಳು ದೇಶೀಯ ಉತ್ಪಾದಕರಿಗಾಗಿ ದೇಶೀಯ ಮಾರುಕಟ್ಟೆಯನ್ನು ವಿಸ್ತಾರಗೊಳಿಸಬೇಕು ಎಂದಾದರೆ, ಮೊದಲು ದೇಶೀಯ ಮಾರುಕಟ್ಟೆಯನ್ನು ವಿದೇಶಿ ಉತ್ಪಾದಕರ ಹಾವಳಿಯ ವಿರುದ್ಧ ರಕ್ಷಿಸಬೇಕಾಗುತ್ತದೆ. ಆದ್ದರಿಂದ, ಸರ್ಕಾರದ ಮಧ್ಯಪ್ರವೇಶ ಇದ್ದಾಗಲೂ ಸಹ ಮುಕ್ತ ವ್ಯಾಪಾರವು ದೇಶೀಯ ಉತ್ಪಾದಕರಿಗೆ ಪ್ರಯೋಜನಕಾರಿಯಾಗುವುದಿಲ್ಲ.

ಇಂದಿನವರೆಗೂ ಮತ್ತೆ-ಮತ್ತೆ ತಲೆ ಚಿಟ್ಟು ಹಿಡಿಯುವ ಮಟ್ಟಿಗೆ ಮುಂದಿಡುತ್ತಿರುವ ಈ ಮುಕ್ತ ವ್ಯಾಪಾರ ವಾದವು, ಒಟ್ಟಾರೆ ಬೇಡಿಕೆಯ ಕೊರತೆಯ ಸಾಧ್ಯತೆಯನ್ನು ನಿರ್ಲಕ್ಷಿಸುವುದರ ಮೇಲೆ ಆಧರಿತವಾಗಿದೆ. ಆದ್ದರಿಂದ, ಮಾರುಕಟ್ಟೆಯ ಅನ್ವೇಷಣೆಯು ಒಂದು ಅತ್ಯಂತ ವಾಸ್ತವ ಸಂಗತಿಯೂ ಹೌದು ಮತ್ತು ಅದು ಸಾಮ್ರಾಜ್ಯಶಾಹಿ ವಿದ್ಯಮಾನದ ಹಿಂದಿರುವ ಒಂದು ಮುಖ್ಯವಾದ ಕಾರಣವೂ ಹೌದು. ಮುಕ್ತ ವ್ಯಾಪಾರದ ವಾದವು, ಅಸಂಬದ್ಧವಾಗಿರುವ ಸೇ ನಿಯಮದ ಊಹನೆಯ ಮೇಲೆ ನಿಂತಿದೆ. ಆದ್ದರಿಂದ, ಮುಕ್ತ ವ್ಯಾಪಾರವು ಎಲ್ಲರಿಗೂ ಪ್ರಯೋಜನಕಾರಿ ಎಂದು ಬಿಂಬಿಸುವ ಮೂಲಕ ಸಾಮ್ರಾಜ್ಯಶಾಹಿಯ ಉದ್ದೇಶವನ್ನು ಮರೆಮಾಚಲಾಗುತ್ತದೆ.

ವಿಶೇಷವಾಗಿ ಗಮನಿಸಬೇಕಾದ ಒಂದು ಸಂಗತಿಯೆಂದರೆ, ಯಂತ್ರದಿಂದ ತಯಾರಿಸಿದ ವಸ್ತುಗಳನ್ನು ಮುಂದುವರೆದ ದೇಶಗಳಿಂದ ಆಮದು ಮಾಡಿಕೊಳ್ಳುವ ಮೂಲಕ ದೇಶೀಯ ಕರಕುಶಲ ಉತ್ಪಾದನೆಗೆ ಧಕ್ಕೆಯುಂಟಾಗಿ ವಸಾಹತುಶಾಹಿ ಅರ್ಥವ್ಯವಸ್ಥೆಗಳು ಅಪ-ಕೈಗಾರಿಕೀಕರಣಕ್ಕೊಳಗಾದವು ಎಂಬ ಐತಿಹಾಸಿಕ ಅಂಶವು ಎಲ್ಲರಿಗೂ ಗೊತ್ತಿದ್ದರೂ ಸಹ, ಈ ಮುಕ್ತ ವ್ಯಾಪಾರದ ವಾದವನ್ನು ಮುಂದೊಡ್ಡಲಾಗುತ್ತಿದೆ ಮತ್ತು ಅದು ಪ್ರಚಲಿತವೂ ಆಗಿದೆ. ಮೂರನೇ ಜಗತ್ತಿನಲ್ಲಿ ಕಂಡುಬರುವ ಸಾಮೂಹಿಕ ಬಡತನವನ್ನು ಮುಂದುವರೆದ ದೇಶಗಳೊಂದಿಗಿನ ಅವುಗಳ ವ್ಯಾಪಾರದಿಂದ ಬೇರ್ಪಡಿಸಿ, ಮುಕ್ತ ವ್ಯಾಪಾರವು ಎಲ್ಲರಿಗೂ ಪ್ರಯೋಜನಕಾರಿ ಎಂದು ಸೈದ್ಧಾಂತಿಕವಾಗಿ ಪ್ರಸ್ತುತಪಡಿಸುವ ಮೂಲಕ ವಸಾಹತುಗಳ ಅಪ-ಕೈಗಾರಿಕೀಕರಣದ ಅಂಶವನ್ನು ನಿರ್ಲಕ್ಷಿಸುವುದೇ ಮುಖ್ಯಧಾರೆಯ ಅರ್ಥಶಾಸ್ತ್ರದ ಪ್ರಯತ್ನವಾಗಿದೆ.

ಆದ್ದರಿಂದ ಮುಖ್ಯಧಾರೆಯ ಆರ್ಥಿಕ ಸಿದ್ಧಾಂತದಲ್ಲಿ ಸಾಮ್ರಾಜ್ಯಶಾಹಿಯ ಅಗತ್ಯ ಮತ್ತು ಅದು ವಹಿಸಿದ ಪಾತ್ರ ಈ ಎರಡನ್ನೂ ಮುಚ್ಚಿಡುವ ಒಂದು ಕುಟಿಲ ಪ್ರಯತ್ನವಿದೆ. ಮತ್ತು ಇದು ಒಂದು ಸೈದ್ಧಾಂತಿಕ ಯೋಜನೆ. ❍

NEW No. MAG(3)/NPP/205/2021-2022
JANASHAKTHI KANNADA VARA PATRIKE November 11-17, 2024 Price: Rs. 10/- Date of Publication: 08 November 2024 RNI No. KARKAN /2006/17926 Posted on 11-11-2024
Posted at BG PSO, BG - 560026 **Posted at Periodical Rate -** Rs. 2

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**